ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 26

ನವೆಂಬರ್ 25, 2007

ಕನ್ನಡ ವಾರಪತ್ರಿಕೆ

ರೂ. 5/-

ಪೇಜ್ 9

ಸಂವಿಧಾನೇತರ ಶಕ್ತಿ ಆರ್‌ಎಸ್‌ಎಸ್ ಕೈಗೆ ಆಡಳಿತದ ಚುಕ್ಕಾಣಿ




ಪೇಜ್ 8



ಪೇಜ್ 5

ಅಕ್ರಮ-ಸಕ್ರಮ ದೋಚುವ ದುರಾಕ್ರಮ



ನಂದಿಗ್ರಾಮ : ತೃಣಮೂಲ, ಮಾವೋವಾದಿಗಳ ಹಿಂಸೆ ವಿರುದ್ಧ ತಿರುಗಿ ಬಿದ್ದ ಜನಶಕ್ತಿ



ಜಾಗತೀಕರಣಕ್ಕೆ ಮಹಿಳೆಯರ ಸವಾಲು

‘ಅವ್ವ ಬೇ ಸಂಸ್ಕೃತಿ ಕಣ್ಮರೆಯಾಗುತ್ತಿದೆ’

ಕರ್ನಾಟಕ ರಾಜ್ಯೋತ್ಸವದ ಹಿನ್ನೆಲೆಯಲ್ಲಿ ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದ್ದ ಸ್ವಾತಂತ್ರ್ಯ ಹೋರಾಟಗಾರರೂ ಆಗಿರುವ ಹಾವೇರಿಯ **ಶ್ರೀ ಪಂಚಾಕ್ಷರಿ ವಳಸಂಗದ** ವರನ್ನು ‘ಜನಶಕ್ತಿ’ಗಾಗಿ ಸಂದರ್ಶಿಸಿದಾಗ



ಪ್ರಶ್ನೆ : ನೀವು ಸ್ವಾತಂತ್ರ್ಯ ಚಳುವಳಿಗೆ ಆಕರ್ಷಿತರಾದದ್ದು ಯಾವಾಗ ಮತ್ತು ಹೇಗೆ?

ಉತ್ತರ: ನಾನು ಹುಟ್ಟಿದ್ದು 18.8.1918 ರಂದು ಸ್ಥಳ ಹಾವೇರಿ, ನನ್ನ ತಾಯಿ ಬಸಮ್ಮ ನಾನು ನಾಲ್ಕು ವರ್ಷದವನಾಗಿದ್ದಾಗ ನಿಧನರಾಗಿದ್ದರು. ನನ್ನ ತಂದೆ ರೇವಪ್ಪ ನಾನು 8 ವರ್ಷದವನಾಗಿದ್ದಾಗ ನಮ್ಮನ್ನು ಅಗಲಿದರು. ನನ್ನ ಅಣ್ಣ ಚನ್ನಬಸಪ್ಪ ಶಿರ್ಸಿಯ ಹುಂದ್ರಾಳ ಅವರ ಮನೆಯಲ್ಲಿ ದುಡಿಯುತ್ತಿದ್ದನು. ತಂದೆ ತೀರಿಕೊಂಡ ನಂತರ ಕೆಲ ಕಾಲ ವಾರದ ಮನೆ ಊಟ ಮಾಡಿಕೊಂಡು ಇದ್ದೆ.

ನನ್ನ ತಂದೆ ಹತ್ತಿ ವ್ಯಾಪಾರ ಮಾಡುತ್ತಿದ್ದರು. ವ್ಯಾಪಾರದಲ್ಲಿ ನಷ್ಟಕ್ಕೆ ಒಳಗಾಗಿ ತನ್ನ ಸ್ಥಿತಿಗತಿಗಳನ್ನು ಕಳೆದುಕೊಂಡರು. ಆಗ ಹೊಸಮನಿ ಸಿದ್ದಪ್ಪನವರು ಹಾವೇರಿ ನಗರಸಭೆಯ ಅಧ್ಯಕ್ಷರಾಗಿದ್ದರು. ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಮಹನೀಯರಲ್ಲಿ ಒಬ್ಬರಾಗಿದ್ದ ಹೊಸಮನಿ ಸಿದ್ದಪ್ಪನವರು ಮಾನವೀಯ ಅನುಕಂಪದ ಸಾಕಾರ ಮೂರ್ತಿಯಾಗಿದ್ದರು. ಅವರು ನನ್ನ ತಂದೆಯವರಿಗೆ ನಗರಸಭೆಯ ಸುಂಕದಕಟ್ಟೆಯಲ್ಲಿ ಕೆಲಸ ಕೊಡಿಸಿದ್ದರು. ನನ್ನ ತಂದೆಯವರು ನಿಧನರಾದ ಬಳಿಕ ನನ್ನನ್ನು ಕರೆದುಕೊಂಡು ಹಾವೇರಿಯಲ್ಲಿರುವ ಹುಕ್ಕೇರಿ ಮಠದಲ್ಲಿ ಇಟ್ಟರು.

ಹುಕ್ಕೇರಿ ಮಠದ ಶಿವಬಸವ ಸ್ವಾಮಿಗಳು ರಾಷ್ಟ್ರೀಯ ಮನೋಭಾವ ಉಳ್ಳವರಾಗಿದ್ದರು. ಅಷ್ಟೊತ್ತಿಗೆ ಹಾವೇರಿಯಲ್ಲಿ ಹಲವಾರು ಜನ ಯುವಕರು ‘ಭಾರತೀಯ ತರುಣ ಸಂಘ’ ವನ್ನು ಸ್ಥಾಪನೆ ಮಾಡಿಕೊಂಡು ರಾಷ್ಟ್ರದ ಬಗೆಗೆ ಚಿಂತನೆ ಮಾಡಲು ಆರಂಭಿಸಿದ್ದರು. ಹೊಸಮನಿ ಸಿದ್ದಪ್ಪನವರೇ ಅದರ ಕೇಂದ್ರ ಬಿಂದು ಆಗಿದ್ದರು. 1930 ರಲ್ಲಿ ಬ್ರಿಟಿಷ್ ನ್ಯಾಯ ಮಂಡಳಿಯಿಂದ ಭಗತ್‌ಸಿಂಗ್ ಮರಣದಂಡನೆಗೆ ಗುರಿಯಾದಾಗ ಹಾವೇರಿಯಲ್ಲಿ ಹೊಸಮನವಿ ಸಿದ್ದಪ್ಪನವರ ನೇತೃತ್ವದಲ್ಲಿ ಹರ್ತಾಳ ಆಚರಿಸಲಾಗಿತ್ತು. ಅಂದು ಬೀದಿಗಳಲ್ಲಿ ಮೆರವಣಿಗೆ ಹೊರಟವರ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದ್ದರು. ಚಿಕ್ಕ ಹುಡುಗನಾಗಿ ಈ ಎಲ್ಲ ಬೆಳವಣಿಗೆಗಳನ್ನು ಗಮನಿಸುತ್ತಿದ್ದ ನನ್ನೊಳಗೆ ದೇಶಕ್ಕಾಗಿ ಹೋರಾಡಬೇಕೆನ್ನುವ ಸಣ್ಣ ಕಿಡಿಯೊಂದು ಹೊತ್ತಿಕೊಂಡಿತು.

ಪ್ರಶ್ನೆ: ನಿಮ್ಮ ಬಾಲ್ಯದ ಮರೆಯಲಾಗದ ಘಟನೆ ಯಾವುದಾದರೂ ಇದೆಯಾ?

ಉತ್ತರ : ಹಲವಾರು ಘಟನೆಗಳು ಸಂಭವಿಸಿವೆ. ಒಂದನ್ನು ಮಾತ್ರ ಈಗ ಹೇಳುತ್ತೇನೆ. ನಾನು ಆಗ 5ನೇ ತರಗತಿಯಲ್ಲಿ ಓದುತ್ತಿದ್ದೆ. ಆಗ ಶಾಲೆಗಳಲ್ಲಿ ಇಂಗ್ಲೀಷ್ ರಾಜನ ಫೋಟೋ ಅನ್ನು ತೂಗು ಹಾಕಲಾಗುತ್ತಿತ್ತು. ತರಗತಿಗಳು ಆರಂಭವಾಗುವ ಮೊದಲು ರಾಜನ ಯೋಗಕ್ಷೇಮಕ್ಕಾಗಿ ಪ್ರಾರ್ಥನೆ ಮಾಡಿಸಲಾಗುತ್ತಿತ್ತು. ನಾನು ಬರಬರುತ್ತಾ ಪ್ರಾರ್ಥನೆಯ ಸಮಯದಲ್ಲಿ ಸುಮ್ಮನಿರಲಾರಂಭಿಸಿದೆ. ಶಾಲೆಗೆ ರಜೆ ಇದ್ದ ಅದೊಂದು ದಿನ ನಾವು ಕೆಲವು ಹುಡುಗರು ಸೇರಿಕೊಂಡು ಶಾಲೆಯ ಕೀಲಿ ಒಡೆದು ‘ಜಾರ್ಜ್ ಬಾಷಾ’ನ ಫೋಟೋ ಅನ್ನು ಹೊರತಂದು ಅದನ್ನು ಒಡೆದು ಹಾಕಿ ದೂರ ಎಸೆದಿದ್ದೆವು. ಆದರೆ ಈ ವಿಷಯ ಗುಟ್ಟಾಗಿ ಉಳಿಯಲಿಲ್ಲ. ನನ್ನನ್ನು ಶಾಲೆಯಿಂದ ಹೊರ ಹಾಕಲಾಯಿತು. ಸುಮಾರು 6 ತಿಂಗಳ ನಂತರ ನಗರದ ಪ್ರಮುಖರು ‘ಸಣ್ಣ ಹುಡುಗ, ತಿಳಿಯದೆ ತಪ್ಪು ಮಾಡಿದ್ದಾನೆ’ ಎಂದು ಹೇಳಿ ಶಾಲೆಗೆ ಸೇರಿಸಿದರು.

ಪ್ರಶ್ನೆ: ನೇತಾಜಿ ಸುಭಾಸ್‌ಚಂದ್ರಬೋಸ್ ಅವರು ಹಾವೇರಿಗೆ ಬಂದದ್ದು ಯಾವಾಗ?

ಉತ್ತರ : ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಏರ್ಪಟ್ಟಿತ್ತು. ಅಧಿಕೃತ ಅಭ್ಯರ್ಥಿ ಡಾ: ಪಟ್ಟಾಭಿ ಸೀತಾರಾಮಯ್ಯ ಅವರ ವಿರುದ್ಧವಾಗಿ ಸುಭಾಸ್‌ಚಂದ್ರ ಬೋಸ್ ಸ್ಪರ್ಧೆಗಿಳಿದಿದ್ದರು. ಕರ್ನಾಟಕದ ಮತವೇ ನಿರ್ಣಾಯಕವೆನಿಸಿತು. ಅದು ಸುಭಾಸರ ಪರವಾಗಿತ್ತು. ಗಾಂಧಿ, ನೆಹರು, ಪಟೇಲರು ದಿಗ್ಭ್ರಮೆಗೊಳಗಾದರು. ಆಗ ಪ್ರದೇಶ ಕಾಂಗ್ರೆಸ್ ಸಮಿತಿಗೆ ಹೊಸಮನಿ ಸಿದ್ದಪ್ಪನವರು ಅಧ್ಯಕ್ಷರಾಗಿದ್ದರು. ಭಾರತದ ಪ್ರಾಂತೀಯ ಅಧ್ಯಕ್ಷರಲ್ಲಿ ಹೊಸಮನಿ ಸಿದ್ದಪ್ಪನವರೊಬ್ಬರೇ ಸುಭಾಸ್‌ರನ್ನು ಬೆಂಬಲಿಸಿದ್ದರು. 1936ರಲ್ಲಿ ಅವರು ಹಾವೇರಿಗೆ ಧಾವಿಸಿ ಬಂದರು.

ಸುಭಾಸ್ ಮತ್ತು ಹೊಸಮನಿಯವರ ಸಮಾಗಮವು ಒಂದು ಅಪೂರ್ವ ದೃಶ್ಯವಾಗಿತ್ತು. ನನಗೆ ಅದೊಂದು ಮರೆಯಲಾಗದ ಅನುಭವ. ಸುಭಾಸರ ವ್ಯಕ್ತಿತ್ವ, ಅವರ ತೇಜಸ್ಸು ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದವು. ಅವರನ್ನು ಮುಟ್ಟಬೇಕೆನ್ನುವ ಆಸೆ. ಕೊನೆಗೂ ಹಿಂದಿನಿಂದ ಹೋಗಿ ಅವರ ಅಂಗಿಯನ್ನು ಮುಟ್ಟಿ ನಾನು ಕೃತಾರ್ಥನಾದೆ. ಆಗ ತೆಗೆಯಲಾದ ಒಂದು ಫೋಟೋದಲ್ಲಿ ಮೈಲಾರ ಮಹದೇವಪ್ಪ ಹಾಗೂ ನಾನೂ ಇದ್ದೇನೆ. ಸುಭಾಸ್ ಬಂದು ಹೋದ ಸ್ಥಳಕ್ಕೆ ‘ಸುಭಾಸ್ ಸರ್ಕಲ್’ ಎಂದು ಹೆಸರಿಡಲಾಯಿತು.


ಬೋಸರು ಕರ್ನಾಟಕ ಸಂಚಾರ ಮುಗಿಸಿ ಕಲ್ಕತ್ತೆಗೆ ಮರಳಿ ಹೋದ ಮೇಲೆ ತಮ್ಮ ‘ಫಾರ್ವರ್ಡ್ ಬ್ಲಾಕ್’ ಪತ್ರಿಕೆಯಲ್ಲಿ ಹೊಸಮನಿಯವರ ಬಗ್ಗೆ ಬರೆಯುತ್ತಾ ‘ಹೊಸಮನಿಯವರು ನಾನು ಕಂಡ ಅಪರೂಪದ ವ್ಯಕ್ತಿ. ನನಗೆ ಅವರು ರಾಜಕೀಯ ಸ್ಫೂರ್ತಿಯನ್ನು ಒದಗಿಸಿಕೊಟ್ಟಿದ್ದಾರೆ. ಅವರ ಸಭ್ಯತೆ, ಪ್ರಾಮಾಣಿಕತೆ, ದೇಶಾಭಿಮಾನ, ಎದೆಗಾರಿಕೆ ಹಾಗೂ ವಿಶಾಲ ಮನೋಭಾವನೆಗಳು ರಾಷ್ಟ್ರಕ್ಕೆ ಮಾರ್ಗದರ್ಶಕವಾಗಿವೆ’ ಎಂದಿದ್ದರು.

ಇತ್ತ ಕಾಂಗ್ರೆಸ್ ವರಿಷ್ಠ ಮಂಡಳಿಯಿಂದ ನೋಟೀಸ್ ಒಂದನ್ನು ಹೊರಡಿಸಲಾಗಿತ್ತು ‘ಕಾಂಗ್ರೆಸ್‌ನಿಂದ ಸಿಡಿದು ನಿಂತ ಬೋಸರಿಗೆ ಹಾವೇರಿಯಲ್ಲಿ ಸನ್ಮಾನಿಸಿದ್ದರ ವಿರುದ್ಧ ಶಿಸ್ತಿನ ಕ್ರಮ ಕೈಕೊಳ್ಳಬಾರದೇಕೆ?’ ನೇರವಾಗಿ ಹೊಸಮನಿಯವರನ್ನು ಯಾರೂ ಕೇಳುವಂತಿರಲಿಲ್ಲ, ಹೀಗಾಗಿ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಮಹದೇವಪ್ಪ ಮೈಲಾರರಿಗೆ ನೋಟೀಸ್ ಜಾರಿಯಾಯಿತು. ‘ಊರಿಗೆ ಬಂದ ಸ್ವಾತಂತ್ರ್ಯ ವೀರನನ್ನು ಸನ್ಮಾನಿಸಲು ಪಕ್ಷದ ಅವಶ್ಯಕತೆ ಇಲ್ಲ. ಪಕ್ಷಕ್ಕಿಂತ ರಾಷ್ಟ್ರ ದೊಡ್ಡದು ಎನ್ನುವ ಭಾವನೆಯನ್ನು ಕಾಂಗ್ರೆಸ್ ಕಳೆದುಕೊಳ್ಳಬಾರದು’ ಎಂದು ಹೊಸಮನಿಯವರು ನೋಟೀಸಿಗೆ ಉತ್ತರ ಬರೆಯಿಸಿದರು. ಶಿಸ್ತು ಕ್ರಮದ ಪ್ರಶ್ನೆ ಅಲ್ಲಿಗೆ ನಿಂತಿತು.

ಪ್ರಶ್ನೆ: ನೀವು ಪೂರ್ಣ ಪ್ರಮಾಣದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದ್ದು ಯಾವಾಗ?

ಉತ್ತರ : ದ್ವಿತೀಯ ಮಹಾಯುದ್ಧದ ಕಾವು ಹೆಚ್ಚಾದಂತೆ, ಎಲ್ಲೆಡೆ ಚಳುವಳಿ ತೀವ್ರಗೊಂಡಿತ್ತು. ಹಾವೇರಿ ಸುತ್ತಮುತ್ತ ತರುಣರು ದೊಡ್ಡ ಸಂಖ್ಯೆಯಲ್ಲಿ ರಾಷ್ಟ್ರೀಯ ಚಳುವಳಿಗೆ ಆಕರ್ಷಿತರಾಗಿ ಸೇರತೊಡಗಿದ್ದರು. ಅವರೆಲ್ಲರಿಗೂ ಹೊಸಮನಿಯವರೇ ಮಾರ್ಗದರ್ಶಕ ರಾಗಿದ್ದರು. ‘ಕೇವಲ ಚಿಂತನೆ ಮಾಡುವ ಕಾಲ ಇದಲ್ಲ. ಸಂಘರ್ಷ ನಡೆಸುವ ಕಾಲ ಬಂದಿದೆ. ಬಿಸಿಯಾಗದೆ ಬೆಣ್ಣೆ ಕರಗದು’ ಎಂಬ ಹೊಸಮನಿಯವರ ವಿಶ್ಲೇಷಣೆ ಅವರ ಮಾತನ್ನು ಆಲಿಸಿದವರೆಲ್ಲರ ಮನ ಮುಟ್ಟುತ್ತಿತ್ತು.

ನಾವು ಬಾಂಬ್ ತಯಾರಿಸಲು ಕಲಿತೆವು. ಚಾವಡಿ ಸುಡುವುದು, ತಾಲ್ಲೂಕು ಕಛೇರಿಗಳನ್ನು ವಶಪಡಿಸಿಕೊಳ್ಳುವುದು, ಉಗ್ರಾಣಗಳ ಕೀಲಿ ಒಡೆಯುವುದು, ಟಪ್ಪಾಲು ಲೂಟಿ ಮಾಡುವುದು, ಮೊದಲಾದ ಕಾರ್ಯಗಳನ್ನು ನಾವು ಹಂಚಿಕೊಂಡು ಮಾಡುತ್ತಿದ್ದೆವು. 1942ರಲ್ಲಿ ‘ಮಾಡು ಇಲ್ಲವೆ ಮಡಿ’



ಆದೇಶ ಹೊರಟಿತ್ತು. ಬ್ರಿಟಿಷರು ಸಿಕ್ಕಸಿಕ್ಕವರನ್ನು ಬಂಧಿಸುತ್ತಿದ್ದರು.

ಹೊಸರೀತಿಯಲ್ಲಿ ಹಪ್ತೆ ಲೂಟಿ ಮಾಡುವ ಕಾರ್ಯಕ್ರಮ ರೂಪಿಸಲಾಗಿತ್ತು. ಮೈಲಾರ ಮಹದೇವಪ್ಪ ಮತ್ತು ಸಂಗಡಿಗರಿಗೆ ಈ ಜವಾಬ್ದಾರಿ ವಹಿಸಿಕೊಡಲಾಗಿತ್ತು. ಅಂದು ರಾತ್ರಿ ಮಜೀದ್ ಫೌಜ್‌ದಾರ್ ಸಿವಿಲ್ ಡ್ರೆಸ್ ಹಾಕಿಕೊಂಡು ಕೊರಡೂರಿಗೆ ಬಂದು ಮೈಲಾರ ಮಹದೇವಪ್ಪನವರ ಮುಂದೆ ಬಿಕ್ಕಿ ಬಿಕ್ಕಿ ಅಳತೊಡಗಿದರು. ಕಂಡಲ್ಲಿ ಗುಂಡಿಕ್ಕಲು ಆದೇಶವಾಗಿದೆ ಎಂದು ಮಹದೇವಪ್ಪನವರಿಗೆ ತಿಳಿದದ್ದೆ ಆಗ. ಹಪ್ತೆ ಲೂಟಿ ಕಾರ್ಯಕ್ರಮವನ್ನು ಕೈಬಿಡುವಂತೆ ಮಜೀದ್ ಅವರು ಮಹದೇವಪ್ಪನವರಲ್ಲಿ ಪರಿ ಪರಿಯಾಗಿ ಬೇಡಿಕೊಂಡರು. ಆದರೆ ಮಹದೇವಪ್ಪ ಒಪ್ಪಲಿಲ್ಲ. ‘ನಾವು ಸಾವನ್ನು ಕಟ್ಟಿಕೊಂಡೇ ಬಂದಿರುತ್ತೇವೆ. ನನ್ನ ಬಲಿದಾನದಿಂದ ಸ್ವಾತಂತ್ರ್ಯ ಸಿಗುವುದಾದರೆ ನಾನು ಹುಟ್ಟಿದ್ದು ಸಾರ್ಥಕವಾಯಿತು ಎಂದುಕೊಳ್ಳುತ್ತೇನೆ’ ಎಂದಾಗ ಮಜೀದ್ ಅವರು ದುಃಖದಿಂದ ಹಿಂತಿರುಗಿದರು.

ಸ್ಥಳೀಯ ಪೋಲೀಸರು ಆದೇಶ ಜಾರಿ ಮಾಡಲಾರರು ಎಂದು ಮಹಾರಾಷ್ಟ್ರದಿಂದ ಪೋಲಿಸರನ್ನು ತರಲಾಗಿತ್ತು. ಮಹದೇವಪ್ಪನವರು ಪೂರ್ವ ನಿರ್ಧಾರದಂತೆ ಬಂಡಿ ಕಟ್ಟಿಸಿಕೊಂಡು, ಗೋಣೆಪ್ಪ ತಿರಕಪ್ಪ ವೀರಯ್ಯ, ಚಂದುಸಾಬ್, ಹಡಪದ ಮುದುಕಪ್ಪ ಮೊದಲಾದವರೊಂದಿಗೆ ಹೊರಟಿದ್ದರು. ಕಛೇರಿ ಆಸುಪಾಸಿನಲ್ಲಿ ಪೋಲೀಸರು ಅಡಗಿ ಕುಳಿತಿದ್ದರು. ಬಂಡಿ ಕಛೇರಿಯನ್ನು ಸಮೀಪಿಸುತ್ತಿದ್ದಂತೆ ಪೋಲೀಸರು ಹಾರಿಸಿದ ಗುಂಡುಗಳಲ್ಲಿ ಒಂದು ತಿರಕಪ್ಪನ ಕಣ್ಣಿಗೆ ನಾಟಿತು. ಇನ್ನೊಂದು ಗುಂಡು ಮಹದೇವಪ್ಪನವರ ಎದೆಯನ್ನು ಹೊಕ್ಕಿತು. ಇಬ್ಬರು ಸ್ವಲ್ಪ ಕಾಲ ಒದ್ದಾಡಿ ಸ್ಥಳದಲ್ಲೇ ಪ್ರಾಣ ಬಿಟ್ಟರು. ಬೆನೆಟ್‌ನಿಂದ ಹೊಡೆದು ಮಾರಣಾಂತಿಕವಾಗಿ ಗಾಯಗೊಂಡಿದ್ದ ವೀರಯ್ಯ ಹಾವೇರಿಗೆ ಸಾಗಿಸುವಾಗ ದಾರಿಯಲ್ಲಿ ನಿಧನರಾದರು.

1943 ಏಪ್ರಿಲ್ 1, ಗುರುವಾರ, ಮರಣೋತ್ತರ ಪರೀಕ್ಷೆಯ ನಂತರ ಶವಗಳನ್ನು ಅವರ ಸಂಬಂಧಿಕರಿಗೆ ನೀಡಲಿಲ್ಲ. ಕಸ ಹೇರುವ ಗಾಡಿಯಲ್ಲಿ ಮೂರು ಶವಗಳನ್ನು ಹಾಕಿ ಊರ ಹೊರಗಿನ ಸ್ಮಶಾನದಲ್ಲಿ ಒಂದೇ ಹೊಂಡದಲ್ಲಿ ಮೂರು ಶವಗಳನ್ನು ಹಾಕಿ ಹೂಳಲಾಯಿತು. ನಾವು ಮೂರು ಜನ ದನ ಕಾಯುವವರಂತೆ ನಟಿಸಿಕೊಂಡು ಹುತಾತ್ಮ ಮೈಲಾರ ಮಹದೇವಪ್ಪ ಮತ್ತು ಸಂಗಡಿಗರ ಅಂತ್ಯಕ್ರಿಯೆಯನ್ನು ವೀಕ್ಷಿಸಿದೆವು. ಅಂದಿನಿಂದ ಸಕ್ರಿಯ ಕಾರ್ಯಕರ್ತರೆಲ್ಲ ಭೂಗತರಾದರು. ಆದರೆ ನಮ್ಮಲ್ಲಿ ಅನೇಕರು ಸಿಕ್ಕಿಬಿದ್ದರು. ಮುರಗೋಡ ಮಹದೇವಪ್ಪನವರು ಪೋಲಿಸರ ಕೈಗೆ ಸಿಕ್ಕಿಬಿದ್ದರು. ಮೆಣಸಿನ ಹಾಳ ತಿಮ್ಮನ ಗೌಡರು ಪೋಲೀಸ್ ಹಲ್ಲೆಯಲ್ಲಿ ಮರಣ ಹೊಂದಿದರು. ಸಂಗೂರ ಕರಿಯಪ್ಪನವರು ಕೈಯಲ್ಲಿ ಬಾಂಬ್ ಸ್ಫೋಟಗೊಂಡ ಕಾರಣದಿಂದ ಕೈ ಕಳೆದುಕೊಂಡು ಆಸ್ಪತ್ರೆಯಲ್ಲಿದ್ದಾಗ ಸೆರೆ ಸಿಕ್ಕರು. ನನ್ನನ್ನು ಅಂದಿನ ಚಿತ್ರದುರ್ಗ ಜಿಲ್ಲೆಯ ಶಿವನಿಯಲ್ಲಿ ಬಂಧಿಸಿದರು. ಬಾಂಬ್ ಪ್ರಕರಣದಲ್ಲಿ ನನಗೆ ಒಂದುವರೆ ವರ್ಷ ಶಿಕ್ಷೆಯಾಯಿತು.

ಜೈಲಿನಿಂದ ಹೊರ ಬಂದ ನಂತರ, ಮೈಲಾರ ಮಹದೇವಪ್ಪನನ್ನು ಗುಂಡು ಹಾರಿಸಿ ಕೊಲೆ ಮಾಡಿದ್ದ ಮಹಾರಾಷ್ಟ್ರದ ಪೋಲೀಸ್ ನಾಮದೇವ ಪಾಟೀಲ್‌ನನ್ನು ಹುಡುಕಿಕೊಂಡು ಹೋಗಿದ್ದೆವು. ತಬಲದೊಳಗೆ ಪಿಸ್ತೂಲ್ ಇಟ್ಟುಕೊಂಡಿದ್ದೆವು. ಆತ ಟಿ.ಬಿ. ಕಾಯಿಲೆಯಿಂದ ಆಸ್ಪತ್ರೆಯಲ್ಲಿದ್ದಾನೆ ಎಂಬುದನ್ನು ಪತ್ತೆ ಹಚ್ಚಿ ಅಲ್ಲಿಗೆ ಹೋಗಿದ್ದೆವು. ಆದರೆ ಆತ ಸತ್ತು ಹೋಗಿ ಎರಡು ದಿನಗಳಾಗಿದ್ದವು ಎಂದು ಹೇಳಿದಾಗ ಬೇಸರದಿಂದ ಹಿಂತಿರುಗಿದೆವು.

ಪ್ರಶ್ನೆ : ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ನಿಮ್ಮ ಪಾತ್ರ ?

ಉತ್ತರ : ಸ್ವಾತಂತ್ರ್ಯ ಬಂದೊಡನೆಯೇ ಸುಲಭವಾಗಿ ಭಾಷಾವಾರು ಪ್ರಾಂತ್ಯ ರಚನೆ ಆಗಿಬಿಡುತ್ತದೆ ಎಂದು ನಂಬಿದವರಿಗೆ ಭ್ರಮನಿರಸನವಾಯಿತು. ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ನಮಗೆ ಹೊಸಮನಿ ಸಿದ್ದಪ್ಪನವರೇ ಮಾರ್ಗದರ್ಶಕರಾಗಿದ್ದರು. ‘ದೇಶಕ್ಕೆ

ಪುಟ 4 ಕ್ಕೆ

ಸಂಪಾದಕೀಯ

ಗೋವಿನ ಹೆಸರಿನಲ್ಲೇ.....

ದಕ್ಷಿಣ ಭಾರತದಲ್ಲಿಯೇ ಕರ್ನಾಟಕವನ್ನು ತನ್ನ ಬೆಳವಣಿಗೆ ಒಂದು ಪ್ರಮುಖ ಆದ್ಯತೆಯನ್ನಾಗಿ ಪರಿಗಣಿಸಿರುವುದು ತಿಳಿದ ಸಂಗತಿಯೇ ಆಗಿದೆ. ಅದು ಕರ್ನಾಟಕಕ್ಕೆ ಗುಜರಾತ್‌ನ ಮಾದರಿಯನ್ನು ಮುಂದಿಡುತ್ತಾ ಬಂದಿರುವ ಪರಿವಾರ ಅದಕ್ಕಾಗಿ 'ತ್ರಿಶೂಲ'ದ ಕಾರ್ಯಾಚರಣೆಗೆ ಇಳಿದಿರುವುದನ್ನು ಹಲವು ಬಾರಿ ಬಹಿರಂಗಗೊಳಿಸಲಾಗಿದೆ.

ತೀರಾ ಇತ್ತೀಚಿನ ಒಂದು ತಿಂಗಳ ಒಳಗೆ ಸಂಘ ಪರಿವಾರದ ಸಭೆಗಳು ಹಲವಾರು ಆತಂಕ ಹುಟ್ಟಿಸುವಂತಹವುಗಳಾಗಿವೆ. ತಿಂಗಳ ಹಿಂದೆ ಬೆಂಗಳೂರಿನಲ್ಲಿ ಆರ್.ಎಸ್.ಎಸ್. ಸಂಘಟನೆಗಳ ನಾಯಕರ ಸಭೆ ಬೆಂಗಳೂರಿನಲ್ಲಿ ನಡೆದಿತ್ತು. ಅದಾದ ಬಳಿಕ ಈಗ ಉತ್ತರ ಕರ್ನಾಟಕದ ಹುಬ್ಬಳ್ಳಿಯಲ್ಲಿ ರಾಷ್ಟ್ರೀಯ ಮಟ್ಟದ ಪ್ರಮುಖರ ಸಭೆ ನಡೆದಿದೆ.


ಈ ಸಭೆಗಳಲ್ಲಿ ಆರ್.ಎಸ್.ಎಸ್.ನ ಗುರಿ ಸಾಧನೆಗೆ ಕೈಗೊಳ್ಳಬೇಕಾದ ಕಾರ್ಯಾಚರಣೆಯ ರೂಪುರೇಷೆಗಳು, ಅದರಲ್ಲೂ ಉತ್ತರಕರ್ನಾಟಕವನ್ನು ಒಳಗೊಂಡಂತೆ ರಾಜ್ಯದಲ್ಲಿ ಚಟುವಟಿಕೆ ತೀವ್ರಗೊಳಿಸುವುದು ಇರುವುದಾಗಿ ವರದಿಯಾಗಿದೆ. ಅಂದರೆ ಬಿಜೆಪಿ ಶಕ್ತಿಯುತವಾಗಿರುವಲ್ಲಿ ಆರ್‌ಎಸ್‌ಎಸ್ ಪರಿವಾರದ ನೆಲೆಯನ್ನು ದೃಢಗೊಳಿಸುವುದು ಅದರ ಕಾರ್ಯತಂತ್ರದಲ್ಲಿದೆ.

ಇತ್ತೀಚಿಗೆ ಮತ್ತೆ ಬಾಬಾಬುಡನ್‌ಗಿರಿಯ ಪ್ರಶ್ನೆಯನ್ನು ಮತ್ತೆ ಕೆದಕಿ ಡಿಸೆಂಬರ್ ಕೊನೆಯವರೆಗೂ ದತ್ತ ಜಯಂತಿ ಹೆಸರಿನಲ್ಲಿ ಜೀವಂತವಾಗಿಟ್ಟಿದೆ.


ಇದರ ಬೆನ್ನಲ್ಲಿ ಬೆಂಗಳೂರಿನಲ್ಲಿ ರಾಮಚಂದ್ರಪುರ ಮಠ ಯೋಜಿಸಿರುವ ಗೋ ಸಂರಕ್ಷಣಾ ನೀರಾಜನವೆಂಬ ಕಾರ್ಯಕ್ರಮ ಅತ್ಯಂತ ಗಂಭೀರ ಪರಿಣಾಮ ಬೀರುವ ಕಾರ್ಯಕ್ರಮವಾಗಿದೆ. ಗೋ ಸಂರಕ್ಷಣೆಯ ಹೆಸರಿನಲ್ಲಿ ಎಲ್ಲಾ 'ಮಾತೆಯರ ಮಾತೆ ಗೋಮಾತೆಗೆ 1 ಕೋಟಿ ದೀಪಗಳನ್ನು ಬೆಳಗುವ' ಕಾರ್ಯಕ್ರಮವೆಂದು, ಇದರಲ್ಲಿ 1 ಲಕ್ಷ ಮಹಿಳೆಯರನ್ನೇ ತೊಡಗಿಸಲು ಯೋಚಿಸಿರುವುದು. ಸಂಘ ಪರಿವಾರದ ಈ ಗೋಪೂಜೆ ಎಂಬುದು ಗೋವಿನ ಗುಣಗಾನಕ್ಕೆ ಸೀಮಿತವಾದುದಲ್ಲ. ಅಂತಿಮವಾಗಿ ಗೋಹತ್ಯೆಯಂತಹ ಪ್ರಶ್ನೆ, ಮತ್ತು ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸುವುದಕ್ಕೆ ಬಳಸುವುದು ಅದರ ಗುರಿ. ಈಗಾಗಲೇ ಕರಾವಳಿ ಜಿಲ್ಲೆಗಳಲ್ಲಿ 'ಮುಗ್ಧ ಗೋವು'ನ್ನೇ ನೆಪವಾಗಿಸಿಕೊಂಡು ಕೊಲೆಪಾತಕ ಧಾಳಿಗಳಿಗೆ, ಗಲಭೆಗಳನ್ನೆಬ್ಬಿಸಲು ಬಳಸುತ್ತಿರುವುದನ್ನು ಕಾಣುತ್ತಿದ್ದೇವೆ. ಈಗಲೂ ಅದನ್ನೇ ಇಡೀ ರಾಜ್ಯಾದಾದ್ಯಂತ ಹಬ್ಬಿಸಲು ಒಂದು ಪೂರ್ವ ಭಾವಿ ಮನೋಭೂಮಿಕೆಯಾಗಿ ಈ ಕಾರ್ಯಕ್ರಮ ಇರುವುದರಲ್ಲಿ ಅನುಮಾನವಿಲ್ಲ. ಮೊದಲು ಧಾರ್ಮಿಕ ನಂಬಿಕೆಗಳನ್ನು ಬಲಗೊಳಿಸುವುದು, ನಂತರ ಅದನ್ನು ಬೇಕಾದಂತೆ ಬಳಸುವುದು. ಈಗ ಬಿಜೆಪಿ ನೇತೃತ್ವದ ಸರ್ಕಾರ ಇರುವುದು ಅವರ ಕಾರ್ಯತಂತ್ರಕ್ಕೆ ಹೆಚ್ಚಿನ ಅವಕಾಶ ಒದಗಿಸಿದೆ.

ಇಂತಹ ಕಾರ್ಯತಂತ್ರಗಳ ಬಗ್ಗೆ ಜನತೆ ಎಚ್ಚರ ವಹಿಸಬೇಕಾಗಿದೆ. ಪ್ರತಿಯೊಬ್ಬರೂ ಅವರು ಬಯಸಿದಂತೆ ಧಾರ್ಮಿಕ ನಂಬಿಕೆ, ಆಚರಣೆ ಹೊಂದಬಹುದು. ಆದರೆ ಇನ್ನೊಬ್ಬರ ನಂಬಿಕೆ ಮೇಲೆ ಧಾಳಿ ನಡೆಸುವಂತೆ, ಸಾಮರಸ್ಯಕ್ಕೆ ವಿರುದ್ಧವಾಗಿ, ಅಲ್ಲ. ಇದೇ ರಾಮಚಂದ್ರಾಪುರ ಮಠದ ಸ್ವಾಮಿಗಳು 'ಗೋವುಗಳನ್ನು ಕಡಿಯುವವರನ್ನು ಕಡಿಯಿರಿ' ಎಂದೇ ಕರೆ ನೀಡಿ ತಾಲೀಬಾನ್‌ಗಳಂತೆ ಆರ್ಭಟಿಸಿದ್ದರು. ದಲಿತರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳ ಜನರ ಆಹಾರ ಪದ್ಧತಿಯ ಮೇಲೆ ಧಾಳಿ ಮಾಡುವ ಮೂಲಕ ಏಕ ಪ್ರಕಾರದ ಆಹಾರ ಪದ್ಧತಿ, ಆಚರಣೆಗೆ ದಬಾಯಿಸಿ, ವೈವಿಧ್ಯಮಯ ಆಚರಣೆ ಆಯ್ಕೆಗಳನ್ನು ನಿರ್ನಾಮ ಮಾಡಬಯಸುತ್ತಾರೆ. ಆ ಮೂಲಕ ದ್ವೇಷ ಹೆಚ್ಚಿಸಿ ವಿಭಜನೆಯ ಬೆಳೆ ಬೆಳೆಯುತ್ತಾರೆ. ಆದ್ದರಿಂದ ಇವುಗಳ ಬಗ್ಗೆ ಎಚ್ಚರ ಅಗತ್ಯ. ಅದು ಧಾರ್ಮಿಕ ಕಾರ್ಯಕ್ರಮವಾಗಿರದೇ ವಿಭಜನೆಗೆ ಪೂರ್ವೋಪಾದಿ ಮನೋಭಾವ ರೂಪಿಸುವ ಬಚ್ಚಿಟ್ಟ ಇಂತಹ ಕಾರ್ಯಕ್ರಮಗಳ ಅಜೆಂಡಾ ಬಗ್ಗೆ ಅರಿತು ತಿರಸ್ಕರಿಸಬೇಕು.

ಅಸ್ತವ್ಯಸ್ಥತತೆಗೆ ಹೊಣೆ ಯಾರು?



ರಾಜಧಾನಿ ಬೆಂಗಳೂರಿನಲ್ಲಿ ಪ್ರತಿಭಟನೆ, ರ‍್ಯಾಲಿಗಳನ್ನು ನಡೆಸುವುದು ನಾಗರೀಕರ ವಾಹನ ಸಂಚಾರಕ್ಕೆ ಸಂಚಕಾರ ಎಂಬಂತಹ ಚರ್ಚೆಗಳು ಪುನಃ ಜೀವ ಪಡೆದುಕೊಂಡಿವೆ. ಪ್ರಮುಖವಾಗಿ ಅಧಿಕಾರದ ಸಲುವಾಗಿಯೇ ಬಿಜೆಪಿ ಪಕ್ಷವು ಹಾದಿ ಬೀದಿ ರಂಪ ಮಾಡಿ, ಯುದ್ಧ, ಯಾತ್ರೆಗಳನ್ನು ಹಾಗೂ ರಾಜಭವನದ ಎದುರು ಬಲ ಪ್ರದರ್ಶನವನ್ನು ವಾರಗಟ್ಟಲೇ ನಡೆಸಿದ್ದು ಮರೆಯುವಂತಿಲ್ಲ. ಹಾಗೆಯೇ ಕಾಂಗ್ರೆಸ್ ಸಹ ತನ್ನದೂ ಒಂದು ಬಲ ಪ್ರದರ್ಶನವೆಂದು 'ಜನಾಂದೋಲನ'ವನ್ನು ನಡೆಸಿತು. ಇವುಗಳಿಗೆ ತದ್ವಿರುದ್ಧವಾಗಿ ಭಿನ್ನವೂ ಆಗಿರುವ ಕೃಷಿ ಕೂಲಿಕಾರರು, ರೈತರು ತಮ್ಮ ಜ್ವಲಂತ, ಸಮಸ್ಯೆಗಳನ್ನು ಪರಿಹರಿಸಲು ಆಗ್ರಹಿಸಿ ಬೃಹತ್ ರ‍್ಯಾಲಿಗಳನ್ನು ನಡೆಸಿದ್ದು ಸಹ ಗಮನಾರ್ಹ. ನಮ್ಮ ಮಾಧ್ಯಮಗಳು ಮತ್ತು ಸಿನಿಕತನದ ಟೀಕಾಕಾರರ ಆಕ್ರಮಣಕಾರಿ ದೃಷ್ಟಿ ಜನ ಚಳುವಳಿಗಳ ಮೇಲೆಯೇ ಎಂಬುದು ಹೊಸದೇನಲ್ಲ. ಈ ರಾಜಕೀಯ ದೊಂಬರಾಟಗಳ ಬಗ್ಗೆ ಎಲ್ಲೆಡೆ ಆಕ್ಷೇಪ ನೆಪಕ್ಕಷ್ಟೇ ಎಂಬಂತಿದೆ. ತಮ್ಮ ನೋವು, ಸಂಕಟ ಅಥವಾ ಅಹವಾಲುಗಳನ್ನು ಸಾರ್ವಜನಿಕವಾಗಿ ಅಭಿವ್ಯಕ್ತಿಗೊಳಿಸಿ, ಸರ್ಕಾರದ ಮುಂದೆ ಮಂಡಿಸಲು ರ‍್ಯಾಲಿ ಮೆರವಣಿಗೆ, ಸಭೆಗಳು ಅತ್ಯಂತ ಅಗತ್ಯ, ಅದು ಪ್ರಜಾಸತ್ತಾತ್ಮಕ ಹಕ್ಕು ಕೂಡ. ಇತ್ತೀಚಿಗೆ ನಡೆದ ರ‍್ಯಾಲಿಗಳು ಎರಡು ವಿಧದಲ್ಲಿವೆ. ಒಂದು ಜನರ ಸಂಕಷ್ಟಗಳ ಆಧಾರದಲ್ಲಿ, ಇನ್ನೊಂದು ರಾಜಕೀಯ ಬಲಾಬಲದ ಪ್ರದರ್ಶನದಲ್ಲಿ ಇಂತಹ ಪ್ರದರ್ಶನಗಳನ್ನು ಕಡಿವಾಣ ಹಾಕುವುದು ಅಸಾಧ್ಯವಾದರೂ ಅಂತಹ ರಾಜಕೀಯ ಪಕ್ಷಗಳೇ ಬೇಕಾದರೆ ಸ್ವಯಂ ಕಡಿವಾಣ ಹಾಕಿಕೊಳ್ಳಬೇಕು.



ಬೆಳೆಯುತ್ತಿರುವ ಬೆಂಗಳೂರು ಮಹಾನಗರವು ಸಂಚಾರದ ಅವ್ಯವಸ್ಥೆಯಿಂದ, ಟ್ರಾಫಿಕ್ ಜಾಮ್‌ಗಳಿಂದ ನರಳುತ್ತಿದೆ. ಈಗಿರುವ ರಸ್ತೆ, ಸೌಲಭ್ಯಗಳ ಧಾರಣ ಶಕ್ತಿ ಮೀರಿ ವಾಹನಗಳು ನಿತ್ಯವೂ ಬೀದಿಗಿಳಿಯುತ್ತವೆ. ಸಾರ್ವಜನಿಕ ನೀರಿಗೆ ಇನ್ನೂ ಹೆಚ್ಚು ಸುಧಾರಿಸದೇ ಇರುವುದು ಇಂತಹ ವಾಹನಗಳ ಸೇರ್ಪಡೆಗೆ ಪ್ರೇರಕವಾಗಿದೆ. ಹೀಗಾಗಿ ವಾಹನ ದಟ್ಟಣೆಯು ಇರುವಾಗ ಸಾರ್ವಜನಿಕ ಪ್ರತಿಭಟನೆ ರ‍್ಯಾಲಿಗಳು ಸಂಚಾರ ವ್ಯವಸ್ಥೆಯ ಮೇಲೆ ಬೀರುವ ವ್ಯತಿರಿಕ್ತ ಪರಿಣಾಮಗಳನ್ನು ನಿರ್ಲಕ್ಷಿಸುವಂತಿಲ್ಲ. ಇದಕ್ಕೆ ಒಂದು ಸೂಕ್ತ ಪರಿಹಾರಬೇಕು. ನಿಜ, ಆದರೆ ಸಂಚಾರ ಅಡೆತಡೆಗಳು ನಿತ್ಯದ ಮಾತೇ ಆಗಿದೆ, ಯಾವುದೇ ಮೆರವಣಿಗೆಗಳು ಇಲ್ಲದಿದ್ದರೂ ಇದು ನಡೆದೇ ಇರುತ್ತದೆ. ಹೀಗಾಗಿ ಸಾರಾಸಗಟಾಗಿ ಜನರ ರ‍್ಯಾಲಿಗಳ ಮೇಲೆ ಹಾಕುವುದು ಅರ್ಥ ಹೀನ.

ಇಂತಹ ಸನ್ನಿವೇಶದಲ್ಲಿ ಜನರ ಪ್ರಜಾಸತ್ತಾತ್ಮಕ ಹಕ್ಕು ಕಾಪಾಡುವುದು ಹಾಗೂ ನಾಗರೀಕರ ಸುಗಮ ಸಂಚಾರದ ಜವಾಬ್ದಾರಿಯನ್ನು ಅತ್ಯಂತ ಸಮಯೋಚಿತತೆಯಿಂದ, ಸಮಚಿತ್ತದಿಂದ ನಿರ್ವಹಿಸುವ ಹೊಣೆ ಸರ್ಕಾರದ ಮೇಲಿದೆ. ಹಿಂದೆ ಜನರ ಪ್ರತಿಭಟನೆಗಳು ವಿಧಾನಸೌಧದ ಎದುರಿನ ಕಬ್ಬನ್ ಪಾರ್ಕ್‌ನ ಮೂಲೆಯಲ್ಲಿ ನಡೆಯುತ್ತಿದ್ದವು. ಆದರೆ ಆಳುವವರಿಗೆ 'ಕಿರಿಕಿರಿ'ಯುಂಟು ಮಾಡಿ ಚುಚ್ಚುವ, ನೊಂದ ಒಡಲಿನ ಕೂಗು ಕೇಳಿಸಬಾರದೆಂಬ ಸರ್ಕಾರ ಪಾರ್ಕಿನ ಸೌಂದರ್ಯ ಕಾಯುವ ಹೆಸರಿನಲ್ಲಿ ಅವುಗಳನ್ನು ನಿಷೇಧಿಸಲಾಯಿತು. ನಂತರ ಇಂತಹ ಪ್ರತಿಭಟನೆಗಳಿಗೆ ಬೇರೆ ನಿರ್ದಿಷ್ಟ ಜಾಗದ ವ್ಯವಸ್ಥೆ ಮಾಡಲಾಗುವ ಭರವಸೆ ದೊರೆಯಿತಾದರೂ ಇಲ್ಲಿಯವರೆಗೂ ಕಲ್ಪಿಸಿಲ್ಲ. ಜನರ ಇಂತಹ ಪ್ರತಿಭಟನೆಗಳನ್ನು ನಗರದಿಂದಲೇ ಹೊರಗಟ್ಟುವ ಯೋಚನೆ ಸರ್ಕಾರ ಮಾಡುವುದು ಜನವಿರೋಧಿಯಾಗಿದೆ. ಹಳೆಯ ಕೇಂದ್ರ ಕಾರಾಗೃಹದ ಎದುರಿನ ಮೈದಾನ ಇದಕ್ಕಾಗಿ ನೀಡುವ ಹಿಂದಿನ ಪ್ರಸ್ತಾಪ ಹಾಗೇ ಹಾರಿ ಹೋಗಿರುವುದು ಮತ್ತು ಕಿಂಚಿತ್ತೂ ಚಿಂತಿಸದೇ, ಜನರನ್ನೇ ಇವುಗಳ ವಿರುದ್ಧ ಎತ್ತಿಕಟ್ಟಲು ಹವಣಿಸುವುದು ಕುತಂತ್ರವೇ ಆಗಿದೆ.

ಇಂತಹ ಪ್ರತಿಭಟನೆಗಳನ್ನು ನಡೆಸಲು ಜನತೆ ಯಾಕಿಷ್ಟು ದೂರ, ಪ್ರಯಾಸ ಪಟ್ಟು ಬರುತ್ತಿದ್ದಾರೆ ಎಂಬುದನ್ನು ಸರ್ಕಾರ ಒಮ್ಮೆಯಾದರೂ ಯೋಚಿಸಿದೆಯೇ?. ಜನರ ಬಗೆಗೆ ಸರ್ಕಾರದ ನಿರ್ಲಕ್ಷ್ಯವೇ ಇದಕ್ಕೆ ಕಾರಣ. ಆದ್ದರಿಂದ ನಾಗರೀಕರ ಸಂಚಾರ ಸುಗಮ ಗೊಳಿಸುವ, ಪ್ರತಿಭಟಿಸುವ ಪ್ರಜಾಪ್ರಭುತ್ವದ ಹಕ್ಕು ಕಾಯುವ ದಿಕ್ಕಿನಲ್ಲಿ ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳಬೇಕು, ಅದು ಅದರ ಹೊಣೆಗಾರಿಕೆ. ಸಾರಿಗೆ ನೆಪದಲ್ಲಿ ಜನ ಪ್ರತಿಭಟನೆಗಳನ್ನು ಹತ್ತಿಕ್ಕುವ, ನಿರ್ಬಂಧಿಸುವ ಇಲ್ಲವೇ ಊರಿನಿಂದಲೇ ಹೊರಗಟ್ಟುವ ಯಾವುದೇ ಪ್ರಯತ್ನಗಳೂ ಖಂಡನಾರ್ಹ.

ಕಂಗಾಲು ಸ್ಥಿತಿಯಲ್ಲಿ ಕಬ್ಬು ಬೆಳೆಗಾರರು

ಕರ್ನಾಟಕದ ಕಬ್ಬು ಬೆಳೆಗಾರರು ಕಂಗಾಲಾಗಿದ್ದಾರೆ. ರಾಜ್ಯದ ವಿವಿಧೆಡೆಗಳಲ್ಲಿ ತಿಂಗಳಾಂತರದಿಂದ ಚಳವಳಿ ಮಾಡುತ್ತಿದ್ದರೂ ಸರ್ಕಾರದ ಪ್ರಾಮಾಣಿಕ ಸ್ಪಂದನವಿಲ್ಲದಿರುವ ಬಗ್ಗೆ ಆಕ್ರೋಷಿತರಾಗಿದ್ದಾರೆ. ಅವರ ಪ್ರಮುಖ ಬೇಡಿಕೆ ಬೆಳೆದು ನಿಂತಿರುವ ಕಬ್ಬನ್ನು ಅರೆಯಬೇಕು. ಹಿಂದಿನ ವರುಷದ ಬಾಕಿ ಹಣ ಸಿಗುವಂತಾಗಬೇಕು. ಹಾಗೇ ಹಾನಿಗೀಡಾದ ಬೆಳೆಗೆ ಸರ್ಕಾರದ ಪರಿಹಾರವೂ ಕೂಡ.

ಹೋದ ವರ್ಷ ರೈತರು ಬೆಳೆದುದು 357ಲಕ್ಷ ಟನ್. ಆದರೆ ಅರೆದದ್ದು 253 ಲಕ್ಷ ಟನ್ ಮಾತ್ರ. ಉಳಿದದ್ದು ಹಾಳು. ಈ ವರ್ಷ 388 ಲಕ್ಷ ಟನ್ ಕಬ್ಬು ಕಟಾವಿಗೆ ಬೆಳೆದು ನಿಂತಿದೆ. ಆದರೆ ಇದನ್ನು ಪೂರ್ಣವಾಗಿ ಅರೆಯಲು ವ್ಯವಸ್ಥೆಗಳಿಲ್ಲ. ಕಾರ್ಖಾನೆಗಳು ಹೆಚ್ಚಲಿಲ್ಲ. ಏನು ಮಾಡೋದು? ನಿತ್ಯದ ಗಂಜಿಗೂ ತತ್ವಾರ, ಮಾಡಿದ ಸಾಲ ತೀರಿಸಲಾಗದೇ, ಬದುಕಲೂ ಆಗದೇ ಹೋದ ವರ್ಷ ಕಬ್ಬು 83 ರೈತರು ಆತ್ಮಹತ್ಯೆ ಮಾಡಿಕೊಂಡರು.

ಈ ಬಗ್ಗೆ ಕೆಡಿಎಫ್ ಸರ್ಕಾರ ಮೊಸಳೆ ಕಣ್ಣೀರು ಸುರಿಸಿತು. ಹೆಕ್ಟೇರ್ ಒಂದಕ್ಕೆ 25,000 ರೂ.ಗಳನ್ನು ಪರಿಹಾರ ನೀಡುವುದಾಗಿ ಘೋಷಿಸಿತು. (ಅಂದರೆ 98 ಕೋಟಿಯಷ್ಟು ಹಣ ಬೇಕು.) ನಂತರ ಸರ್ಕಾರ 10 ಸಾವಿರ ಹೆಕ್ಟೇರಿಗೆ ಮಾತ್ರ ಒಂದಿಷ್ಟು ಪರಿಹಾರ ನೀಡಿತು. ಉಳಿದ 38,000 ಹೆಕ್ಟೇರ್‌ಗೆ ಇನ್ನೂ ಸಿಗಬೇಕಷ್ಟೇ. ಅಂದರೆ 73 ಕೋಟಿ ಹಣ ಬಿಡುಗಡೆಯಾಗಬೇಕು. ಬಿಡುಗಡೆ ಮಾಡಿರೆಂದರೆ ಬಜೆಟ್‌ನಲ್ಲಿ ಹಣ ಮೀಸಲಿಲ್ಲ ಎನ್ನುತ್ತಾರೆ. ಹಾಗಾದರೆ ಪ್ರಕಟಿಸಿದ್ದು ಯಾಕೆ? ವ್ಯವಸ್ಥೆ ಮಾಡಲೇಬೇಕಿಲ್ಲ ಎಂದರೆ ನೋಡುತ್ತೇವೆ ಎನ್ನುತ್ತಾರೆ. ಅಂದಿನ ಹಣಕಾಸು ಮಂತ್ರಿಗಳಾಗಿದ್ದ ಯಡಿಯೂರಪ್ಪ ಈಗ ಮುಖ್ಯಮಂತ್ರಿ. ಮೇಲಾಗಿ ಭಗವಂತನ ಜೊತೆ ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ತಮ್ಮನ್ನು ಇಂತಹ ಮಾತುಗಳಿಂದಲೇ ಕಾಪಾಡುತ್ತಾರೆ ಎಂದು ಜನ ಜೀವ ಹಿಡಿದು ಸಾಯುವ ದಿನ ಮುಂದೂಡಿ ಕಾಯಬೇಕೇ?. ಇದು ಆಳುವವರ ಇಚ್ಛೆ.

ಆದರೆ ರೈತರ ಇಚ್ಛೆ ಬೇರೇನೇ ಇದೆ. ತಮ್ಮ ಸಮಸ್ಯೆ ಹೇಗಾದರೂ ಪರಿಹರಿಸಿ ಎಂಬುದು ನಿತ್ಯದ ಆಗ್ರಹ. ಕಾರ್ಖಾನೆಗಳಲ್ಲಿ ಅರೆಯುವುದಲ್ಲದೇ, ಸ್ಥಳೀಯವಾಗಿ ಅದನ್ನು ಬೆಲ್ಲ ಮಾಡಲು ಅವಕಾಶ ಕೊಡಿ,ಅದಕ್ಕೆ ಬೇಕಾಗಿರುವುದು ಬೆಲ್ಲದ ಗಾಣ; ಇದಕ್ಕೆ ಸಾಲ ಸಿಗಬೇಕು. ಅದು ಸರ್ಕಾರದಿಂದ ಬೇಕು, ಇವು ಸಮರ್ಥವಾಗಿ ನಡೆಯಬೇಕೆಂದರೆ ಗ್ರಾಮಾಂತರದಲ್ಲಿ ವಿದ್ಯುತ್ ಸರಬರಾಜಿಗೆ ಈಗಿರುವಂತೆ 3 ತಾಸಿನ ಅಡೆತಡೆ ಇರಬಾರದು. ಅದು ಪೂರ್ಣ ಪ್ರಮಾಣದಲ್ಲಿ ಸರಬರಾಜಾಗಬೇಕು. ವಿದ್ಯುತ್ ದರವೂ ಕಡಿಮೆಯಾಗಿ ಸಬ್ಸಿಡಿಯಲ್ಲಿ ದೊರೆಯಬೇಕು. ಬೆಲ್ಲಕ್ಕೆ ಬೆಂಬಲಿತ ಬೆಲೆಯೂ ಸಹ.

ಇದರೊಂದಿಗೆ ಎಥನಾಲ್ ತಯಾರಿಕೆಗೆ, ಮೊಲಾಸಿಸ್ ಮಾರಾಟಕ್ಕೆ ಇರುವ ನಿರ್ಬಂಧ ತೆಗೆಯಬೇಕು ಎಂಬ ಬೇಡಿಕೆಗಳು ಇವೆ.

ಒಟ್ಟಾರೆ ನೊಂದ ಒಡಲಿನ ನೋವಿನ ಕೂಗನ್ನು ಕೇಳುವವರಿಲ್ಲ. ಬಿಜೆಪಿ-ಜೆಡಿ(ಎಸ್)ಗೆ ಅಧಿಕಾರ ಹಂಚಿಕೆಯದೇ ಚಿಂತೆ. ಬಾಯಲ್ಲಿ ಮಣ್ಣಿನ ಮಕ್ಕಳ ಪದ ಪಠಣ. ಆದರೆ ಮಣ್ಣಿನ ಮಕ್ಕಳ ಬಾಯಲ್ಲಿ ಮಣ್ಣೇ.. ಈಗ ಉದ್ದುದ್ದ ಉದ್ಧಾರದ ಮಾತುನಾಡುವಾಗಲೇ ಆಳುವವರ ಎದೆ ನಡುಗಿಸುವ ಚಳುವಳಿ ಈ ಚಳಿಗಾಲದಲ್ಲೇ ಆರಂಭವಾಗಬೇಕು. ಪರಲೋಕ ತೋರಿಸುವವರಿಗೆ ಇಹಲೋಕ ತೆರೆದು ತೋರಿಸಬೇಕು. ಸಂದರ್ಭ ಸಾಧಕರ ಹುಟ್ಟಡಗಿಸುವ ಶಕ್ತಿ ಇರುವುದು ಈ ಜನದನಿಗೆ.

ಚುಚ್ಚುಮದ್ದು

ಗಾಣಗಿತ್ತಿ ಆಯ್ಯೋ ಅಂದ್ರೆ

- 'ಎಲ್ಲ ಮಕ್ಕಳು ಶಾಲೆಗೆ ಬರಲಿ'
  – ಬಿ.ಎಸ್.ಯಡಿಯೂರಪ್ಪ

→ ಗಾಣಗಿತ್ತಿ ಅಯ್ಯೋ ಅಂದ್ರೆ ನೆತ್ತಿ ತಣ್ಣಗಾಗಲ್ಲ. ಭೂ ಸುಧಾರಣೆ ಜಾರಿ ಮಾಡ್ತೀರಾ, ಹೇಳಿ?

★

'ತಪ್ಪಾಗಿ' ಅಂದರೆ

- 'ಅಭಿವೃದ್ಧಿ ವಿಚಾರದಲ್ಲಿ ಗುಜರಾತ್ ನಂಬರ್ ಒನ್ ರಾಜ್ಯವಾಗಿದ್ದು, ಅದೇ ರೀತಿ ಕರ್ನಾಟಕವನ್ನು ಅಭಿವೃದ್ಧಿ ಪಡಿಸುತ್ತೇವೆ ಎನ್ನುವುದನ್ನು ಯಾರೂ ತಪ್ಪಾಗಿ ಭಾವಿಸಬಾರದು'
  –ಜಗದೀಶ್ ಶೆಟ್ಟರ್, ಬಿಜೆಪಿ ಮುಖಂಡರು

→ 'ತಪ್ಪಾಗಿ', ಅಂದರೆ ಹೇಗೆ ಸ್ವಲ್ಪ ವಿವರಿಸಿ ಶೆಟ್ಟರ್ ಸಾಬ್

★

ಕೋಮುವಾದಿಯಲ್ಲ?

- 'ಬಿಜೆಪಿ, ಆರ್‌ಎಸ್‌ಎಸ್ ಅಥವಾ ಭಜರಂಗದಳ ಸಂಘಟನೆಗಳು ಕೋಮುವಾದಿಗಳಲ್ಲ. ಅವು ಹಿಂದೂ ಧರ್ಮವನ್ನು ಪ್ರತಿಪಾದಿಸಿವೆಯೇ ಹೊರತು ಅನ್ಯ ಧರ್ಮ ದ್ವೇಷವನ್ನು, ಅಕ್ರಮಣಶೀಲವಾಗಲು ಪ್ರಚೋದಿಸಿಲ್ಲ'.
  – ಡಾ: ಎಂ.ಚಿದಾನಂದಮೂರ್ತಿ

→ ಹೌದಾ!? ಚೆಡ್ಡಿ ಜೇಬಿನೊಳಗೆ ಕುಳಿತು ಹೊರಗೆ ನೋಡ್ತಿರೋದರಿಂದ ಹಾಗೆ ಕಾಣ್ತಿರಬಹುದಾ ಸ್ವಲ್ಪ ಚೆಕ್ ಮಾಡಿಕೊಳ್ಳಿ ಚಿ.ಮೂ.ಜೀ.

★

- ದಕ್ಷಿಣದಲ್ಲಿ ಬಿಜೆಪಿ ಶಕೆ ಆರಂಭ - ಸುದ್ದಿ

→ ಶಕೆ ಅಲ್ಲ ಶಖೆ, ಜನರನ್ನು ಸುಡುವ ಶಖೆ ಇದು.

★

- ವಿಶ್ವದ ಗಮನ ಸೆಳೆದ ಭಾರತದ ಆರ್ಥಿಕ ಬೆಳವಣಿಗೆ ದರ–ಸುದ್ದಿ

→ ರೈತರ ಆತ್ಮ ಹತ್ಯೆಗಳ ಬೆಳವಣಿಗೆ ದರವೂ ವಿಶ್ವದ ಗಮನ ಸೆಳೆದಿದೆಯಲ್ಲ !!!!

ಇದ್ದದ್ದು ಇದ್ಹಾಂಗ

ಯಾರು ಹಿಂಸೆ ನಡೆಸತ್ತಿರುವವರು?

ಕೇಂದ್ರ ಸರ್ಕಾರ ಎಸ್‌ಇಝಡ್ ಯೋಜನೆಯನ್ನು ವಾಪಸ್ ತೆಗೆದುಕೊಂಡ ಮೇಲೂ, ರಾಜ್ಯ ಸರ್ಕಾರ ಯೋಜನೆ ಕೈಬಿಡಲಾಗಿದೆ ಎಂದೂ ಘೋಷಿಸಿದ ಮೇಲೂ ನಂದಿಗ್ರಾಮದಲ್ಲಿ ಹಿಂಸಾಚಾರ ಮುಂದುವರಿಯುತ್ತಿರುವುದರ ಅರ್ಥವೇನು?

ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್, ನಕ್ಸಲರು ಮತ್ತು ಮುಸ್ಲಿಂ ಮೂಲಭೂತವಾದಿಗಳ ಅನೈತಿಕವಾದ ಮತ್ತು ಸಂದರ್ಭಸಾಧಕತನ ಮೈತ್ರಿಯಿಂದಾಗಿ ನಂದಿಗ್ರಾಮದಲ್ಲಿ ಇಂದಿಗೂ ಹಿಂಸಾಚಾರ ಮುಂದುವರೆದಿದೆ.

– ಗಿರೀಶ್ ನಿಕ್ಕಂ
'ಉದಯವಾಣಿ' ಪತ್ರಿಕೆಯ ಲೇಖನದಲ್ಲಿ

★

'ಕಬ್ಬಿಣದ ಅದಿರು ನಮ್ಮ ಸಂಪತ್ತು. ತೆಗೆದ ಅದಿರನ್ನು ನಾವೇ ಉಕ್ಕು ಮಾಡುವುದು ಸಾಧ್ಯವಿದ್ದರೆ ಮಾತ್ರ ಗಣಿಗಾರಿಕೆಯನ್ನು ಮುಂದುವರಿಸಬೇಕು. ಯಾವುದೇ ಕಾರಣಕ್ಕೂ ಅದಿರು ರಫ್ತು ಮಾಡಲು ಅವಕಾಶ ನೀಡಬಾರದು. ನಮ್ಮ ಮುಂದಿನ ಪೀಳಿಗೆಗೂ ಈ ಅದಿರು ಉಳಿದಿರಬೇಕು'

–ಡಾ: ಯು.ಆರ್.ಅನಂತಮೂರ್ತಿ

'ಅವ್ವ ಬೇ ಸಂಸ್ಕೃತಿ .....

ಪುಟ 2 ರಿಂದ

ಸ್ವಾತಂತ್ರ್ಯ ಬಂದದನ್ನು ಕಂಡಿದ್ದೇನೆ. ಈಗ ಕರ್ನಾಟಕ ಏಕೀಕರಣ ಆಗುವುದನ್ನೂ ನೋಡುತ್ತೇನೆ. ಕರ್ನಾಟಕ ಏಕೀಕರಣ ಸಾಧನೆ ಆದದ್ದನ್ನು ನೋಡದೆ ನಾನು ಸಾಯುವುದಿಲ್ಲ' ಎಂದು ಅವರು ಖಚಿತವಾಗಿ ಹೇಳುತ್ತಿದ್ದರು. ನನ್ನ ನೇತೃತ್ವದಲ್ಲಿ ಒಂದು ತಂಡವನ್ನು ದಾವಣಗೆರೆಗೆ ಕಳುಹಿಸಿ ಗಡಿಯಾರ ಗೋಪುರದ ಕೆಳಗೆ ಆಮರಣ ಉಪವಾಸ ಕೈಕೊಳ್ಳುವಂತೆ ಮಾಡಿ, ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತನ್ನು ದಾವಣಗೆರೆಯಲ್ಲಿ ಸೇರಿಸುವಂತೆ ಒತ್ತಾಯ ತರಿಸಿದರು. ಮುಂದೆ ರಾಜನಹಳ್ಳಿ ಹನುಮಂತಪ್ಪನವರ ಧರ್ಮಛತ್ರದಲ್ಲಿ, ಹೊಸಮನಿ ಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಪರಿಷತ್ತು ಸೇರಿತು. ಏಕೀಕರಣಕ್ಕಾಗಿ ಕನ್ನಡಿಗರು ಸರ್ವ ತ್ಯಾಗಕ್ಕೂ ಸಿದ್ಧರಾಗಬೇಕೆಂದು ನಿರ್ಧರಿಸಲಾಯಿತು.

ಏಕೀಕರಣವಾದಿಗಳನ್ನು ಅಲ್ಲಲ್ಲಿ ಬಂಧಿಸಲಾಯಿತು. ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಲು ಜನರು ಜೈಲು ಸೇರಿದರು. ಬಾಂಬ್ ಇರಿಸಿಕೊಂಡಿದ್ದಾರೆ ಎನ್ನುವ ಆಪಾದನೆಯ ಮೇಲೆ ನನ್ನನ್ನು ಸರ್ಕಾರ ಬಂಧಿಸಿತು.

ಪ್ರಶ್ನೆ: ನಿಮಗೆ ಕಮ್ಯುನಿಸ್ಟ್ ಪಕ್ಷದ ಸಂಪರ್ಕ ಬಂದದ್ದು ಹೇಗೆ?

ಉತ್ತರ : ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಮುಖ ಪಾತ್ರ ವಹಿಸಿತ್ತು. ಹಿರಿಯ ಕಮ್ಯುನಿಸ್ಟ್ ನಾಯಕ ಎನ್.ಎಲ್. ಉಪಾಧ್ಯಾಯರಿಂದ ನಾನು ತುಂಬಾ ಪ್ರಭಾವಿತನಾಗಿದ್ದೆ, ಹೊಸಮನಿ ಸಿದ್ಧಪ್ಪನವರು ಬಿ.ವಿ. ಕಕ್ಕಿಲಾಯರನ್ನು ಕರೆಯಿಸಿ ಹಾವೇರಿಯಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸಲು ಶ್ರಮಿಸಿದರು. ತೀರ್ಥಹಳ್ಳಿಯಲ್ಲಿ ನಡೆದ ಪಕ್ಷದ ಶಿಬಿರದಲ್ಲಿ ಹರಿಹರದ ಸದಾಶಿವಪ್ಪ ಮತ್ತು ನಾನು ಭಾಗವಹಿಸಿದ್ದೆವು. ನನಗೆ ರೈತರ ನಡುವೆ ಕೆಲಸ ಮಾಡಲು ಸೂಚಿಸಲಾಯಿತು. ಅಖಿಲ ಭಾರತ ಕಿಸಾನ್ ಸಭಾದ ಸಮ್ಮೇಳನಕ್ಕಾಗಿ ಪಶ್ಚಿಮ ಬಂಗಾಳಕ್ಕೆ ಹೋದಾಗ ಹರೇಕೃಷ್ಣ ಕೋನಾರ ಅವರ ಪರಿಚಯವಾಯಿತು. ಕೇರಳದ ತ್ರಿಚೂರ್‌ನಲ್ಲಿ ನಡೆದ ಸಮ್ಮೇಳನಕ್ಕೆ ಹೋದಾಗ ಕಿಸಾನ್ ಸಭಾದ ಅಂದಿನ ಅಧ್ಯಕ್ಷರೂ ಮಹಾನ್ ಹೋರಾಟಗಾರರೂ ಆಗಿದ್ದ ಎ.ಕೆ. ಗೋಪಾಲನ್ ಅವರನ್ನು ಕಂಡು ಅವರನ್ನು ಹಾವೇರಿಗೆ ಆಮಂತ್ರಿಸಲು ಸಾಧ್ಯವಾಯಿತು. 'ಉಳುವವನೇ ಭೂಮಿಯ ಒಡೆಯ' ಎಂಬ ಘೋಷಣೆಯ ಅಡಿಯಲ್ಲಿ ಏರ್ಪಡಿಸಲಾದ ಪಾದಯಾತ್ರೆಯನ್ನು ಕಾಮ್ರೆಡ್ ಎ.ಕೆ.ಜಿ. ಉದ್ಘಾಟಿಸಿದರು. ಮುಂದೆ 1967ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ನಾನು ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿ 11, 905 ಮತಗಳೊಂದಿಗೆ 2ನೇ ಸ್ಥಾನವನ್ನು ಪಡೆಯಲು ಸಾಧ್ಯವಾಗಿತ್ತು. ಕಾಂಗ್ರೆಸ್ ಅಭ್ಯರ್ಥಿ 20,474 ಮತಗಳನ್ನು ಪಡೆದು ಜಯಗೊಳಿಸಿದ್ದರು.

ಪ್ರಶ್ನೆ: ಕರ್ನಾಟಕ ಏಕೀಕರಣದ ಕನಸುಗಳು ನನಸಾಗಿವೆಯಾ?

ಉತ್ತರ : (ಕಣ್ಣಲ್ಲಿ ನೀರು) ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದೆ. ಕರ್ನಾಟಕ ಒಂದಾಗಿದೆ. ಆದರೆ ಆಗಬೇಕಾದದ್ದು ಇನ್ನೂ ಆಗಿಲ್ಲ. ಬಡತನ ನಿವಾರಣೆ ಆಗಲಿಲ್ಲ. ಬೇಧಭಾವಗಳು ಅಳಿಯಲಿಲ್ಲ.

ನಮ್ಮದು ಅಮ್ಮಾ ಬೇ ಸಂಸ್ಕೃತಿ, ದೇವರಿಗೂ ನಾವು 'ಎಲೇ ದೇವಾ' ಎನ್ನುತ್ತೇವೆ. ಈ ಏಕವಚನ ಪ್ರಯೋಗ ನಾವು ಗೌರವಿಸುವ ವ್ಯಕ್ತಿಯ ಬಗ್ಗೆ ನಮಗಿರುವ ಸಲಿಗೆ, ವಿಶ್ವಾಸದ ಕುರುಹು ಆಗಿದೆ. ಆದರೆ ಈ ವಿಶ್ವಾಸ ಮಾಯವಾಗುತ್ತಿದೆ. ಯಾರೂ ಯಾರನ್ನು ನಂಬದಿರುವ ಕಾಲ! ಪರಸ್ಪರ ಪ್ರೀತಿ ವಿಶ್ವಾಸದ ಸಂಸ್ಕೃತಿ ಕಣ್ಮರೆಯಾಗುತ್ತಿದೆ. ಬೂಟಾಟಿಕೆ, ಅಸೂಯೇ ಹೆಚ್ಚಾಗುತ್ತಿದೆ.. ನೈಜ ಸ್ವಾತಂತ್ರಕ್ಕಾಗಿ, ಕನ್ನಡಿಗರ ಭಾವನಾತ್ಮಕ ಐಕ್ಯತೆಗಾಗಿ, ಬಹುಮುಖಿ ಸಂಸ್ಕೃತಿಯನ್ನು ಉಳಿಸಿ ಬೆಳೆಸಲಿಕ್ಕಾಗಿ ಸಾಗಬೇಕಾಗಿದೆ ಸಂಗ್ರಾಮ.

ಸಂದರ್ಶಕರು : ನಿತ್ಯಾನಂದಸ್ವಾಮಿ
ಎಸ್‌ಎಫ್‌ಐನ ನಾರಾಯಣಕಾಳೆ,
ಬಸವರಾಜ ಪೂಜಾರ
ಮತ್ತು ಬಸವರಾಜ ಬಾರ್ಕಿ ಹಾವೇರಿ.

'ಯಾವ ಉತ್ತದಲ್ಲಿ ಯಾವ ಆವ್ರೋ....'

'ಚೆಡ್ಡಿ ಚಿಕ್ಕ ಓದ್ನಂತೆ' ಎಂದ ಎಣ್ಣೆ ತಮ್ಮಣ್ಣ.

ಔದಾ ಪಾಪ ಚಿಕ್ಕ ವಯಸ್ಸು, ಓಗ್‌ಬುಟ್ನಾ? ಅವನ ಆತ್ಮಕ್ಕೆ ಸಾಂತಿ ಸಿಕ್ಲಿ' ಎಂದ ಎಂಕ.

'ಅವನ ಆತ್ಮಕ್ಕೆ ಸಾಂತಿ ಏನು ಸಿಕ್ಕಾಪಟ್ಟೆ ಖುಸೀನೇ ಸಿಕ್ಕೈತೆ. ಆದಕ್ಕೆ ಓಗಿರದು'ಎಂದ ಎಣ್ಣೆ ತಮ್ಮಣ್ಣ.

'ಏನ್ಲಾ ಅದು ಸರ್‍ಯಾಗಿ ಏಳ್ಲಾ, ಯಾವಾಗ ಓದ ಏನ್ಕತೆ? ಎಂದು ಕೇಳಿದ ಎಂಕ.

'ಓದ ಅಂದ್ರೆ ಅವ್ನೇನು ಸತ್ತಿಲ್ಲ ಕಣ್ಲಾ, ಬೆಂಗ್ಳೂರಿಗೋದ. ಹೆಡ್ಡಿಯೋರಪ್ಪ ಮುಕ್ಯಮಂತ್ರಿ ಆಗೋದು ನೋಡಾಕೆ' ಎಂದ ಎಣ್ಣೆ ತಮ್ಮಣ್ಣ.

'ಅವನ್ಯಾಕ ಓದ ಅವನೇನು ಅವರ ಚಿಗಪ್ಪನ ಮಗನೇ'? ಎಂಕ ಕೇಳಿದ.

'ನಮ್ಮ ಚೆಡ್ಡಿ ಚಿಕ್ಕ ಹೆಡ್ಡಿಯೋರಪ್ಪನ ಅಭಿಮಾನಿ. ಅಸ್ತಾಂತ್ರ ಆಗ್ಲಿಲ್ಲ ಅಂತ ಉಚ್ಚಾಸ್ಪತ್ರೆ ಸೇರೋದೊಂದು ಬಾಕಿಯಿತ್ತು. ಈಗ ಅವನಿಗೆ ಆಗಿರೋ ಖುಸಿಲಿ ಎಲ್ಲಿ ಅವ್ನಿಗೆ ಅಲ್ಟ್ ಅಟ್ಯಾಕ್ ಆಯ್ತಾದೋ ಅಂತ ಎದ್ರಿಕೆ ಆಯ್ತದೆ, ಎಂದ ಎಣ್ಣೆ ತಮ್ಮಣ್ಣ.

'ಅದಿರ್‍ಲಿ ನೀನ್ಯಾಕೆ ಯಡಿಯೂರಪ್ಪ ಅನ್ನೋಕೆ ಹೆಡ್ಡಿಯೋರಪ್ಪ ಅಂತೀಯಾ?' ಎಣ್ಣೆ ಜಾಸ್ತಿ ಆಗಿ ನಾಲಿಗೆ ಹೊರಳಲ್ವ? ಎಂದು ಕೇಳಿದ ಎಂಕ.

'ಏ ಕಣ್‌ಪೂಜ್ ಆಯ್ತದೆ ಕಣ್ಲಾ, ಅದೇನೋ ಎಸ್ರೆಲ್ಲಾ ಚೇಜ್ ಮಾಡ್ಕೊಂಡವರಂತೆ. ಇಂಗ್ಲೀಸ್ ನಾಗೊಂದು, ಕನ್ನಡದಾಗೆ ಒಂದು, ಇಂದೀಲಿ ಇನ್ನೊಂದು, ತಮಿಳಲ್ಲಿ ಮತ್ತೊಂದು, ನಮ್ಮಂತೋರ್‍ಗೆ ಎಂಗೆ ಗೊತ್ತಾಯ್ತದೆ?' ಎಂದ ಎಣ್ಣೆ ತಮ್ಮಣ್ಣ.

'ಅಂಗಲ್ಲ ಅಗುರವಾಗಿ ಮಾತಾಡ್‌ಬೇಡ. ಅವ್ರು ಎಸ್ರು ಚೇಂಜ್ ಮಾಡ್ಕೋಂಡಿದಕ್ಕೆ ಅಂತೆ ಮುಕ್ಯಮಂತ್ರಿ ಆಗಿದ್ದು' ಎಂದ ಎಂಕ. 'ಅಹ್ಹಹ್ಹ... ಹ್ಹಾ... ಎಂದು ನಕ್ಕ ಎಣ್ಣೆ ತಮ್ಮಣ್ಣ.

'ಯಾಕ್ಲ ಯಾಕ್ಲ ಅಂಗ್ ನಗಾಡ್ತೀಯಾ? ಕೇಳಿದ ಎಂಕ. 'ಅಲ್ಲ ಕಣ್ಲಾ, ಈಗ ನಾನೂ ಎಸ್ರು ಚೇಂಜ್ ಮಾಡ್ ಕಂಡ್ರೆ ಮುಕ್ಯ ಮಂತ್ರಿ ಆಯ್ತಿವಾ?' ಕೇಳಿದ ಎಣ್ಣೆ ತಮ್ಮಣ್ಣ.

'ಅಂಗೆಲ್ಲ ಅನ್ಬೇಡ, ಯಡೂರಪ್ಪರು ಒಂದನ್ನೇ ನಂಬ್ಕಂಡು ಕೂತ್ಕಂಡಿರ್‍ಲಿಲ್ಲ. ಮಾಡ ಪ್ರಯತ್ನವೆಲ್ಲ ಮಾಡಿದ್ರು. ಓಮ, ಅವನ, ಸಾಂತಿ, ಆದ್ಯಾವು ಈದ್ಯಾವು ಪೂಜೆ ಪುನಸ್ಕಾರ, ಪಕ್ಷದ ಓರಾಟ, ಮಠದ ಸಾಮಿಗಳ ಓರಾಟ ಒಂದೇ? ಎರಡೇ? ಎಲ್ಲ ಸೇರಿ ಫಲ ಕೊಟ್ಟವೆ' ಎಂದ ಎಂಕ.

'ಸುಮ್ಮಿರ್‍ಲ ಏನ್ ಮಾತೂ ಅಂತ ಆಡ್ತಿಯಾ ಓಮ, ಸಾಂತಿ ಮಾಡಿದ್ರೆ ಮುಕ್ಯಮಂತ್ರಿ ಏನಾರು ಆಗಾಂಗಿದ್ರೆ ಜನಗಳ ಓಟಿಗೆ, ನೋಟಿಗೆ ಪಾಕೀಟಿಗೆ ಏನೂ ಬೆಲೆ ಇಲ್ಲ ಅಂತಿಯಾ?' ಎಂದ ಎಣ್ಣೆ ತಮ್ಮಣ್ಣ. 'ನೋಡ್ಲಾ ತಮ್ಮ ಅಂಗೆಲ್ಲ ಸಾಸ್ತ್ರಗಳ ಬಗ್ಗೆ ಅಗುರವಾಗಿ ಮಾತಾಡ್‌ಬೇಡ. ಯಾವ ಉತ್ತದಲ್ಲಿ ಯಾವ ಆವು ಇರ್‌ತೈತೋ ಗೊತ್ತ ನಿನ್ಗೆ? ಎಂದ ಎಂಕ. 'ಅದು ಗೊತ್ತಿಲ್ಲ. ಆದ್ರೆ ಬಿಜೆಪಿ ಉತ್ತದಲ್ಲಿ ಬಾಳ ಇಸದ ಆವುಗಳು ಇದಾವಂತೆ. ಅದೇನಾರ ಆಗ್ಲಿ, ಓಗಿ ಓಗಿ ರೈತ್ರು ಮೇಲೆ ಆಣೆ ಮಡಗೆವ್ರಲ್ಲ ಹಡ್ಡಿಯೋರಪ್ಪ' ಎಂದ ಎಣ್ಣೆ ತಮ್ಮಣ್ಣ. 'ರೈತ್ರು ಅಂದ್ರೆ ದ್ಯಾವ್ರು ಸಮಾನ ಅಂತಿರ್‍ಬೋದು ಕಣ್ಲಾ' ಎಂದ ಎಂಕ.

'ಅಂಗಲ್ಲ ಕಣ್ಲಾ ಈ ಪುಣ್ಯಾತ್ಮ ಉಪಮುಕ್ಯಮಂತ್ರಿ ಆಗಿದ್ದಾಗ್ಲೆ ಬಜೆಟ್ ದುಡ್ನ ಕಳ್ಳೆಪುರಿ ಪ್ರಸಾದ ಅಂಚಿದಂತೆ ಮಠಗಳಿಗೆ ಅಂಚಿದ್ರು. ಇನ್ನೂ ಈಗ ಕೇಳ್ಬೇಕ? ಅವ್ರ ಜಾತಿ ಮಠದ ಸಾಮಿಗಳು ಎಷ್ಟೊಂದು ಓರಾಟ ಮಾಡಿದಾರೆ. ಪಾಪ ಈಗ ಅವ್ರ ಋಣ ತಿರುಸ್‌ಬ್ಯಾಡ್ವೇ? ಇನ್ನು ಸಾಸ್ತ್ರ ಏಳೋರು, ಓಮ ಮಾಡೋರು, ವಾಸ್ತು ಪುರಸರು ಇಂತೋರ್‍ಗೆ ಬಜೆಟ್ ದುಡ್ಡೆಲ್ಲ ಹರ್‍ದು ಹಂಚಿ, ಕಡೆಗೆ ರೈತ್ರು. ಬಡವ್ರಿಗೆ ಆಣೆ ಪ್ರಮಾಣ ಮಾತ್ರ ಸಿಗ್ತವೇನೋ..' ಎಂದ ಎಣ್ಣೆ ತಮ್ಮಣ್ಣ. 'ಔದು ಕಣ್ಲಾ ಇನ್ನೂ ಏನೇನು ಕಾದೈತೋ ಗ್ರಾಚಾರ. ಏನೇ ಆಗ್ಲಿ ದ್ಯಾವೇಗೌಡ್ರು ಇಂಗ್ಮಾಡ್‌ಬಾರ್‍ದಾಗಿತ್ತು' ಎಂದ ಎಂಕ. 'ದ್ಯಾವೇಗೌಡ್ರ ಉತ್ತದಾಗೆ ಇನ್ನೂ ಎಂತೆಂತಾ ಆವೈತೋ ಸಿವನೇ...' ಎಂದು ಎಣ್ಣೆ ತಮ್ಮಣ್ಣ ಚರ್ಚೆ ನಿಲ್ಲಿಸಿ ನಡೆದ.

ಜನಶಕ್ತಿ ಕನ್ನಡ ವಾರಪತ್ರಿಕೆ

ಅಕ್ರಮ - ಸಕ್ರಮ ದೋಚುವ ದುರಾಕ್ರಮ

ಕೆ.ಎನ್.ಉಮೇಶ್

ಸಕ್ರಮ 2007

ಬೆಂಗಳೂರು ಮಹಾನಗರ ಪಾಲಿಕೆಯು ಕಟ್ಟಿದ ಕಟ್ಟಡಗಳನ್ನು, ನಿವೇಶನಗಳನ್ನು ಸಕ್ರಮ ಮಾಡುವುದಾಗಿ ಹೇಳಿ ಜನರನ್ನು ದೋಚಲು ಹೊರಟಿದೆ.

ಅಧಿಕಾರಿಗಳು ಎನ್‌ಓಸಿ (ಆಕ್ಷೇಪಣೆ ರಹಿತ ಪತ್ರ) ನೀಡಿದ ನಂತರವೇ ಮನೆಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ಸಿಗುವುದು. ಹಿಂದೆ ಎನ್‌ಓಸಿ ನೀಡಿರುವ ಕಟ್ಟಡಗಳು ಇಂದೇಕೆ ಅಕ್ರಮವಾದವು?

ರಾಜ್ಯ ಸರ್ಕಾರದ ತೀರ್ಮಾನದ ಮೇರೆಗೆ ಅಕ್ರಮ ನಿವೇಶನ ಹಾಗೂ ಕಟ್ಟಡಗಳನ್ನು ಸಕ್ರಮಗೊಳಿಸುವ ಯೋಜನೆಯನ್ನು 'ಸಕ್ರಮ-07'ದ ಹೆಸರಿನಲ್ಲಿ ರಾಜ್ಯಾದ್ಯಂತ ಸ್ಥಳೀಯ ಸಂಸ್ಥೆಗಳು ಪ್ರಕಟಿಸಿವೆ. 2007 ಸೆಪ್ಟೆಂಬರ್ 15 ರಿಂದ ಡಿಸೆಂಬರ್ 15 ರವರೆಗೆ ಕಾಲಾವಕಾಶ ನೀಡಿ, ಅದರೊಳಗೆ ನಿಗದಿತ ಶುಲ್ಕಗಳನ್ನು (ದಂಡ) ಕಟ್ಟಿ ಸೂಚಿತ ನಮೂನೆಗಳಲ್ಲಿ ಸಂಬಂಧಿತರಿಗೆ ಅರ್ಜಿ ಸಲ್ಲಿಸಲು ಪ್ರತಿನಿತ್ಯ ದಿನಪತ್ರಿಕೆಗಳಲ್ಲಿ ಜಾಹಿರಾತು [illegible]ತಲಾಗುತ್ತಿದೆ. ಕೊನೆಯ ದಿನ ಸಮೀಪಿಸುತ್ತಿದೆ. ಜಾಹಿರಾತುಗಳು ಹೆಚ್ಚುತ್ತಿವೆ. ಮಾಡಿದ್ದೆಲ್ಲಾ ಪಾಪಗಳ ಪರಿಹಾರಕ್ಕೆ ಶಾಂತಿ ಮಾಡಲು ಯಾಗ-ಯಜ್ಞ ಪೂಜೆ ಇತ್ಯಾದಿ ನಡೆಸಬೇಕು. ಅದಕ್ಕಿಷ್ಟು ಪೂಜಾ ಕಾಣಿಕೆ ನೀಡಬೇಕೆಂಬಂತೆ ನಿವೇಶನ - ಕಟ್ಟಡಗಳಲ್ಲಿರುವ ನಿಯಮಗಳ ಉಲ್ಲಂಘನಾ ದೋಷಕ್ಕೆ ಹೇಳಿದಷ್ಟು ದಂಡ ತೆತ್ತರೆ, ಅಕ್ರಮ-ಸಕ್ರಮವಾಗುತ್ತದೆ ಎಂಬುದಕ್ಕೆ ಈ 'ಸಕ್ರಮ-07' ಎಂಬ ಸರ್ಕಾರದ ಪ್ರತಿಷ್ಠಿತ ಯೋಜನೆ. ಯಾಗ-ಯಜ್ಞ, ಪೂಜೆ-ತೀರ್ಥಯಾತ್ರೆಗಳನ್ನು ತನ್ನ ಆಡಳಿತ ವಧಿಯ 20 ತಿಂಗಳಲ್ಲಿ ತುಂಬಾ ನಡೆಸಿದ ಕುಮಾರಸ್ವಾಮಿ ನೇತೃತ್ವದ ಜೆಡಿ(ಎಸ್) - ಬಿಜೆಪಿ ಸರ್ಕಾರ ಹಾಗೂ ತನ್ನ ಬಜೆಟ್ ಮೂಲಕ ಮಠಗಳಿಗೆ ಉದಾರವಾಗಿ ಕೊಡುಗೆಗಳನ್ನು ನೀಡಿದ, ಇಂದಿನ ಮುಖ್ಯಮಂತ್ರಿ ಯಡ್ಯೂರಪ್ಪ ಸಿಎಂ ಆಗಲು ನಡೆಸಿದ ಯಾಗ-ಯಗ್ನಗಳಂತೆ, ಜನರು ಸಹಾ ತಮ್ಮ ನಿವೇಶನ ಹಾಗೂ ಕಟ್ಟಡಗಳ ಅಕ್ರಮಗಳ ಸಕ್ರಮಗೊಳಿಸಲು ಬೆಲೆ ತೆರ ಬೇಕೆಂಬಂತೆ ಪ್ರಕಟಿಸಿರುವ ಯೋಜನೆಯೇ ಸಕ್ರಮ - 07.

ಅರ್ಜಿ ಮಾರಾಟದ ದಂಧೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಒಂದೂವರೆ ಕೋಟಿ ರೂಪಾಯಿಗಳ ಖರ್ಚು ಮಾಡಿ ಜಾಹಿರಾತು ನೀಡಿರುವ ಪರಿಣಾಮ ಒಂದೂವರೆ ಲಕ್ಷ ಅರ್ಜಿಗಳು ಮಾರಾಟವಾಗಿವೆಯಂತೆ, ಆದರೆ ಇದುವರೆಗೆ ಕಳೆದೆರಡು ತಿಂಗಳಲ್ಲಿ ಬಂದಿರುವ ಅರ್ಜಿಗಳು ಮಾತ್ರ ಎರಡು ಸಾವಿರ ಅರ್ಜಿ. ಅರ್ಜಿ ಬರದಿದ್ದರೇನಂತೆ ಅರ್ಜಿ ಮಾರಾಟದಿಂದಲೇ ತಲಾ ಅರ್ಜಿಗೆ ರೂ. 100 ರಂತೆ ಈಗಾಗಲೇ ಒಂದೂವರೆ ಕೋಟಿ ಬಂದು [illegible] ಬಿಬಿಎಂಪಿಗೆ. ಅರ್ಜಿ ಮಾರಾಟದಲ್ಲೇ ಕೋಟಿಗಟ್ಟಲೆ ಬಂದರೆ, ದಂಡ-ಶುಲ್ಕದ ಹೆಸರಿನಲ್ಲಿ ಇನ್ನೆಷ್ಟು ದಶಕೋಟಿ ಹಣ ಬರಬಹುದು ಎಂಬ ದೂರಾಲೋಚನೆಯೇ 'ಸಕ್ರಮ-07'.

ಸರಾಯಿ ನಿಷೇಧ, ಲಾಟರಿ ನಿಷೇಧದಿಂದ ತಪ್ಪಿ ಹೋಗಿರುವ ಸರ್ಕಾರಿ ಖಜಾನೆಯ ಆದಾಯವನ್ನು ಅಂತೆಯೇ ರೈತರ ಸಾಲ ಮನ್ನಾ ಯೋಜನೆಯಿಂದ ಸರ್ಕಾರದ ಮೇಲೆ ಬೀಳುವ ಹೊರೆಯನ್ನು ಜನತೆಯ ಮೇಲೆ ಹೊರಿಸುವ ಯೋಜನೆಯಾಗಿ ಇದು ಹೊರ ಹೊಮ್ಮಿದೆ. ಅತ್ತ ಸ್ವಾಮಿಗಳಿಗೆ, ಮಠಗಳಿಗೆ ಬೇಕಾಬಿಟ್ಟಿ ಯಾಗಿ ಹಂಚಿರುವ ಬಜೆಟ್ ಹಣವನ್ನು ಭರಿಸಲು ಜನರ ತಲೆ ಮೇಲೆ ಕೈ ಇಡುವ ಯೋಜನೆಯ ಭಾಗವೇ ಈ ಸಕ್ರಮ - 07

ಅಕ್ರಮ ಎಂದರೇನು?

ವಸತಿ ನಿವೇಶನ ನಿರ್ಮಿಸುವಾಗ ಸೂಕ್ತ ಅನುಮತಿ ಪಡೆಯದಿರುವುದು, ನಗರ ಯೋಜನೆ ವ್ಯಾಪ್ತಿಗೆ ಒಳಪಡಿಸದೆ - ಪರಿವರ್ತನೆ(ಕನ್ವರ್ಷನ್) ಮಾಡಿಸದಿರುವುದು, ನೀಡಲಾದ ಅನುಮತಿಯಂತೆ ಕಟ್ಟಡ ನಿರ್ಮಿಸದೆ, ಮಂಜೂರಾದ ಕಟ್ಟಡ ಯೋಜನೆಯಲ್ಲಿನ ಉಲ್ಲಂಘನೆ ಸೇರಿದಂತೆ ಒಟ್ಟು ನಾಲ್ಕು ರೀತಿಯ ಅಕ್ರಮಗಳನ್ನು ಸಕ್ರಮಗೊಳಿಸುವ ಯೋಜನೆ ಇದಾಗಿದೆ. ಪರಿವರ್ತಿತ ಅಥವಾ ಅಪರಿವರ್ತಿತ ಭೂಮಿಯಲ್ಲಿ ವಸತಿ ನಿವೇಶನ ನಿರ್ಮಾಣ ಹಾಗೂ ಅಪರಿವರ್ತಿತ ಭೂಮಿಯಲ್ಲಿ ಕಟ್ಟಡ ನಿರ್ಮಿಸುವ ಅಕ್ರಮ (ಕೃಷಿ ಭೂಮಿಯಲ್ಲಿ ಪರಿವರ್ತನೆ ಮಾಡಿಸದೆ, ನಗರ ಯೋಜನೆಗೆ ಒಳಪಡಿಸದ ಭೂ ಕಂದಾಯ ಪ್ರದೇಶದಲ್ಲಿ ಲೇಔಟ್‌ಗಳನ್ನು ಮಾಡುವುದು ಹಾಗೂ ಮಾಡುವಾಗ ಇರುವ ಉಲ್ಲಂಘನೆ ಮತ್ತು ಅಂತಹ ಅಪರಿವರ್ತಿತ ಭೂಮಿಯಲ್ಲಿ ಕಟ್ಟಡ ನಿರ್ಮಿಸುವಂತಹ ಅಕ್ರಮಗಳು), ಭೂ ಬಳಕೆ ನಿಯಮಗಳ ಉಲ್ಲಂಘನೆ (ವಸತಿ ಪ್ರದೇಶದಲ್ಲಿ ವಾಣಿಜ್ಯ ಅಥವಾ ಕೈಗಾರಿಕಾ ನಿವೇಶನ ನಿರ್ಮಾಣ, ಅಂತೆಯೇ ವಾಣಿಜ್ಯ ಅಥವಾ ಕೈಗಾರಿಕಾ ನಿವೇಶನಗಳಲ್ಲಿ ವಸತಿ ನಿವೇಶನ ನಿರ್ಮಾಣ), ಸೆಟ್ ಬ್ಯಾಕ್ ಉಲ್ಲಂಘನೆ (ಮಂಜೂರಾದ ಯೋಜನೆ ಅನುಸಾರ ಕಟ್ಟಡದ ಹಿಂದೆ -ಮುಂದೆ, ಅಕ್ಕಪಕ್ಕ ಖಾಲಿ ಬಿಡಬೇಕಾದ ಸ್ಥಳ ಉಲ್ಲಂಘನೆ , 4. ಫ್ಲೋರ್ ಏರಿಯಾ ರೇಷಿಯೋ (FAR) ಉಲ್ಲಂಘನೆ (ಒಟ್ಟು ನಿರ್ಮಿತ ಅಂತಸ್ತುಗಳಲ್ಲಿನ ಒಟ್ಟು ಚದರ ಮೀಟರ್‌ಗಳನ್ನು ನಿವೇಶನದ ಒಟ್ಟು ಚದರ ಮೀಟರ್‌ಗಳಿಂದ ಭಾಗಿಸಿದಲ್ಲಿ ಬರುವ ಅನುಪಾತ)

ಈ ನಾಲ್ಕು ಅಕ್ರಮಗಳಲ್ಲಿ ಕೊನೆಯ ಎರಡು ಅಕ್ರಮಗಳಾದ ಸೆಟ್‌ಬ್ಯಾಕ್ ಉಲ್ಲಂಘನೆ ಹಾಗೂ ಎಫ್‌ಎಆರ್ ಉಲ್ಲಂಘನೆಗಳಲ್ಲಿ ವಸತಿ



ಜನರನ್ನು ದೋಚಲು ನಿಂತ ಪಾಲಿಕೆ

ಕಟ್ಟಡಗಳಲ್ಲಿ ಶೇ 50 ರೊಳಗೆ ಉಲ್ಲಂಘನೆಯಾಗಿದ್ದರೆ ಹಾಗೂ ವಸತಿಯೇತರ ಕಟ್ಟಡಗಳಲ್ಲಿ ಶೇ 25 ರೊಳಗೆ ಉಲ್ಲಂಘನೆಯಾಗಿದ್ದರೆ ಮಾತ್ರ ಸಕ್ರಮಕ್ಕೊಳಪಡಲು ಅರ್ಹವಾಗಿರುತ್ತವೆ.

ಬಣ್ಣ ಬಣ್ಣದ ಅರ್ಜಿಗಳು

ಈ ಮೇಲಿನ ಉಲ್ಲಂಘನೆಗೆ ಒಂದೊಂದಕ್ಕೆ ಒಂದೊಂದು ರೀತಿಯ ದಂಡ ಚದರ ಮೀಟರ್‌ಗೆ ಇಷ್ಟು ಎಂದು ನಿಗದಿಗೊಳಿಸಲಾಗಿದೆ. ಅದನ್ನು ಲೆಕ್ಕಹಾಕಿ ಡಿ.ಡಿ.ಮೂಲಕ ಅರ್ಜಿ ಸಲ್ಲಿಸುವಾಗಲೇ ಪಾವತಿಸಬೇಕು. ಡಿಸೆಂಬರ್ 15 ರ ನಂತರ ಅರ್ಜಿ ಸ್ವೀಕರಿಸುವುದಿಲ್ಲ. ಒಂದೊಂದಕ್ಕೆ ಒಂದೊಂದು ಬಣ್ಣದ ಅರ್ಜಿ ಭರ್ತಿ ಮಾಡಿ ಸಲ್ಲಿಸಬೇಕು. ಅರ್ಜಿಯ ಪರಿಶೀಲನೆಗೆಂದು ರಚಿಸಲಾದ ಸಮಿತಿ, ಅರ್ಜಿಗಳನ್ನು ತಪಾಸಣೆ ಮಾಡಿ ವಿಲೇವಾರಿ ಮಾಡಲಿವೆಯಂತೆ!

ಜಾಹಿರಾತು ಶಲ್ಕ 15,000 ರೂ.

ಭೂ ಬಳಕೆಯಲ್ಲಿನ ಬದಲಾವಣೆ ಮತ್ತು ಮಂಜೂರಾತಿ ಪಡೆಯದೆ ನಿರ್ಮಿಸಲಾದ ಲೇಔಟ್‌ಗಳ ಅಕ್ರಮಕ್ಕೆ ಸಂಬಂಧಿಸಿದಂತೆ ಹಳದಿ ಮತ್ತು ಪಿಂಕ್ ಅರ್ಜಿಗಳನ್ನು ಭರ್ತಿ ಮಾಡಿ ನೀಡಬೇಕು. ಅದಕ್ಕೆ ಬಿಬಿಎಂಪಿಯೊಂದಿಗೆ ಬಿಡಿಎ ಕೂಡಾ ಅನುಮತಿ ನೀಡಬೇಕು. ಸಕ್ರಮಗೊಳಿಸುವ ಮುನ್ನ ಬಿಡಿಎ ಈ ಕುರಿತು ಕಾನೂನು ಪ್ರಕಾರ (ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ-1961) ಪತ್ರಿಕೆಗಳಲ್ಲಿ ಜಾಹಿರಾತು ನೀಡಬೇಕೆಂತೆ, ಅದಕ್ಕೆ ತಗಲುವ ವೆಚ್ಚಕ್ಕೆ ಪ್ರತಿ ಅರ್ಜಿದಾರರು ರೂ. 15000 ಶುಲ್ಕವನ್ನು ದಂಡ ಹೊರತುಪಡಿಸಿ, ಬಿಡಿಎಗೆ ಪಾವರ್ತಿಸಬೇಕು!

ಸೆಟ್‌ಬ್ಯಾಕ್ ಮತ್ತು ಎಫ್‌ಎಆರ್ ಅಕ್ರಮಗಳಲ್ಲಿ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಉಲ್ಲಂಘನೆ ಇದ್ದಲ್ಲಿ ಉಲ್ಲಂಘನೆಯನ್ನು ನಿಗದಿತ ಶೇಕಡವಾರು ಪ್ರಮಾಣಕ್ಕೆ ಇಳಿಸಬೇಕು, ಆನಂತರವಷ್ಟೇ ಅದರ ಸಕ್ರಮಗೊಳ್ಳುವಿಕೆಯ ಪ್ರಶ್ನೆ! ಅಂದರೆ ಅಷ್ಟು ಶೇಕಡಾವಾರು ಪ್ರಮಾಣದ ಕಟ್ಟಡವನ್ನು ಒಡೆದುಹಾಕಬೇಕಂತೆ!

ಇಂದಿನ ಪರಿಸ್ಥಿತಿಯಲ್ಲಿ ಶೇ. 90 ರಷ್ಟು ಕಟ್ಟಡಗಳಲ್ಲಿ ಒಂದಲ್ಲ ಒಂದು ಉಲ್ಲಂಘನೆ ಇದ್ದೇ ಇದೆ. ಅದರ ಜೊತೆಯಲ್ಲೇ ಪ್ಲಾನಿಂಗ್ ಮತ್ತಿತರ ಗೋಜಿಗೆ ಅನೇಕ ಮಂದಿ, ಜೀವನದಲ್ಲಿ ಒಂದು ಬಾರಿ ಮನೆ ಕಟ್ಟುವವರು ಹೋಗುವುದೇ ಇಲ್ಲ. ಹಾಗಾಗಿ ಉಲ್ಲಂಘನೆ ಇದ್ದೇ ಇರುತ್ತದೆ. ಅದರೊಟ್ಟಿಗೆ ಬಹುತೇಕ ಎಲ್‌ಐಜಿ(ಕಡಿಮೆ ಆದಾಯ ಗುಂಪಿನ) ಪ್ರದೇಶದ ಮನೆಗಳಲ್ಲಿ ನೂರಕ್ಕೆ ನೂರರಷ್ಟು ಸೆಟ್‌ಬ್ಯಾಕ್ ಉಲ್ಲಂಘನೆ ಇದ್ದೇ ಇರುತ್ತದೆ. ಅಂತೆಯೇ ಎಂಐಜಿ ಮತ್ತು ಹೆಚ್‌ಐಜಿ (ಮಧ್ಯಮ ಹಾಗೂ ಹೆಚ್ಚು ಆದಾಯ ಗುಂಪಿನ) ಪ್ರದೇಶದ ಮನೆಗಳ ಒಡೆಯರಿಗಿರುವ 'ವಾಸ್ತು ಗೀಳು' ಬಹುತೇಕ ಉಲ್ಲಂಘನೆಗಳನ್ನು ಮಾಡಿಸಿರುತ್ತದೆ. ಅವರೆಲ್ಲಾ ದಂಡ ತೆತ್ತು ಸಕ್ರಮಗೊಳಿಸಿಕೊಳ್ಳಬೇಕು. ಆದರೆ ಈ ಕಟ್ಟಡ ನಿರ್ಮಾಣದ ಸಮಯದಲ್ಲಿ ಅದಕ್ಕೆ ಮೌನ ಸಮ್ಮತಿ (ಕೈ ಬಿಸಿಗೊಳಿಸಿದ ನಂತರ) ಅಧಿಕಾರಿಗಳು ನೀಡಿದ ಪರಿಣಾಮವಾಗಿ ಕಂದಾಯ ನಿಗದಿಗೊಳಿಸಿದ ಪರಿಣಾಮ, ಆನಂತರ ಸಂಬಂಧಿತ ಸ್ಥಳೀಯ ಸಂಸ್ಥೆ ಅಧಿಕಾರಿಗಳು ಎನ್‌ಓಸಿ (ಆಕ್ಷೇಪಣೆ ರಹಿತ ಪತ್ರ) ನೀಡಿದ ನಂತರವೇ ಮನೆಗಳಿಗೆ ವಿದ್ಯುತ್ ಹಾಗೂ ನೀರಿನ ಸಂಪರ್ಕ ಸಿಗುವುದು. ಹಿಂದೆ ಎನ್‌ಓಸಿ ನೀಡಿರುವ ಕಟ್ಟಡಗಳು ಇಂದೇಕೆ ಅಕ್ರಮವಾದವು? ಅಂತಹ ಅಕ್ರಮಗಳನ್ನು ನಿಗದಿತ ದಿನದೊಳಗೆ ಸಕ್ರಮಗೊಳಿಸದಿದ್ದಲ್ಲಿ ನೀರು ಹಾಗೂ ವಿದ್ಯುತ್ ಕಡಿತ ಮಾಡುವ ಬೆದರಿಕೆಯನ್ನು ಯೋಜನೆ ಭಾಗವಾಗಿ ನಾಗರಿಕರಿಗೆ ಒಡ್ಡಲಾಗಿದೆ. ಸೈಟ್ ಕೊಳ್ಳುವುದೊಂದು ಕಷ್ಟ, ಕೊಂಡಮೇಲೆ ಮನೆ ಕಟ್ಟುವುದು ಇನ್ನೊಂದು ಕಷ್ಟ.ಅಂತಹದರಲ್ಲಿ ಬಿಬಿಎಂಪಿ ಯವರು ಇಂತಹ ಬೆದರಿಕೆ ಒಡ್ಡಿದರೆ, ಇದು ಅಕ್ರಮ - ಸಕ್ರಮವಲ್ಲ ಬದಲಿಗೆ ಜೇಮ್ಸ್‌ಬಾಂಡ್ 007 ಇದ್ದಂತೆ ಸಕ್ರಮ - 07 ಎಂಬ ಬಿಬಿಎಂಪಿಯವರ ಪರಾಕ್ರಮವಾಗಲಿದೆ!

ಬಹುತೇಕ ಈ ಅಕ್ರಮಗಳಿರುವುದು ಇತ್ತೀಚೆಗೆ ಬಿಬಿಎಂಪಿಗೆ ಸೇರ್ಪಡೆಗೊಂಡ ಹಿಂದಿನ ಸಿಎಂಸಿ ಪ್ರದೇಶಗಳು. ಬಿಬಿಎಂಪಿ ಗೆ ಸೇರ್ಪಡೆಯಾಗಿದ್ದೇವೆ ಇನ್ನೇನು ರಸ್ತೆ, ನೀರು, ಒಳಚರಂಡಿ ಬಿಎಂಟಿಸಿ ಪಾರ್ಕ್, ಆಟದ ಮೈದಾನ ಸಿಗಲಿದೆ ಎಂದು ಭಾವಿಸಿದ ಮಂದಿಗೆ ಅವರನ್ನು ದೋಚುವ ಮತ್ತೊಂದು ಯೋಜನೆಯಾಗಿ ದುರಾಕ್ರಮವಾಗಿ ಹೆಮ್ಮಾರಿಯಂತೆ ಸ್ವಂತ ಮನೆ - ನಿವೇಶನ ಉಳ್ಳ ಬಡ, ಮಧ್ಯಮ ವರ್ಗದ ಕಾರ್ಮಿಕ ಹಾಗೂ ನೌಕರರ ಮೇಲೆ ಬಂದೆರಗಿದೆ.



ಹಿಂದಿನ ಸಿಎಂಸಿಗಳಿಗೆ ಕಟ್ಟಡ ಬೆಟರ್ ಮೆಂಟ್ ಶುಲ್ಕ, ಕಾವೇರಿ ನೀರಿಗಾಗಿನ ವಂತಿಗೆ, ಒಳಚರಂಡಿ ವಂತಿಗೆ ನೀಡಿ, ಆಗಲೂ ಎನ್‌ಓಸಿ ಪಡೆಯುವಾಗ ನೀಡಬೇಕಿದ್ದ ಶುಲ್ಕ ಅಥವಾ ದಂಡ ತೆತ್ತೇ ವಿದ್ಯುತ್ ಹಾಗೂ ನೀರಿನ ಸಂಪರ್ಕ, ಒಳಚರಂಡಿ ಸಂಪರ್ಕ ಪಡೆದಿದ್ದಾರೆ. ಅಂದರೆ ಹಿಂದೆಯೇ ಅಕ್ರಮಗಳನ್ನು ಸಕ್ರಮಗೊಳಿಸಿಕೊಳ್ಳಲಾಗಿದೆ. ಹಾಗಾಗಿಯೇ ಸಕ್ರಮ -07 ನ ಪ್ರಸ್ತುತತೆಯಾದರೂ ಏನು?

ಈ ದುಬಾರಿ ಶುಲ್ಕಗಳನ್ನು ಕೂಡಲೇ ಕಡಿತ ಮಾಡಬೇಕು, ಯೋಜನೆಯ ಕಾಲಾವಧಿಯನ್ನು ವಿಸ್ತರಿಸಬೇಕು, ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಈಯೋಜನೆ ಜಾರಿಗೊಳಿಸ ಬಾರದೆಂದು ಒತ್ತಾಯಿಸಿ ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿ ನವೆಂಬರ್ 27 ರಂದು ಬಿಬಿಎಂಪಿ ಮುಂದೆ ಪ್ರತಿಭಟನೆ ನಡೆಸುತ್ತಿದೆ.

ಕಟ್ಟಬೇಕಾದ ದಂಡ ಎಷ್ಟು?

60 ಚದರ ಮೀಟರ್ ಒಳಗಿನ ನಿವೇಶನ / ಕಟ್ಟಡ ಚ.ಮಿ. ಗೆ ರೂ. 200, 120 ಚ.ಮಿ. ಒಳಗಿನ ಒಂದು ನಿವೇಶನ/ಕಟ್ಟಡ ರೂ. 400 ಹಾಗೂ 250 ಚ.ಮಿ. ಒಳಗಿನ ನಿವೇಶನ/ ಕಟ್ಟಡಕ್ಕೆ ರೂ. 600 ರಂತೆ ಲೆಕ್ಕಹಾಕಿ ದಂಡ ತೆರಬೇಕು. ಚ.ಮಿ. 61 ಆದೊಡನೆ ದಂಡದ ಲೆಕ್ಕ ರೂ. 400 ರಂತೆ ಆಗುತ್ತದೆ ಎಂಬುದನ್ನು ಈ ಶುಲ್ಕ ನಿಗದಿ ಹಿಂದಿರುವ ದೋಚುವ ಪ್ರಮಾಣವನ್ನು ಅರಿಯಬೇಕಿದೆ. ಅಂದರೆ ಪ್ರತಿ ಯಾವುದಾದರೂ ಕಟ್ಟಡದ ಮೇಲಿನ 4 ಅಕ್ರಮಗಳಿದ್ದರೆ, ಕನಿಷ್ಟ 4 ರಿಂದ 5 ಲಕ್ಷ ರೂ.ಗಳನ್ನು 30X40 ನಿವೇಶನ/ಕಟ್ಟಡಕ್ಕೆ ತೆರಬೇಕು. ಪರಿಶೀಲನೆಗೆ ಚ.ಮಿ.ಗೆ ರೂ. 1 ರಂತೆ ಹಾಗೂ ಎಫ್‌ಎಆರ್ ಉಲ್ಲಂಘನೆ ಪರಿಶೀಲನೆಗೆ ಚ.ಮಿ. ರೂ.2 ರಂತೆ ನೀಡಬೇಕು. ಇದರೊಟ್ಟಿಗೆ ಜಾಹಿರಾತು ಶುಲ್ಕ ಬೇರೆ. ಅಂದರೆ ಒಟ್ಟಾರೆ ಜೀವನವಿಡಿ ದುಡಿದು ಅಥವಾ ಜೀವನವಿಡೀ ತೀರಿಸಬೇಕಾದ ಸಾಲ ಮಾಡಿ ಕಟ್ಟಿದ ಮನೆ ಅಥವಾ ಕೊಂಡ ನಿವೇಶನ ಸಕ್ರಮಗೊಳಿಸಲು ಮತ್ತೊಂದು ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗಿದೆ. ಹಾಗಾಗಿಯೇ ಉದಾರೀಕರಣ - ಖಾಸಗೀಕರಣದ ರುವಾರಿ ಪಕ್ಷವಾದ ಕಾಂಗ್ರೆಸ್‌ನ ಶಾಸಕರೊಬ್ಬರು ಅಕ್ರಮ - ಸಕ್ರಮ ಶುಲ್ಕ ಪಾವತಿಸಲು ಬಿಬಿಎಂಪಿ ಯೇ ಬ್ಯಾಂಕ್ ಸಾಲ ಕೊಡಿಸುವ ವ್ಯವಸ್ಥೆ ಕಲ್ಪಿಸಬೇಕೆಂಬ ಬೇಡಿಕೆ ಮುಂದಿಟ್ಟಿದ್ದಾರೆ. ಕೇವಲ 3 ತಿಂಗಳ ಅವಧಿ ನೀಡಿ, ಯಾರೊಂದಿಗೆ ಕೂಡ ಚರ್ಚಿಸದೆ ಏಕಾಏಕಿ ದಂಡ ನಿಗದಿ ಮಾಡಿ, ಕಟ್ಟಬೇಕು ಇಲ್ಲದಿದ್ದರೆ ಕರೆಂಟ್ ಇಲ್ಲ, ನೀರಿಲ್ಲ ಎಂಬ ಬೆದರಿಕೆ ಒಡ್ಡುವ ತಂತ್ರ, ಚಾಣಕ್ಯನ ಅರ್ಥಶಾಸ್ತ್ರದಲ್ಲಿ ಅಪಾರ ನಂಬಿಕೆ ಇರಿಸಿರುವ, ವಿಶ್ವಬ್ಯಾಂಕ್, ಐಎಂಎಫ್ ನ ಬಂಡವಾಳ ಕ್ರೋಢೀಕರಿಸುವ ಸೂತ್ರಗಳನ್ನು ಅರಗಿಸಿಕೊಂಡಿರುವ ಬಿಜೆಪಿ (ಭಾರತೀಯ ಜನರ ದೋಚುವ ಪಕ್ಷ) ಯ, ಅಂದಿನ ಮುಖ್ಯಮಂತ್ರಿಗಳು ಹಾಗೂ ಅಂದಿನ ಕುಮಾರಸ್ವಾಮಿ ಮಂತ್ರಿ ಮಂಡಲದ ಹಣಕಾಸು ಸಚಿವರಾಗಿದ್ದ ಮಾನ್ಯ ಯಡ್ಯೂರಪ್ಪನವರ ಜನಪರ ಬಜೆಟ್(ಜನರ ದೋಚುವ)ನ ಒಂದು ಸಣ್ಣ ಸ್ಯಾಂಪಲ್ ಅಷ್ಟೆ ಈ ಅಕ್ರಮ-ಸಕ್ರಮ ಎಂಬ ದೋಚುವ ದುರಾಕ್ರಮ.



ಮಂಗಳೂರು : ಕತ್ತಲೆಯ ಓಡಿಸಿದ ಉರಿವ ಪಂಜುಗಳು

ಮೊನ್ನೆ ಮಂಗಳೂರಿನಲ್ಲಿ ಕತ್ತಲಾವರಿಸುತ್ತಿದ್ದಂತೆಯೇ ಎಲ್ಲೆಲ್ಲೂ ಚಿಮಿಣಿ, ದೊಂದಿ, ಪಂಜು, ಕ್ಯಾಂಡಲ್, ಲಾಟೀನುಗಳು ಬೆಳಗಿದವು. ಜಿಲ್ಲಾಧಿಕಾರಿ ಕಛೇರಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ದಶಕಗಳ ಹಿಂದೆ ಗ್ರಾಮೀಣ ಪ್ರದೇಶದ ಜನ ಬೆಳಕಿಗಾಗಿ ಉಪಯೋಗಿಸುತ್ತಿದ್ದ ಸಾಧನಗಳನ್ನು ಹಿಡಿದಿದ್ದ ಡಿವೈಎಫ್ಐನ ನೂರಾರು ಕಾರ್ಯಕರ್ತರು ನೆರೆದಿದ್ದರು.

ನಗರದ ಜನ ಆಶ್ಚರ್ಯ, ಕುತೂಹಲದಿಂದ ನೋಡು ನೋಡುತ್ತಿದ್ದಂತೆಯೇ ಘೋಷಣೆಗಳನ್ನು ಕೂಗುತ್ತಾ, ಪಂಜುಗಳನ್ನ ಪ್ರಜ್ವಲಿಸುತ್ತಾ ಡಿವೈಎಫ್ಐ ಕಾರ್ಯಕರ್ತರು ನಗರದಾದ್ಯಂತ ಮೆರವಣಿಗೆ ನಡೆಸಿದರು. ಅನಂತರ ಮೆಸ್ಕಾಂ ಪ್ರಧಾನ ಕಛೇರಿಯ ಎದುರು ಜಮಾಯಿಸಿ ತೀವ್ರ ಪ್ರತಿಭಟನೆಯನ್ನು ನಡೆಸಿದರು. ಸೇರಿದ ಕಾರ್ಯಕರ್ತರ ಮುಖದಲ್ಲಿ ಘೋಷಣೆಯಲ್ಲಿ ವ್ಯಕ್ತವಾಗುತ್ತಿದ್ದ ಆಕ್ರೋಶದ ಎದುರು ಪಂಜು, ಲಾಟೀನಿನ ಬೆಂಕಿಯೇ ಮಂಕಾದಂತೆ ತೋರುತ್ತಿತ್ತು. ಕಛೇರಿಯ ಎ.ಸಿ.ಕೋಣೆಯಲ್ಲಿ ಅಧಿಕಾರಿಗಳು ಕುಳಿತಲ್ಲೇ ಬೆವರುತ್ತಿದ್ದರು.

ಇಷ್ಟು ತೀವ್ರವಾದ ಪ್ರತಿಭಟನೆ ನಡೆದದ್ದು ಮೆಸ್ಕಾಂ ಹೆಚ್ಚುವರಿ ಡಿಪಾಸಿಟ್ ನೀತಿಯ ವಿರುದ್ಧ. ಕಳೆದ ಫೆಬ್ರವರಿ ತಿಂಗಳಲ್ಲಿಯೇ ಮೆಸ್ಕಾಂ ಗ್ರಾಹಕರಿಂದ ಮೂರು ತಿಂಗಳ ಬಿಲ್ಲಿನ ಮೊತ್ತದಷ್ಟು ಹಣವನ್ನು ಠೇವಣಿಯಾಗಿ ಪಾವತಿಸಬೇಕು ಇಲ್ಲದಿದ್ದರೆ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗುವುದು ಎಂಬ ನೋಟೀಸು ಜಾರಿಗೊಳಿಸಿತ್ತು. ಬೆಸ್ಕಾಂನ ಈ ನೋಟೀಸು ನೋಡಿ ಮಂಗಳೂರಿನ ಜನ ಕಂಗಾಲಾದರು. ಆಗ ಮಧ್ಯ ಪ್ರವೇಶಿಸಿದ ಡಿವೈಎಫ್ಐ ಸಂಘಟನೆ ಈ ನೋಟೀಸನ್ನು ಗಂಭೀರವಾಗಿ ಪರಿಗಣಿಸಿತು. ಇದು ಮೆಸ್ಕಾಂ ಅನ್ನು ಖಾಸಗಿ ಬಂಡವಾಳಿಗರಿಗೆ ಮಾರುವ ಹುನ್ನಾರ. ದಿನ ನಿತ್ಯದ ಖರ್ಚು ವೆಚ್ಚವನ್ನು ಭರಿಸಲಾಗದೆ ಕಂಗಾಲಾಗಿರುವ ಜನ ಸಾಮಾನ್ಯರಿಂದ ಹೆಚ್ಚುವರಿ ಠೇವಣಿ ವಸೂಲಿಗೆ ಹೊರಟಿರುವುದು ಹಗಲು ದರೋಡೆ, ಯಾವುದೇ ಕಾರಣಕ್ಕೂ ಜನ ಸಾಮಾನ್ಯರು ಠೇವಣಿ ಪಾವತಿಸಬಾರದು ಎಂದು ಡಿವೈಎಫ್ಐ ಮೆಸ್ಕಾಂ ವಿರುದ್ಧ ಅಸಹಕಾರ ಚಳುವಳಿಗೆ ಕರೆ ನೀಡಿತು. ಫೆಬ್ರವರಿ, ಮಾರ್ಚ್ ತಿಂಗಳಾದ್ಯಂತ ಅಸಹಕಾರ ಚಳುವಳಿಯ ಭಾಗವಾಗಿ ಮಂಗಳೂರಿನಲ್ಲಿರುವ ಎಲ್ಲಾ ಮೆಸ್ಕಾಂ ಕಛೇರಿಗಳಿಗೆ ಸ್ಥಳೀಯ ಡಿವೈಎಫ್ಐ ಘಟಕಗಳು ಮುತ್ತಿಗೆ ಹಾಕಿದವು. ಮೆಸ್ಕಾಂ ಕಛೇರಿಗಳ ಎದುರಿನಲ್ಲಿಯೇ ಮೆಸ್ಕಾಂನ ನೋಟೀಸನ್ನು ಸುಡಲಾಯಿತು. ಈ ತೀವ್ರ ಪ್ರತಿಭಟನೆಯಿಂದ ಕಂಗಾಲಾದ ಮೆಸ್ಕಾಂ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. ಸಾರ್ವಜನಿಕರು ನಿಟ್ಟುಸಿರು ಬಿಟ್ಟು ಸುಮ್ಮನಾದರು.

ಹೋರಾಟದ ಬಿಸಿ ಕಡಿಮೆಯಾಗುತ್ತಿದ್ದಂತೆಯೇ ಮತ್ತೆ ಬಾಲ ಬಿಚ್ಚಿದ ಮೆಸ್ಕಾಂ ಅಧಿಕಾರಿಗಳು ಈ ಬಾರಿ ತಿಂಗಳ ಬಿಲ್ಲಿನ ಕೆಳಭಾಗದಲ್ಲಿಯೇ ಠೇವಣಿ ಮೊತ್ತವನ್ನು ನಮೂದಿಸಿ, ಕಾರ್ಯಾಚರಣೆಗೆ ಇಳಿದರು. ಠೇವಣಿ ಪಾವತಿಸದ ಗ್ರಾಹಕರ ವಿದ್ಯುತ್ ಸಂಪರ್ಕವನ್ನು ಕಡಿಯುವ ಪ್ರಯತ್ನಕ್ಕೆ ಕೈ ಹಾಕಿದರು. ಈ ಸಂದರ್ಭದಲ್ಲಿ ಜನ ಕಾಂಗ್ರೆಸ್ ಶಾಸಕ ಯು.ಟಿ. ಖಾದರ್ ಬಳಿ ಗೋಳು ಹೇಳಿಕೊಂಡರೆ ಮೆಸ್ಕಾಂ ಪರ ವಹಿಸಿದ ಖಾದರ್ ಒಮ್ಮೆಲೇ ಕಟ್ಟಲು ಕಷ್ಟವಾದರೆ ಕಂತಿನಲ್ಲಿ ಪಾವತಿಸಿ ಎಂಬ ಬಿಟ್ಟಿ ಉಪದೇಶ ನೀಡಿದರು.

ಈ ಸಂದರ್ಭದಲ್ಲಿ ಡಿವೈಎಫ್ಐ ಮತ್ತೆ ಅಸಹಕಾರ ಚಳುವಳಿಯನ್ನು ಘೋಷಿಸಿ ಜನರು ಯಾವುದೇ ಕಾರಣಕ್ಕೂ ಠೇವಣಿಯನ್ನು ಪಾವತಿಸದೇ ಪ್ರತಿಭಟಿಸಬೇಕೆಂದು ಕರೆ ನೀಡಿತು. ಈ ಹೋರಾಟಕ್ಕೆ ಜನರಲ್ಲಿ ಜಾಗೃತಿ ಹುಟ್ಟಿಸಿ ಧೈರ್ಯ ತುಂಬುವ ಸಲುವಾಗಿ ಡಿವೈಎಫ್ಐ ಮೆಸ್ಕಾಂ ಪ್ರಧಾನ ಕಛೇರಿಯ ಎದುರು, ದೊಂದಿ,


ಮೆಸ್ಕಾಂ ಮುಂದೆ ಪ್ರತಿಭಟನೆ

ಚಿಮಿಣಿ, ಲಾಟೀನು, ಪಂಜು, ಕ್ಯಾಂಡಲ್ ಪ್ರದರ್ಶನವನ್ನು ಏರ್ಪಡಿಸಿತು. ಈ ಕಾರ್ಯಕ್ರಮದ ಪ್ರಚಾರದ ತೀವ್ರತೆಯಿಂದ ಜಿಲ್ಲೆಯ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಸಂಘಟನೆಗಳವರು ಮೆಸ್ಕಾಂನ ಠೇವಣಿ ನೀತಿಯ ವಿರುದ್ಧ ಮಾತನಾಡಲು ಆರಂಭಿಸಿದರು. ಇದರಿಂದ ಕಂಗಾಲಾದ ಮೆಸ್ಕಾಂನ ಹಿರಿಯ ಅಧಿಕಾರಿಗಳು ಮಂಗಳೂರಿಗೆ ಆಗಮಿಸಿ ಡಿವೈಎಫ್ಐ ಜಿಲ್ಲಾಧ್ಯಕ್ಷರನ್ನು ಫೋನ್‌ನಲ್ಲಿ ಸಂಪರ್ಕಿಸಿ ಹೋರಾಟವನ್ನು ನಿಲ್ಲಿಸಿ ಮಾತುಕತೆಗೆ ಬರುವಂತೆ ಕರೆದರು. ಮೆಸ್ಕಾಂ ತನ್ನ ಕಾರ್ಯಾಚರಣೆಯನ್ನು ನಿಲ್ಲಿಸದೇ ಮಾತುಕತೆಯೇ ಇಲ್ಲ ಎಂದು ಘೋಷಿಸಿದ ಡಿವೈಎಫ್ಐನ ಪ್ರತಿಭಟನೆಗೆ ಜನರಿಂದ ಉತ್ತಮ ಬೆಂಬಲ ವ್ಯಕ್ತವಾಯಿತು.

ಮರು ದಿವಸ ಉಳ್ಳಾಲದಲ್ಲಿ ಸಿಪಿಐ(ಎಂ) ಪಕ್ಷ ಉಳ್ಳಾಲದ ಮೆಸ್ಕಾಂ ಕಛೇರಿಯ ಎದುರು ಪ್ರತಿಭಟನೆಯನ್ನು ನಡೆಸಿತು. ಪ್ರತಿಭಟನೆಯ ತೀವ್ರತೆಯಿಂದ ನಡುಗಿದ ಮೆಸ್ಕಾಂ ಅಧಿಕಾರಿಗಳು ಸಂಘಟನೆ ಮತ್ತು ಮೆಸ್ಕಾಂ ಅಧಿಕಾರಿಗಳ ಸಕಾರಾತ್ಮಕ ತೀರ್ಮಾನ ಏರ್ಪಡಿಸುವವರೆಗೆ ಠೇವಣಿ ವಸೂಲಿ ಮಾಡುವುದಿಲ್ಲ ಎಂಬ ಭರವಸೆಯನ್ನು ನೀಡಿದರು.

ಈಗ ಡಿವೈಎಫ್ಐ ಪ್ರಭಾವವಿರುವ ಕಡೆ ವಸೂಲಾತಿ ನಿಲ್ಲಿಸಿರುವ ಮೆಸ್ಕಾಂ, ಸಂಘಟನೆ ಇಲ್ಲದ ಕಡೆ ಗ್ರಾಹಕರನ್ನು ಬೆದರಿಸಿ ಠೇವಣಿ ವಸೂಲಿ ನಡೆಸುತ್ತಿದೆ. ಇದರ ವಿರುದ್ಧ ಹೋರಾಟವನ್ನು ಮುಂದುವರಿಸಿರುವ ಡಿವೈಎಫ್ಐ ಚಳುವಳಿಯನ್ನು ಗ್ರಾಮ ಮಟ್ಟಕ್ಕೆ ವಿಸ್ತರಿಸಿದೆ. ಗ್ರಾಮ ಮಟ್ಟದಲ್ಲಿ ಮನೆ ಮನೆಗೆ ಕರಪತ್ರ ವಿತರಣೆ, ಪಂಜಿನ ಮೆರವಣಿಗೆಯಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಚಳುವಳಿಯನ್ನು ನಿರ್ಣಾಯಕ ಹಂತಕ್ಕೆ ತಲುಪಿಸಿ ಮೆಸ್ಕಾಂ ತನ್ನ ನಿರ್ಧಾರದಿಂದ ಹಿಂದಕ್ಕೆ ಸರಿಯುವವರೆಗೆ ಹೋರಾಟವನ್ನು ಮುಂದುವರೆಸಲು ನಿರ್ಧರಿಸಿದೆ.

■ ದಯಾನಂದಶೆಟ್ಟಿ, ಮಂಗಳೂರು

ಚಿಂತಾಮಣಿ : ನಿವೇಶನ, ಮನೆಗಾಗಿ ...

ಗುಡಿಸಲು ಹಾಕಿಕೊಳ್ಳಲು ಜಾಗ ಇಲ್ಲದ, ಅಲ್ಪ ಸ್ವಲ್ಪ ಜಾಗ ಇದ್ದರೂ ಗುಡಿಸಲು ಹಾಕಿಕೊಳ್ಳಲು ಶಕ್ತಿ ಇಲ್ಲದ ಚಿಂತಾಮಣಿ ಪಟ್ಟಣದ ಬಡ ದಲಿತರು, ಅಲ್ಪ ಸಂಖ್ಯಾತರು ಸತತ ಮೂರು ವಾರಗಳಿಂದ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ವಿವಿಧ ರೀತಿಯ ಹೋರಾಟಗಳನ್ನು ನಡೆಸುತ್ತಿದ್ದಾರೆ. ಅವರ ಹೊಟ್ಟೆಯಲ್ಲಿರುವ ಹಸಿವು ರಟ್ಟೆಗೆ ಬಂದಿದೆ.

ಒಂದು ಅಂದಾಜಿನಂತೆ ಚಿಂತಾಮಣಿ ನಗರದಲ್ಲಿ 20 ಸಾವಿರ ಮಂದಿ ಮನೆ, ನಿವೇಶನ ಇಲ್ಲದೆ ಇದ್ದಾರೆ. ನಗರ ಸಭೆ ಅಧಿಕಾರಿಗಳು ಹಾಗೂ ಶಾಸಕರು ಸೇರಿದಂತೆ ಇತರ ಜನಪ್ರತಿನಿಧಿಗಳಾದರೂ ಇತ್ತ ಗಮನ ಹರಿಸಿಲ್ಲ. ಇದರ ಬದಲಾಗಿ ಜನಪ್ರತಿನಿಧಿಗಳು ದೇವರ ಹೆಸರಿನಲ್ಲಿ ಭೂಮಿಗಳನ್ನು ಆಕ್ರಮಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಶಾಸಕ ಸುಧಾಕರರೆಡ್ಡಿ ಕೈಲಾಸ ಪರ್ವತ ಹೆಸರಿನಲ್ಲಿ ನೂರಾರು ಎಕರೆ ಜಮೀನನ್ನು ಗುಳುಂ ಮಾಡಿದ್ದರೆ, ಮಾಜಿ ಸಚಿವ ಕೃಷ್ಣಾರೆಡ್ಡಿ ಕಾಡುಮಲ್ಲೇಶ್ವರ ದೇವಾಲಯದ ಹೆಸರಿನಲ್ಲಿ ನೂರಾರು ಎಕರೆ ಸರ್ಕಾರಿ ಭೂಮಿ ಹೊಡೆಯಲು ಬೇಕಾದ ಎಲ್ಲ ಸಿದ್ಧತೆ ನಡೆಸಿದ್ದಾರೆ. ಅದರಲ್ಲಿ ಸ್ವಲ್ಪ ಭಾಗವನ್ನು ಈಗಾಗಲೇ ಕಬ್ಜಾ ಮಾಡಿಯಾಗಿದೆ. ಶ್ರೀನಿವಾಸಪುರದ ಮತ್ತೊಬ್ಬ ಮಾಜಿ ಶಾಸಕರಾದ ವೆಂಕಟಶಿವಾರೆಡ್ಡಿ ಶ್ರೀನಿವಾಸ ಪುರ ರಸ್ತೆಯಲ್ಲಿರುವ ಗೋಪಸಂದ್ರ ಕೆರೆಯನ್ನೇ ನುಂಗಲು ಹೊರಟಿದ್ದು, ಈಗಾಗಲೇ ಇಟ್ಟಿಗೆ ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ. ಇನ್ನು ಬೇನಾಮಿ ಹೆಸರಿನಲ್ಲಿ ಅದೆಷ್ಟು ಭೂಮಿ ಕಬಳಿಸಿದ್ದಾರೊ ಇನ್ನಷ್ಟೇ ಹೊರಬರಬೇಕು. ಆದರೆ ಬಡವರು ಮಾತ್ರ ಇನ್ನೂ ಇರಲು ಸರಿಯಾದ ನೆಲೆಯಿಲ್ಲದೆ ಪರದಾಡುವಂತಾಗಿದೆ.

ಪಟ್ಟಣದ ಅಂಚಿನಲ್ಲಿರುವ ಆಶ್ರಯ ಬಡಾವಣೆಯನ್ನು ಮನೆ ನಿವೇಶನ ಇಲ್ಲದವರಿಗೆ ಮೀಸಲಾಗಿಟ್ಟಿದ್ದರೂ ಅಲ್ಲಿನ ನಿವೇಶನಗಳನ್ನು ಬಡವರಿಗೆ ಹಂಚದೆ ಉಳ್ಳವರಿಗೆ, ಪ್ರಭಾವಿಗಳಿಗೆ ಹಂಚಿಕೆ ಮಾಡಲಾಗಿದೆ. ಅಲ್ಲಿ ಅವರು ಮನೆಗಳನ್ನು ನಿರ್ಮಾಣ ಮಾಡಿ ಬಾಡಿಗೆಗಳಿಗೆ ಇತರರಿಗೆ ಮನೆಗಳನ್ನು ನೀಡಿದ್ದಾರೆ. ಕೊಳಚೆ ನಿರ್ಮೂಲನ ಮಂಡಳಿಗೆ ಸೇರಿದ ಈ ಭೂಮಿಯಲ್ಲಿ ಉಳಿದ ಭಾಗವನ್ನು ಬಡವರಿಗೆ ಹಂಚಲು ಮನಸ್ಸಿಲ್ಲದ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಉದ್ಯಾನವನ ನಿರ್ಮಾಣ ಮಾಡುವ ಸಂಚು ರೂಪಿಸಿದ್ದಾರೆ. ಈಗಿರುವ ಬಡವರಿಗೆ ಸರಿಯಾಗಿ ಕುಡಿವ ನೀರಿನ ವ್ಯವಸ್ಥೆ ಇಲ್ಲ, ಪಡಿತರ ಚೀಟಿ ಇಲ್ಲ, ಶೌಚಾಲಯ, ದಾರಿ ದೀಪದ ವ್ಯವಸ್ಥೆ ಇಲ್ಲದಿರುವಾಗ ಉಳ್ಳವರಿಗೆ ಉದ್ಯಾನವನ ಕಲ್ಪಿಸುವುದು ಇವರ ನೀತಿಯಾಗಿದೆ. ಈ ಕುರಿತು ಹಲವಾರು ಮನವಿಗಳನ್ನು ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಅನ್ಯ ಮಾರ್ಗವಿಲ್ಲದೆ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಹೋರಾಟಕ್ಕೆ ಮುಂದಾಗಿದ್ದಾರೆ. ಪಕ್ಷದ ನೇತೃತ್ವದಲ್ಲಿ ಬಡವರ ಮೂಲಕ ಈ ಪ್ರದೇಶದಲ್ಲಿ ಗುಡಿಸಲುಗಳನ್ನು ಹಾಕಿಸಲಾಗಿದೆ. ಮೂರು ವಾರಗಳಿಂದ ನಗರದಲ್ಲಿ ಹಲವಾರು ಧರಣಿ, ಪ್ರತಿಭಟನಾ ಮೆರವಣಿಗೆಗಳನ್ನು ನಡೆಸಲಾಗಿದೆ. ಕಳೆದ 12 ರಂದು ಬೃಹತ್ ರ್‍ಯಾಲಿಯನ್ನು ಸಂಘಟಿಸಿ ನಗರಸಭೆಗೆ ಮುತ್ತಿಗೆ ಹಾಕಲಾಯಿತು. ಸಾವಿರಾರು ಮಂದಿ ಬಡವರು ಈ ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದರು. ಈ ಗುಡಿಸಲುಗಳನ್ನು ತೆರವುಗೊಳಿಸಲು ಅಧಿಕಾರಿಗಳು ಮುಂದಾದಾಗ ಅಲ್ಲಿನ ಮಹಿಳೆಯರು ಕೆಚ್ಚೆದೆಯಿಂದ ಹಿಮ್ಮೆಟ್ಟಿಸಿದ್ದಾರೆ. ಮನೆ ಮಠ ಇಲ್ಲದವರಿಗೆ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸುವವರೆಗೂ ಗುಡಿಸಲುಗಳನ್ನು ತೆರವುಗೊಳಿಸಲು ಅವಕಾಶ ನೀಡುವುದಿಲ್ಲ ಎಂದು ಸಡ್ಡು ಹೊಡೆದು ನಿಂತಿದ್ದಾರೆ. ಹೆಚ್ಚಾಗಿ ದಲಿತರು, ಅಲ್ಪಸಂಖ್ಯಾತರು, ಕೂಲಿ ಕಾರ್ಮಿಕರು ವಾಸಿಸುವ ಟಿಪ್ಪು ನಗರ, ವೆಂಕಟಗಿರಿ ಕೋಟೆ, ಬಂಬೂಬಜಾರ್, ಶ್ರೀರಾಮನಗರ, ಅಗ್ರಹಾರ ಪ್ರದೇಶದ ಜನ ನೂರಾರು ಸಂಖ್ಯೆಯಲ್ಲಿ ಹೋರಾಟದಲ್ಲಿ ತೊಡಗಿದ್ದಾರೆ. ನಿವೇಶನ ಇಲ್ಲ, ಮನೆ ಇಲ್ಲದ ಸಾವಿರಾರು ಜನ ತಮ್ಮ ಹೆಸರುಗಳನ್ನು ನೊಂದಾಯಿಸುತ್ತಿದ್ದಾರೆ. ಕೂಲಿನಾಲಿ ಮಾಡುವ, ಸಣ್ಣಪುಟ್ಟ ವ್ಯಾಪಾರ ಮಾಡುವ ಬಸ್ ನಿಲ್ದಾಣ, ಎಪಿಎಂಸಿ ಮಾರುಕಟ್ಟೆಯಲ್ಲಿ ಕೆಲಸ ಮಾಡುವ ಈ ಜನರ ಸಮಸ್ಯೆಗಳು ಹೇಳತೀರವಾಗಿದೆ.

ನಗರಸಭೆ ಆಯುಕ್ತ ಯರ್ರಪ್ಪ ಮಹಾಭ್ರಷ್ಟನಾಗಿದ್ದು ಒಮ್ಮೆಯೂ ಜನರ ಪರ ಕಾಳಜಿ ವಹಿಸಿ ಕಾರ್ಯನಿರ್ವಹಿಸಿಲ್ಲ. ಹಗಲಿನ ವೇಳೆಯಲ್ಲಿ ಕೆಲಸ ಮಾಡದ ಈ ಅಧಿಕಾರಿ ರಾತ್ರಿ ವೇಳೆಯಲ್ಲಿ ಕಛೇರಿಗೆ ಆಗಮಿಸಿ ತನಗೆ ಇಷ್ಟಬಂದ ಕೆಲಸಗಳನ್ನು ಮಾಡುತ್ತಿದ್ದಾನೆ. ಇಡೀ ನಗರವನ್ನು ಹಾಳು ಕೊಂಪೆಯನ್ನಾಗಿ ಮಾರ್ಪಡಿಸಿದ್ದಾನೆ. ಯಾವ ವಾರ್ಡ್‌ನಲ್ಲಿಯೂ ಸಮರ್ಪಕವಾದ ಕುಡಿಯುವ ನೀರಿನ ವ್ಯವಸ್ಥೆ ಯನ್ನು ಕಲ್ಪಿಸಿಲ್ಲ. ಸಾಮ್ರಾಜ್ಯಶಾಹಿಗಳ ವಿರುದ್ಧ ಅಪೂರ್ವ ವಿಜಯ ಸಾಧಿಸಿದ ಅಕ್ಟೋಬರ್ ಕ್ರಾಂತಿಯಂದು ಕೆಂಬಾವುಟ ಹಾರಿಸುವ ಮೂಲಕ ಚಿಂತಾಮಣಿಯಲ್ಲಿ ನಿವೇಶನ ಹೋರಾಟವನ್ನು ಆರಂಭಿಸಲಾಯಿತು. ಪಕ್ಷದ ತಾಲ್ಲೂಕು ಮುಖಂಡರಾದ ಗೋಪಿನಾಥ್, ವಿದ್ಯಾರ್ಥಿ ಮುಖಂಡರಾದ ಕಾಗತಿ ನಾಗರಾಜಪ್ಪ ಮಹಿಳಾ ಮುಖಂಡರಾದ ಜಗದೀಶ್ವರಿ ಹೋರಾಟದ ನೇತೃತ್ವ ವಹಿಸಿದ್ದಾರೆ.

■ ಮುರಳಿಕೃಷ್ಣ

ಪ್ರಗತಿ ಎಂಬ ದೀಪದ ಕೆಳಗಿನ ಕತ್ತಲು

ಷೇರು ಮಾರುಕಟ್ಟೆ ಸೂಚ್ಯಂಕ ಏರಿದಂತೆಲ್ಲಾ ದೇಶ ಪ್ರಗತಿಯತ್ತ ನಾಗಾಲೋಟದಲ್ಲಿ ಓಡುತ್ತಿದೆ ಎಂದೇ ಬಿಂಬಿಸಲಾಗುತ್ತಿದೆ. ಆದರೆ ಅದು ವಾಸ್ತವ ಅಲ್ಲ ಎಂಬುದನ್ನು ಈ ಲೇಖನದಲ್ಲಿ ನಿರೂಪಿಸಿದ್ದಾರೆ ಮ್ಯಾಗ್ಸಸ್ಸೆ ಪ್ರಶಸ್ತಿ ವಿಜೇತ ಪಿ.ಸಾಯಿನಾಥ್. 'ಪ್ರಗತಿ' ಎಂಬ ದೀಪದ ಕೆಳಗಿನ ಕತ್ತಲೆಯ ಕುರಿತ ಲೇಖನ

ಷೇರು ಸೂಚ್ಯಂಕ 19000 ಗಡಿದಾಟುವಾಗಲೇ ಜಾಗತಿಕ ಹಸಿವಿನ ಸೂಚ್ಯಂಕದಡಿ ಭಾರತದ ಸ್ಥಾನ 94ಕ್ಕೆ ಇಳಿದಿತ್ತು. ಇಥಿಯೋಪಿಯಾದಂತಹ ದೇಶಕ್ಕಿಂತಲೂ ಕೆಳಗಿನ ಸ್ಥಾನ! ಈ ಎರಡೂ ವಿದ್ಯಮಾನಗಳು ಮಾಧ್ಯಮದ ಮುಖಪುಟಗಳ ಸುದ್ದಿಯಾಗಿದ್ದು ಎಲ್ಲಾ ಪತ್ರಿಕೆಗಳಲ್ಲಂತೂ ಅಲ್ಲ. ಒಂದೇ ಒಂದು ಪತ್ರಿಕೆಯಲ್ಲಿ ಮಾತ್ರ. ಹಸಿವಿನ ಸೂಚ್ಯಂಕ ಸ್ಥಾನದ ವರದಿ ಒಳಪುಟಗಳಲ್ಲೆಲ್ಲೋ ಹುದುಗಿತ್ತು ಅಥವಾ ಪ್ರಕಟವಾಗಲೇ ಇಲ್ಲ. ಮಾಧ್ಯಮಗಳಿಗೆ ಅತ್ಯಂತ ಪ್ರಿಯವಾದ ಷೇರು ಸೂಚ್ಯಂಕದ ಅದ್ಭುತ ಹೆಚ್ಚಳದ ಆನಂದ ಮರುದಿನದ ಪುಟಗಳಲ್ಲೂ ಬಿಂಬಿತವಾಗಿತ್ತು. ಅದೇ ದಿನ ಭಾರತ ಇನ್ನೊಂದು ಸಾಧನೆ ಮಾಡಿತು. ಹೆರಿಗೆಯ ಸಂದರ್ಭದಲ್ಲಿ ಸಾವಿಗೀಡಾಗುವ ಮಹಿಳೆಯರ ಸಂಖ್ಯೆ ಅತ್ಯಂತ ಹೆಚ್ಚಿರುವ ದೇಶಗಳಲ್ಲಿ ಭಾರತ ಪ್ರಥಮ ಸ್ಥಾನ ಪಡೆಯಿತು. ಈ ಪಟ್ಟಿಯಲ್ಲಿ ಎರಡನೆಯ, ಮೂರನೇ ಮತ್ತು ನಾಲ್ಕನೆಯ ಸ್ಥಾನ ಪಡೆದ ದೇಶಗಳಲ್ಲಿ ಹೆರಿಗೆಯ ಸಮಯದಲ್ಲಿ ಸಾವಿಗೀಡಾಗುವ ಮಹಿಳೆಯರ ಒಟ್ಟು ಸಂಖ್ಯೆ ಸರಿ ಸುಮಾರು ಭಾರತದ 1.17 ಲಕ್ಷದ ಆಸುಪಾಸಿನಲ್ಲೇ ಇತ್ತು. ಈ ವರದಿ ಸಣ್ಣ ಸುದ್ದಿಯಾಗಿ ಷೇರು ಸೂಚ್ಯಂಕದ ಭರಾಟೆಯ ನಡುವೆ ಪ್ರಕಟವಾಯಿತು.

ಕಳವಳಕ್ಕೆ ಶಮನ

ಆ ನಂತರ ಷೇರು ಸೂಚ್ಯಂಕದಲ್ಲಿ ಹಲವು ನೂರು ಕ್ರಮಾಂಕಗಳಷ್ಟು ಕುಸಿತ ಕಂಡು ಬಂತು. ಕೆಲವೇ ಕೆಲವು ದಿನಗಳ ನಂತರದ ವಿದ್ಯಮಾನ ಅದು. ತ್ವರಿತ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಹಿರಿಯ ಕುಳಗಳಿಗೆ ಕೆಲವು ನಿಮಿಷಗಳು ಮಾತ್ರ ಸಾಕಾದವು. ಹಣಕಾಸು ಸಚಿವರಾದ ಪಿ.ಚಿದಂಬರಂ, ಸಂಕಷ್ಟ ಪೀಡಿತ ಹೂಡಿಕೆದಾರರ ಆತಂಕ ದೂರ ಮಾಡುವ ಕೈಂಕರ್ಯವನ್ನು ಕೈಗೆತ್ತಿಕೊಳ್ಳುವಲ್ಲಿ ಎಳ್ಳಷ್ಟೂ ವಿಳಂಬ ಮಾಡಲಿಲ್ಲ. ದೃಶ್ಯ ಮಾಧ್ಯಮಗಳಲ್ಲಿ ಹಿರಿಯ ಅಧಿಕಾರಿಗಳ ದಂಡು ಇದೇ ಕಾಯಕವನ್ನು ಎಡೆಬಿಡದೆ ನಡೆಸಿತು. 'ವಿತ್ತ ಮಂತ್ರಿಗಳಿಂದ ಮಾರುಕಟ್ಟೆಯ ಕಳವಳಕ್ಕೆ ಶಮನ' ಎಂದು ಅಡಿಬರಹಗಳು ಮೊಳಗುತ್ತಿದ್ದವು.


ಮಾಧ್ಯಮಗಳು ಮತ್ತು ಆಡಳಿತ ಯಂತ್ರಗಳ ಈ ಭರಾಟೆ ಇಡೀ ದಿನ ಮುಂದುವರಿಯಿತು. ಸೂಚ್ಯಂಕ 19000ರ ಗಡಿ ದಾಟಿದಾಗ ದೂರದರ್ಶನದಲ್ಲಿ ಮತ್ತು ಇತರ ದೃಶ್ಯ ಮಾಧ್ಯಮಗಳಲ್ಲಿ ಸಡಗರದಿಂದ ಕಾಣಿಸಿಕೊಂಡು ಮುಕ್ತಾಫಲಗಳನ್ನು ದುರಿಸಿದ್ದ ಪರಿಣಿತರ ದಂಡು ಮತ್ತೊಮ್ಮೆ ಕಾಣಿಸಿಕೊಂಡು ಸೂಚ್ಯಂಕದ ಕುಸಿತದ ಬಗ್ಗೆ ವಿಶ್ಲೇಷಿಸಿತು. ಅಷ್ಟಲ್ಲದೆ, ಪಾಲು ಪತ್ರ (Participatory Notes-PN's), ನಿಯಂತ್ರಣ, ಭವಿಷ್ಯ ಇತ್ಯಾದಿಗಳ ಬಗ್ಗೆ ಪ್ರಸ್ತಾಪವೂ ಬಂತು. ಇದೆಲ್ಲದರ ನಡುವೆ ಪ್ರಧಾನವಾಗಿ ಮೂಡಿಬಂದ ವಾಸ್ತವವೆಂದರೆ ಸೂಚ್ಯಂಕದ ಪ್ರತಿಯೊಂದು ಪಲ್ಲಟಕ್ಕೂ ಸರ್ಕಾರ ಮತ್ತು ಮಾಧ್ಯಮಗಳು ತಡವಿಲ್ಲದೆ ಪ್ರತಿಕ್ರಿಯಿಸಿದ ರೀತಿ.

ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ಭಾರತದ ಸ್ಥಾನ 94ಕ್ಕೆ ಕುಸಿದಾಗ ಯಾವ ಸಚಿವರೂ ದೇಶದ ಕಳವಳವನ್ನು ಶಮನಗೊಳಿಸಲು ಮುಂದೆ ಬರಲಿಲ್ಲ. ಅದೂ 118 ದೇಶಗಳ ನಡುವೆ 94ನೇ ಸ್ಥಾನಕ್ಕಿಳಿದಾಗ! DNA ಎಂಬ ದಿನಪತ್ರಿಕೆ ಈ ವರದಿಯ ಸಾರವನ್ನು ತನ್ನ ತಲೆಬರಹದಲ್ಲಿ ಯಥಾವತ್ತಾಗಿ ಬಿಂಬಿಸಿತು- 'ಇಥಿಯೋಪಿಯನ್ನರು ನಮಗಿಂತಲೂ ಚೆನ್ನಾಗಿ ಹಸಿವಿನ ಪ್ರಶ್ನೆಯನ್ನು ಬಗೆಹರಿಸುತ್ತಾರೆ'. ಅದು ಇತ್ತೀಚಿನ ದಿನಗಳ ಒಂದು ವಾಸ್ತವ ಕೂಡ. ಅಂತರಾಷ್ಟ್ರೀಯ ಆಹಾರ ನೀತಿ ಸಂಶೋಧನಾ ಸಂಸ್ಥೆಯ ಜಾಗತಿಕ ಹಸಿವಿನ ಸೂಚ್ಯಂಕ ಹೇಳುವುದು ಇದನ್ನೇ. ಇಥಿಯೋಪಿಯಾ 93ನೇ ಸ್ಥಾನದಲ್ಲಿದೆ. 1990ರ ನಂತರದ ಯಾವುದೇ ಕಾಲದಂಡವನ್ನು ಬಳಸಿ ನೋಡಿದರೂ, ಇಥಿಯೋಪಿಯಾ ಹಸಿವಿನ ನಿವಾರಣೆಯಲ್ಲಿ ನಮಗಿಂತಲೂ ಉತ್ತಮ ಸಾಧನೆ ಮಾಡಿರುವುದು ನಿಮ್ಮ ಗಮನಕ್ಕೆ ಬರುತ್ತದೆ. ಪಾಕಿಸ್ಥಾನ ಸಹ ನಮಗಿಂತ ಎಷ್ಟೋ ಮುಂದಿದೆ, 88ನೇ ಸ್ಥಾನದಲ್ಲಿ. ಚೀನಾದ ಸ್ಥಾನ 47. ದಕ್ಷಿಣ ಏಷಿಯಾದ ನಮ್ಮ ನೆರೆಯ ದೇಶಗಳೆಲ್ಲಾ ನಮಗಿಂತ ಮುಂದಿವೆ, ಬಾಂಗ್ಲಾದೇಶವೊಂದನ್ನು ಹೊರತುಪಡಿಸಿ. ಯಾವಾಗಬೇಕಾದರೂ ಅದು ನಮ್ಮನ್ನು ಹಿಂದಿಕ್ಕುವ ಸಾಧ್ಯತೆಗಳಿವೆ. ಈ ಯಾವ ದೇಶಗಳಲ್ಲೂ ಆರ್ಥಿಕ ಪ್ರಗತಿಯ ವಾರ್ಷಿಕ ವೃದ್ಧಿ ದರ ಶೇ.9 ರಷ್ಟಿಲ್ಲ.

ಇದೊಂದು ಗಮನ ಸೆಳೆಯಬೇಕಾದ ಸುದ್ದಿ ಎಂದು ನೀವು ಭಾವಿಸುತ್ತೀರಿ. ಆದರೆ ಪರಿಣಿತರ ದಂಡು ಇದರ ಬಗ್ಗೆ ದೃಶ್ಯ ಮಾಧ್ಯಮಗಳಲ್ಲಿ ಚರ್ಚೆ ನಡೆಸುವುದನ್ನು ನೀವು ಕಾಣಲಾರಿರಿ ಅಥವಾ ಪತ್ರಿಕೆಗಳ ಸಂಪಾದಕೀಯ ಬರಹಗಳಲ್ಲೂ ಇದರ ಉಲ್ಲೇಖ ಕಾಣಲಾರಿರಿ. ಯಾವುದೇ ಸಚಿವ ಅಥವಾ ಸರ್ಕಾರದ ಉನ್ನತ ಅಧಿಕಾರಿಗಳಿಂದ ಹಸಿವಿನಿಂದ ನರಳುವವರ ಸಾಂತ್ವನಕ್ಕೆ ನಡೆದ ಪ್ರಯತ್ನವನ್ನು ನೀವು ಕಂಡಿಲ್ಲ. ಹಣೆಯಲ್ಲಿ ನೆರಿಗೆಗಳನ್ನು ಉಕ್ಕಿಸಿಕೊಂಡು ಯಾವ ಪಂಡಿತನೂ ಈ ಪರಿಸ್ಥಿತಿ ಮುಂದುವರಿಯಬಹುದು ಅಥವಾ ಇನ್ನಷ್ಟು ಹದಗೆಡಬಹುದು ಎಂದು ಎಚ್ಚರಿಸುವ ಗೋಜಿಗೆ ಹೋಗಲಿಲ್ಲ.

ಇಥಿಯೋಪಿಯಾಕ್ಕಿಂತ ಬಡತನ

ದೇಶದಲ್ಲೀಗ ಏನಾಗುತ್ತಿದೆ ಎಂಬುದಕ್ಕೆ ಜಾಗತಿಕ





ಷೇರು ಮಾರುಕಟ್ಟೆ ಮತ್ತು ಆತ್ಮಹತ್ಯೆಗೀಡಾದ ರೈತ

ಹಸಿವಿನ ಸೂಚ್ಯಂಕ ಮಾತ್ರವೇ ಉದಾಹರಣೆಯಲ್ಲ. ಸಂಯುಕ್ತ ರಾಷ್ಟ್ರಗಳ ಆಹಾರ ಮತ್ತು ಕೃಷಿ ಸಂಸ್ಥೆ 2006ರಲ್ಲೇ ಇದನ್ನು ಬಹು ಸರಳವಾಗಿ ಹೇಳಿತ್ತು. ವಿಶ್ವದಲ್ಲಿ ಹಸಿವಿನಿಂದ ನರಳುತ್ತಿರುವವರಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಜನ ನಮ್ಮ ದೇಶದಲ್ಲಿದ್ದಾರೆ ಎಂಬುದನ್ನು, ಜಾಗತಿಕ ಆಹಾರ ಅಭದ್ರತೆಯ ಕುರಿತಾದ ತನ್ನ ವರದಿಯಲ್ಲಿ ಅದು ದಾಖಲಿಸಿತ್ತು. ಆ ವರದಿಯ 2004ರ ಆವೃತ್ತಿಯ ಪ್ರಕಾರ ಹಸಿವಿನಿಂದ ನರಳುವವರ ಸೈನ್ಯಕ್ಕೆ ಜಗತ್ತಿನ ಎಲ್ಲೆಡೆಗಿಂತಲೂ ಹೆಚ್ಚು ಮಂದಿಯನ್ನು ಸೇರ್ಪಡೆಗೊಳಿಸಿದ 'ಹಿರಿಮೆ' ಭಾರತದ್ದು. ಅಲ್ಲಿಯೂ ಕೂಡಾ, ನಮಗಿಂತಲೂ ಬಹಳ ಹಿಂದಿದ್ದ ದೇಶಗಳ ಸಾಧನೆ ನಮಗಿಂತ ಉತ್ತಮವಾಗಿತ್ತು. 1995-97 ಮತ್ತು 2000-02ರ ಅವಧಿಗಳಲ್ಲಿ ಭಾರತದಲ್ಲಿ ಹಸಿವಿನಿಂದ ನರಳುವವರ ಸಂಖ್ಯೆ ಜಾಸ್ತಿಯಾಗಿದ್ದರೆ, ಇಥಿಯೋಪಿಯಾದಲ್ಲಿ ಅದು ಕಡಿಮೆಯಾಗಿತ್ತು.

ಹೆರಿಗೆ ಸಮಯದ ಸಾವುಗಳು

ಕೇವಲ ಷೇರು ಸೂಚ್ಯಂಕ ಹಾಗೂ ಹಸಿವಿನ ಸೂಚ್ಯಂಕಗಳ ಕತೆ ಮಾತ್ರವೇ ಅಲ್ಲ. ಇನ್ನೊಂದು ನಿದರ್ಶನವನ್ನು ಕೂಡ ಇಲ್ಲಿ ಉಲ್ಲೇಖಿಸಲೇಬೇಕು. ಹೆರಿಗೆಯ ಸಮಯದಲ್ಲಿನ ಸಾವಿನ ವರದಿಯ ಕಡೆ ಸ್ವಲ್ಪ ಗಮನ ಹರಿಸೋಣ. ವಿಶ್ವ ಆರೋಗ್ಯ ಸಂಸ್ಥೆ ಮತ್ತು ಇತರ ಸಂಸ್ಥೆಗಳ ವರದಿಗಳಲ್ಲಿನ ಅಂಕಿ ಅಂಶಗಳನ್ನು ನೋಡೋಣ. 2005ರಲ್ಲಿ ಸುಮಾರು 5,36,000 ಮಹಿಳೆಯರು ಹೆರಿಗೆಯ ಸಮಯದಲ್ಲಿ ಸಾವನ್ನಪ್ಪಿದ್ದರು. ಇವರಲ್ಲಿ ಐದನೇ ಒಂದು ಭಾಗದಷ್ಟು ಮಹಿಳೆಯರು ಭಾರತೀಯರು ಅಂದರೆ ಸುಮಾರು 1,17,000 ದಷ್ಟು. ನೈಜೀರಿಯಾ, ಆಫಘಾನಿಸ್ಥಾನ ಮತ್ತು ಕೊಂಗೋ-ಈ ಮೂರು ದೇಶಗಳಲ್ಲಿನ ಒಟ್ಟು ಸಾವಿನ ಸಂಖ್ಯೆ ಸರಿ ಸುಮಾರು ಇಷ್ಟೇ. ಈ ಸಾವಿನಲ್ಲಿ ಸುಮಾರು ಶೇ.99 ರಷ್ಟು ಪಾಲು ಅಭಿವೃದ್ಧಿ ಶೀಲ ರಾಷ್ಟ್ರಗಳದ್ದು. ಇದರಲ್ಲಿ ಹೆಚ್ಚಿನ ಪಾಲು ಬಡವರ್ಗಗಳದ್ದು.

ಮಾನವ ಅಭಿವೃದ್ಧಿ ಸೂಚ್ಯಂಕದಲ್ಲೂ ಕೆಳಗೆ

ನಿರ್ದಿಷ್ಟ ಗುಂಪು ಅಥವಾ ಸಮುದಾಯ ಗಳ ಕಡೆ ಗಮನಹರಿಸಿದಾಗ, ಈ ಅಂಶ ಇನ್ನಷ್ಟು ನಿಚ್ಚಳವಾಗುತ್ತದೆ. ಹಸಿವಿನ ಸೂಚ್ಯಂಕ ಮಾತ್ರವಲ್ಲ, ಮಾನವ ಅಭಿವೃದ್ಧಿ ಸೂಚ್ಯಂಕದ ಪ್ರಶ್ನೆ ಬಂದಾಗಲೂ ಭಾರತದ್ದು ಚಿಂತಾಜನಕ ಪರಿಸ್ಥಿತಿಯೇ. 126ನೇ ಸ್ಥಾನದಲ್ಲಿರುವ ನಾವು ಬೊಲಿವಿಯಾ, ಗ್ವಾಟೆಮಾಲಾ ಮತ್ತು ಗಾಬೋನ್‌ನಂತಹ ದೇಶಗಳಿಗಿಂತಲೂ ಕೆಳ ಸ್ಥಾನದಲ್ಲಿದ್ದೇವೆ. ಅಷ್ಟಾಗಿಯೂ, ಆ 126ನೇ ಸ್ಥಾನ ಪೂರ್ತಿ ಕತೆಯನ್ನು ಹೇಳುವುದಿಲ್ಲ. ನಮ್ಮ ದೇಶದ ಅತ್ಯಂತ ಶ್ರೀಮಂತ ಮತ್ತು ಸಮೃದ್ಧ ಜನರನ್ನು ಪ್ರತ್ಯೇಕವಾಗಿ ವಿಂಗಡಿಸಿದರೆ, ಈ ಸೂಚ್ಯಂಕದ ಮೊದಲ ಹತ್ತು ಸ್ಥಾನಗಳ ದೇಶಗಳೊಂದಿಗೆ ಅವರನ್ನು ಸೇರಿಸಬಹುದು. ಕಳೆದ ವರ್ಷ ಆದಿವಾಸಿಗಳ (ಗಿರಿಜನರು)ನ್ನೇ ಒಂದು ಗುಂಪಾಗಿ ವಿಂಗಡಿಸಿದಾಗ, ಬೇರೆಯೇ ತೆರನ ಪರಿಸ್ಥಿತಿ ಕಂಡು ಬಂತು. ಮಾನವ ಅಭಿವೃದ್ಧಿಯ ಸೂಚ್ಯಂಕವನ್ನು ಈ ವರ್ಗಗಳಿಗೆ ಮಾತ್ರ ಅನ್ವಯಿಸಿ ನೋಡಿದಾಗ, ಜಗತ್ತಿನ ಅತ್ಯಂತ ಹಿಂದುಳಿದ 25 ದೇಶಗಳ ಮಟ್ಟಕ್ಕೆ ಅವರು ಸೇರ್ಪಡೆಯಾಗುತ್ತಾರೆ ಎಂಬ ಅಂಶ ಬೆಳಕಿಗೆ ಬರುತ್ತದೆ. ಇದನ್ನು ನಂಬುವುದು ಕಠಿಣವೇನಲ್ಲ. ಮಾನವ ಅಭಿವೃದ್ಧಿಯ ಸೂಚ್ಯಂಕದ ಪಟ್ಟಿಯಲ್ಲಿ ಕೆನಡಾ ದೇಶ ಮೊದಲ ಸ್ಥಾನವನ್ನು ಅಲಂಕರಿಸಿತ್ತು. ಆದಾಗ್ಯೂ ಆ ದೇಶಧ ಮೂಲ ನಿವಾಸಿಗಳದ್ದೇ ಪ್ರತ್ಯೇಕ ವರದಿಯೊಂದನ್ನು ಕಳೆದ ದಶಕದಲ್ಲಿ ತಯಾರಿಸಿದಾಗ ಅವರ ಪರಿಸ್ಥಿತಿ 63ನೇ ಸ್ಥಾನದಲ್ಲಿತ್ತು. ಈ ವರ್ಗಗಳ ಬದುಕು ಮೀಸಲಾತಿಯ ಮೇಲೆ ಅವಲಂಬಿತವಾಗಿದೆಯೆಂಬುದನ್ನು ಇಲ್ಲಿ ಗಮನಿಸಬೇಕು. ಜಗತ್ತಿನ ಎಲ್ಲೆಡೆ ಗಿರಿಜನರ ಬದುಕನ್ನು ನೋಡಿದಾಗ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಅತ್ಯಂತ ಕೆಳಗಿನ ಸ್ಥಾನಗಳು ಅವರದ್ದಾಗಿವೆ ಎಂಬ ಸತ್ಯ ಬೆಳಕಿಗೆ ಬರುತ್ತದೆ.

ಗಿರಿಜನರ ಆದಿವಾಸಿಗಳ ಪಾಡು

ಭಾರತದಲ್ಲೂ ಇದೇ ಪರಿಸ್ಥಿತಿ. ಇಲ್ಲಿ ಗಿರಿಜನರ ಪರಿಸ್ಥಿತಿ ಮತ್ತಷ್ಟು ಹೀನಾಯ. ಜಗತ್ತಿನ ಅತ್ಯಂತ ಹಿಂದುಳಿದ 25 ದೇಶಗಳ ಸಾಲಿಗೆ ಅವರು ತಳ್ಳಲ್ಪಟ್ಟಿದ್ದಾರೆ ಎನ್ನುವುದನ್ನು ಬೆಳಕಿಗೆ ತಂದ ವರದಿ ಇನ್ನೊಂದು ಅಂಶವನ್ನೂ ಹೊರಗೆಡವಿದೆ. ಕೆಲವೊಂದು ಪ್ರದೇಶಗಳಲ್ಲಿ ಪರಿಸ್ಥಿತಿ ಇನ್ನಷ್ಟು ಗಂಭೀರವಾಗಿದೆ ಎಂಬುದೇ ಆ ಅಂಶ. ಒರಿಸ್ಸಾದ ಬುಡಕಟ್ಟು ಜನಾಂಗಗಳ ಪರಿಸ್ಥಿತಿ ಸಹಾರಾ ಮರುಭೂಮಿಯ ಆಫ್ರಿಕಾ ದೇಶಗಳಿಗಿಂತಲೂ ಕೆಳಮಟ್ಟದಲ್ಲಿದೆ. ನಮ್ಮ ದೇಶದ ಬುಡಕಟ್ಟು ನಿವಾಸಿಗಳ ಬದುಕು ಹೇಗಿದೆ ಎನ್ನುವುದಕ್ಕೆ ಇದೊಂದೇ ಸಾಧಾರವಲ್ಲ. ನಮ್ಮ ದೇಶದ ಸರ್ಕಾರದ ಅಧಿಕೃತ ವರದಿಗಳ ಕಂತೆ ಕಂತೆಗಳೇ ಇದನ್ನು ಮತ್ತಷ್ಟು ಸ್ಪಷ್ಟವಾಗಿ ಸಾರಿ ಹೇಳುತ್ತವೆ. ಆದರೆ ಅವರ ಬದುಕಿನ ಬಗ್ಗೆ 'ಚರ್ಚಿಸುವಲ್ಲಿ ಪಂಡಿತರ' ಪರಿಣಿತರ ತರಾತುರಿ ಕಂಡು ಬರುವುದಿಲ್ಲ. ಎತ್ತಂಗಡಿಯ ಪ್ರಶ್ನೆ ಬಂದಾಗ ಮಾತ್ರ ಅವರು ಸುದ್ದಿಯಾಗುತ್ತಾರೆ. ಅವರು ಒಟ್ಟು ಜನಸಂಖ್ಯೆಯ ಶೇ.8 ರಷ್ಟು ಮಾತ್ರವೇ ಇದ್ದರೂ, ಯೋಜನೆಗಳಿಗಾಗಿ ಭೂಮಿ ಕಳೆದುಕೊಳ್ಳುವವರ ಸಂಖ್ಯೆಯಲ್ಲಿ ಅವರ ಪಾಲು ಶೇ.45 ರಷ್ಟು. ಗೋಧಿ ಯನ್ನು ಆಮದು ಮಾಡಿಕೊಳ್ಳುವ ವಿಷಯದಲ್ಲಿ ಎದ್ದಿರುವ ವಿವಾದ ಸ್ವಾಗತಾರ್ಹ. ಅಂತೂ, ಆ ವಿಷಯದ ಕಡೆಗೆ ಮಾಧ್ಯಮಗಳ ಗಮನ ಹರಿಯಲಾರಂಭಿಸಿದೆ. ಆದಾಗ್ಯೂ, ಗೋಧಿಯನ್ನು ಆಮದು ಮಾಡಿಕೊಳ್ಳುವ ಪ್ರಮೇಯವೇ ಏನಿತ್ತು ಎಂಬುದನ್ನು ಚರ್ಚಿಸುವ ಅಗತ್ಯವಂತೂ ಇದೆ. ಅಷ್ಟೇ ಅಲ್ಲ, ಹಸಿವಿನಿಂದ ತತ್ತರಿಸುವವರ ಸಂಖ್ಯೆ ಬಹಳಷ್ಟಿರುವ ದೇಶವೊಂದು ಮಿಲಿಯಗಟ್ಟಲೇ ಟನ್‌ಗಳಷ್ಟು ಆಹಾರ ಧಾನ್ಯವನ್ನು ಈ ದಶಕದಲ್ಲಿ ಹೊರ ದೇಶಗಳಿಗೆ ರಫ್ತು ಮಾಡುವ ಮಟ್ಟಕ್ಕೆ ಬಂದಿರುವುದನ್ನು ಚರ್ಚಿಸಬೇಕಾಗುತ್ತದೆ. ಅದೂ ಕೂಡಾ, ಈ ದೇಶದ ಲಕ್ಷಗಟ್ಟಲೇ ಜನಗಳಿಗೆ ಒದಗಿಸುವ ಬೆಲೆಗಳಿಗಿಂತಲೂ ಕಡಿಮೆ ದರದಲ್ಲಿ.

ಹದಗೆಡುತ್ತಿರುವ ಸಂಕಷ್ಟದ ಪರಿಸ್ಥಿತಿ

ಷೇರು ಸೂಚ್ಯಂಕದ ಗತಿ ಏನೇ ಇರಲಿ, ಬಡಜನರ ಸಂಕಷ್ಟಗಳ ಸರಮಾಲೆಯ ಸೂಚ್ಯಂಕವಂತೂ ಒಂದಾದ ಮೇಲೆ ಒಂದು ಕ್ಷೇತ್ರದಲ್ಲಿ ಏರುತ್ತಲೇ ಇದೆ. ಆರೋಗ್ಯಕ್ಕಾಗಿ ವೆಚ್ಚಗಳು ವಿಪರೀತ ಗಗನಕ್ಕೇರುತ್ತಿವೆ. ಆ ವೆಚ್ಚಗಳಿಂದಾಗಿ ಬಡ ಜನರು ಇನ್ನಷ್ಟು ಸಾಲದ ಕೂಪಕ್ಕೆ ತಳ್ಳಲ್ಪಡುತ್ತಿದ್ದಾರೆ.

ವಿಶ್ವ ಆರೋಗ್ಯ ಸಂಸ್ಥೆಗಾಗಿ 6 ರಾಜ್ಯಗಳಲ್ಲಿ ನಡೆಸಿದ ಸಮೀಕ್ಷೆಯೊಂದು ಕಳವಳಕಾರಿ ಅಂಶಗಳನ್ನು ಹೊರಗೆಡವಿದೆ. ಸಮೀಕ್ಷೆ ನಡೆಸಿದ ಕುಟುಂಬಗಳಲ್ಲಿ ಶೇ.16ರಷ್ಟು ಕುಟುಂಬಗಳು ಆರೋಗ್ಯದ ಖರ್ಚಿನಿಂದಾಗಿ ಬಡತನದ ರೇಖೆಗಿಂತಲೂ ಕೆಳಹೋಗಿದ್ದಾವೆ. ಸುಮಾರು 10,000 ಬಡ

ಪುಟ 15ಕ್ಕೆ

ನಂದಿ ಗ್ರಾಮ

ತೃಣಮೂಲ - ಮಾವೋವಾದಿಗಳ ವಿರುದ್ಧ ತಿರುಗಿಬಿದ್ದ ಜನಶಕ್ತಿ

2007ರ ವರ್ಷ ಆರಂಭವಾಗುವುದರೊಂದಿಗೆ ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ಸೃಷ್ಟಿಯಾದ ಗಲಭೆಗಳು ಹನ್ನೊಂದು ತಿಂಗಳ ನಂತರವೂ ಮುಂದುವರೆದಿದೆ. ಇಲ್ಲಿ ಹಲವಾರು ಹತ್ಯೆಗಳು, ಘರ್ಷಣೆಗಳು ನಡೆದಿವೆ. ಸಾವಿರಾರು ಮಂದಿ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಇದರ ಹಿಂದಿನ ಸತ್ಯಗಳನ್ನು ಒಂದೊಂದಾಗಿ ಹುಡುಕುತ್ತಾ ಹೋದರೆ ಪರಿಸ್ಥಿತಿಯ ಭೀಕರತೆ ಕಣ್ಣಿಗೆ ರಾಚುತ್ತದೆ.

ಪಶ್ಚಿಮ ಬಂಗಾಳದಲ್ಲಿನ ವಿರೋಧ ಪಕ್ಷಗಳು, ಇವರೊಂದಿಗೆ ಶಾಮೀಲಾಗಿ ಮಾವೋವಾದಿ ಮತ್ತು ನಕ್ಸಲ್ ಗುಂಪುಗಳು ನಡೆಸುತ್ತಿರುವ ದುಷ್ಕೃತ್ಯಗಳು. ಈ ಘಟನೆಗಳನ್ನು ಆಡಳಿತಾರೂಡ ಸಿಪಿಎಂ ಪಕ್ಷದ ವಿರುದ್ಧ ಮಾಧ್ಯಮಗಳು ವ್ಯವಸ್ಥಿತವಾಗಿ ತಿರುಚಿ ಬರೆಯುತ್ತಿರುವುದರಿಂದಾಗಿ ಸಹಜವಾಗಿ ನೋಡುಗರು ಕೇಳುಗರಲ್ಲಿ ಇಡೀ ಘಟನೆ ಅತಿರೇಕದ ಭಾವನೆಯನ್ನು ಮೂಡಿಸಿದೆ.


ರಾಸಾಯನಿಕ ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲು ಭೂಮಿ ಸ್ವಾಧೀನ ಮಾಡಿಕೊಳ್ಳುವುದಿಲ್ಲ ಎಂದು ಅಲ್ಲಿನ ಸರ್ಕಾರ ಎಂದೋ ಘೋಷಿಸಿತು. ಈಗ ಮತ್ತೆ ಅದನ್ನೇ ಪುನರುಚ್ಚರಿಸಿದೆ. ಆದರೆ ತೃಣ ಮೂಲ ಕಾಂಗ್ರೆಸ್ ಜೊತೆಗೂಡಿರುವ ಮಾವೋವಾದಿ-ನಕ್ಸಲ್ ಗುಂಪುಗಳು ಇಡೀ ಪ್ರದೇಶವನ್ನು ಹತ್ತು ತಿಂಗಳಿನಿಂದ ತಮ್ಮ ಕಬ್ಜಾದಲ್ಲಿ ಇಟ್ಟುಕೊಂಡಿವೆ. ಆದರೆ ನಂದಿ ಗ್ರಾಮದಲ್ಲಿ ಸರ್ಕಾರ ದೌರ್ಜನ್ಯ ಎಸಗುತ್ತಿದೆ ಎಂದು ಬಿಂಬಿಸಲಾಗುತ್ತಿದೆ. ಬಡವರಿಗಾಗಿ ತಾನೇ ಹಂಚಿದ ಭೂಮಿಯನ್ನು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಬಲಾತ್ಕಾರವಾಗಿ ಕಿತ್ತುಕೊಳ್ಳಲು ಸಾಧ್ಯವೇ ಎಂಬುದನ್ನು ಎಲ್ಲ ಪ್ರಜ್ಞಾವಂತರು ಒಮ್ಮೆ ಚಿಂತಿಸಬೇಕು.

ಹಾಗಿಲ್ಲದಿದ್ದಲ್ಲಿ ನಂದಿಗ್ರಾಮದಲ್ಲಿ ನಡೆಯುತ್ತಿರುವುದೇನು?

ನಂದಿಗ್ರಾಮ ಪ್ರದೇಶವನ್ನು ಮಾವೋವಾದಿಗಳು ಹಿಡಿತದಲ್ಲಿಟ್ಟುಕೊಂಡಿದ್ದರಿಂದ ಅಲ್ಲಿನ ಗ್ರಾಮಸ್ಥರುಗಳು ಸಮೀಪದ ನಿರಾಶ್ರಿತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದರು. ಇದನ್ನು ಬಿಡಿಸಲು ಮುಂದಾದ ಪೊಲೀಸರು ಮತ್ತು ಮಾವೋವಾದಿಗಳ ನಡುವೆ ಮಾರ್ಚ್ 14ರಂದು ನಡೆದ ದಾಳಿ ಪ್ರತಿದಾಳಿಗಳಲ್ಲಿ ಹಲವಾರು 13 ಮಂದಿ ಮೃತಪಟ್ಟರು. ಪೊಲೀಸರ ಗುಂಡಿಗೆ ಏಳು ಮಂದಿ ಬಲಿಯಾಗಿದ್ದರೆ ಮಾವೋವಾದಿಗಳು ಹಾರಿಸಿದ ಗುಂಡಿಗೆ ಉಳಿದವರು ಬಲಿಯಾಗಿದ್ದಾರೆ ಎಂಬುದು ಫೊರೆನ್ಸಿಕ್ ವರದಿಗಳಿಂದ ಈಗಾಗಲೇ ಸಾಬೀತಾಗಿದೆ. ಈ ಕುರಿತು ಗಂಭೀರವಾಗಿ ಆಲೋಚಿಸಬೇಕಾಗಿದೆ. ಹತ್ತು ತಿಂಗಳುಗಳಿಂದ ಮನೆ, ಜಮೀನು ಬಿಟ್ಟಿರುವ ಗ್ರಾಮಸ್ಥರು ಮತ್ತೆ ಅವರ ಮನೆಗಳಿಗೆ ಹಿಂತಿರುಗಲು ಪ್ರಯತ್ನಿಸಿದಾಗ ಮಾವೋವಾದಿಗಳು ಅದಕ್ಕೆ ಅವಕಾಶ ನೀಡಿಲ್ಲ. ಅವ್ಯಾಹತವಾಗಿ ದಾಳಿಗಳನ್ನು ನಡೆಸಿದ್ದಾರೆ. ಇದರ ವಿರುದ್ಧ ಸರ್ಕಾರ ಕ್ರಮಕ್ಕೆ ಮುಂದಾಗಿದ್ದರಿಂದ ಮತ್ತೆ ಘರ್ಷಣೆಗಳು ನಡೆದಿವೆ. ಗ್ರಾಮಸ್ಥರು ಅವರ ಮನೆಗಳಿಗೆ ಹಿಂತಿರುಗುವುದು ತಪ್ಪೇ? ಎಷ್ಟು ತಿಂಗಳು ಅವರು ನಿರಾಶ್ರಿತ ಶಿಬಿರಗಳಲ್ಲಿ ವಾಸಿಸಬೇಕು ಎಂಬುದನ್ನು ಸಿಪಿಎಂ ಪಕ್ಷದ ವಿರುದ್ಧ ಆರೋಪ ಮಾಡುವ ಪ್ರಗತಿಪರ ಚಿಂತಕರು, ಅವರು ಇವರು ಎಲ್ಲ ಉತ್ತರ ನೀಡಬೇಕಾಗಿದೆ.

ಈಗ ಆ ಪ್ರದೇಶವನ್ನು ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಹಿಡಿತಕ್ಕೆ ತೆಗೆದುಕೊಂಡಿದೆ. ಭೂಮಿಯಲ್ಲಿ ಹೂತಿದ್ದ ಬಾಂಬ್‌ಗಳು, ಸುಸಜ್ಜಿತವಾದ ಶಸ್ತ್ರಾಸ್ತ್ರಗಳು ದೊರೆತಿವೆ. ಮೂವರು ಮಾವೋವಾದಿಗಳನ್ನು ಬಂಧಿಸಲಾಗಿದೆ. ಇದೆಲ್ಲಕ್ಕಿಂತಲೂ ಹೆಚ್ಚಾಗಿ ಈ ಘರ್ಷಣೆಗಳಲ್ಲಿ ಮಾವೋವಾದಿಗಳ ಕೈವಾಡ ಇದೆ ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಎಂ.ಕೆ.ನಾರಾಯಣನ್ ತಮ್ಮ ವರದಿಯಲ್ಲಿ ಸ್ಪಷ್ಟಪಡಿಸಿದ್ದಾರೆ. ದೇಶದ ಆಂತರಿಕ ಭದ್ರತೆಗೆ ಮಾವೋವಾದಿಗಳದೇ ಬೃಹತ್ ಸಮಸ್ಯೆಯಾಗಿದೆ ಎಂದು ಪ್ರಧಾನ ಮನಮೋಹನ್ ಸಿಂಗ್ ಇತ್ತೀಚೆಗಷ್ಟೆ ಪ್ರತಿಕ್ರಿಯಿಸಿದ್ದಾರೆ. ಕೆಲವು ಮಾವೋವಾದಿಗಳು ಭಾರತೀಯ ಸೈನ್ಯವನ್ನು ಸೇರಿದ್ದಾರೆ ಮತ್ತು ಅತ್ಯಾಧುನಿಕವಾದ ಸ್ವಂತ ಶಸ್ತ್ರಾಸ್ತ್ರ ಕಾರ್ಖಾನೆಗಳನ್ನು ಹೊಂದಿದ್ದಾರೆ ಎಂದು ದಿ ಡಿಫೆನ್ಸ್ ಜರ್ನಲ್‌ನಲ್ಲಿನ ಇತ್ತೀಚಿನ ವರದಿಯೊಂದು ಹೇಳಿದೆ. ಸಿಪಿಎಂ ಪಕ್ಷದ ವಿರುದ್ಧ ಆರೋಪ ಮಾಡುವ ಮಾಧ್ಯಮಗಳು, ಪ್ರಗತಿಪರ ಚಿಂತಕರು ಹಾಗೂ ಇನ್ನೂ ಹಲವಾರೂ ಸೋಕಾಲ್ಡ್ ಉದಾರವಾದಿಗಳು, ಪ್ರಜಾಪ್ರಭುತ್ವವಾದಿಗಳು ಇವುಗಳತ್ತ ಒಮ್ಮೆ ಗಮನಿಸುವುದು ಒಳಿತು. ಇತ್ತೀಚೆಗೆ ಕೋಲ್ಕತ್ತದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡು ಸೈನಿಕನೊಬ್ಬ ಸೇರಿದಂತೆ ಮೂರು ಮಂದಿಯನ್ನು ಬಂಧಿಸಲಾಗಿದೆ.

ನಂದಿಗ್ರಾಮ ಮತ್ತೆ ರಾಷ್ಟ್ರೀಯ ಸುದ್ದಿಯಾಗಿದೆ. ಸಿಪಿಐ(ಎಂ) ವಿರೋಧಿ ದುಷ್ಟ ಮೈತ್ರಿಕೂಟ ನಡೆಸುತ್ತಿರುವ ಅಮಾನವೀಯ ಹಿಂಸಾಚಾರಗಳ ನೆಪ ಮಾಡಿಕೊಂಡು ಬಹುಕಾಲ ಸಿಪಿಐ(ಎಂ) ಮುಖಕ್ಕೆ ಮಸಿ ಬಳಿಯಲಾಯಿತು. ತಡವಾಗಿಯಾದರೂ ಸತ್ಯ ಏನೆಂದು ಹೊರಜಗತ್ತಿಗೆ ಅರಿವಾಗಲಾರಂಭಿಸಿದೆ. ನಂದಿಗ್ರಾಮದ ಜನತೆಯೂ ತೃಣಮೂಲ, ನಕ್ಸಲೀಯ ಮತ್ತು ಮೂಲಭೂತವಾದಿಗಳ ಹಿಂಸೆಯ ವಿರುದ್ಧ ಸೆಟೆದು ನಿಂತಿದ್ದಾರೆ.



ಈ ಶಸ್ತ್ರಾಸ್ತ್ರಗಳು ಮಾವೋವಾದಿಗಳಿಗೆ ಸೇರಿದ್ದು, ನಂದಿಗ್ರಾಮ ಪ್ರದೇಶದಲ್ಲಿನ ಮಾವೋವಾದಿಗಳಿಗೆ ಸರಬರಾಜಾಗುತ್ತಿತ್ತು ಎಂದು ಸೇನಾ ವಕ್ತಾರ ಆರ್.ಕೆ.ದಾಸ್ ಸಹ ಹೇಳಿದ್ದಾರೆ.

ಅಡ್ವಾಣಿ ಭ್ರಮೆ

ಅಂತಹ ಮಾವೋವಾದಿಗಳ ತಂಡವನ್ನು ಅಲ್ಲಿರಲು ಅವಕಾಶ ನೀಡುವುದು ಸರಿಯೇ. ಬಿಜೆಪಿ ಮುಖಂಡ ಅಡ್ವಾನಿಯವರು ರಾಜಕೀಯ ದುರ್ಲಾಭ ಪಡೆಯಲು ಸಿಪಿಎಂ ಸರ್ಕಾರದ ವಿರುದ್ಧ ಆರೋಪದಲ್ಲಿ ತೊಡಗಿದ್ದಾರೆ ಎಂಬುದು ಸ್ಪಷ್ಟ. ಮಾವೋವಾದಿಗಳನ್ನು ಬೆಂಬಲಿಸುತ್ತಿರುವುದೇ ಎನ್‌ಡಿಎ ಮೈತ್ರಿ ಪಕ್ಷವಾದ ತೃಣಮೂಲ ಕಾಂಗ್ರೆಸ್ ಎಂಬುದು ಅವರಿಗೆ ಗೊತ್ತಿಲ್ಲವೇ? ಅಲ್ಲಿ ಶಾಂತಿಯನ್ನು ಸ್ಥಾಪಿಸಲು ಸಿಪಿಎಂ ಪಕ್ಷ ಸತತವಾಗಿ ಪ್ರಯತ್ನಿಸುತ್ತಿದ್ದರೆ ವಿರೋಧ ಪಕ್ಷಗಳು ಮಾವೋವಾದಿಗಳನ್ನು ಮತ್ತೆ ಮತ್ತೆ ಪ್ರಚೋದಿಸುತ್ತಿವೆ.

ಹಲವು ವರ್ಷಗಳ ಹಿಂದೆ ಮಿಡ್ನಾಪುರ ಜಿಲ್ಲೆಯ ಕೇಶವಪುರದಲ್ಲಿ ರಾಜಕೀಯ ಅಸ್ತಿತ್ವ ಸ್ಥಾಪಿಸಲು ಸಮಾಜಘಾತುಕ ಶಕ್ತಿಗಳು ಇಂತಹುದೇ ಗಲಭೆಗಳನ್ನು ಸೃಷ್ಟಿಸಿದ್ದರು. ಹಲವಾರು ಮಂದಿ ಮೃತಪಟ್ಟರು. ಹಾಗಿದ್ದರೂ ಅಲ್ಲಿ ಶಾಂತಿ ಸ್ಥಾಪಿಸಿ ಚುನಾವಣೆಗಳನ್ನು ನಡೆಸಲಾಗಿತ್ತು. ಸಿಪಿಎಂ ಪಕ್ಷ ಮತ್ತೆ ಭಾರಿ ಜಯಭೇರಿ ಬಾರಿಸಿತು. ನಂದಿ ಗ್ರಾಮದಲ್ಲಿ ಅಂತದೇ ಪ್ರಯತ್ನಗಳನ್ನು ಮಾಡಲು ತೃಣಮೂಲ ಮತ್ತು ಮಾವೋವಾದಿಗಳ ಸಂಘಟಿತ ಕೂಟ ಮುಂದಾಗಿದೆ. ಅದಕ್ಕೆ ಅವಕಾಶ ನೀಡಬೇಕೆ? ಹಲವಾರು ಧೀರೋದಾತ್ತ ಹೋರಾಟಗಳಿಂದ ಸಿಪಿಎಂ ಪಕ್ಷ ರೂಪುಗೊಂಡಿರುವುದಾಗಿದೆ. ಇದಕ್ಕಾಗಿ ನೂರಾರು ಅಮೂಲ್ಯ ಜೀವಗಳು ಹುತಾತ್ಮವಾಗಿವೆ. ಪ್ರತಿಗಾಮಿ ಶಕ್ತಿಗಳು ಅಂತಹ ಪ್ರಯತ್ನಗಳಿಂದ ಯಾವುದೇ ಕಾರಣಕ್ಕೂ ಯಶಸ್ವಿಯಾಗಲು ಅವಕಾಶ ಸಿಗುವುದಿಲ್ಲ.

ದುಷ್ಕರ್ಮಿಗಳು ಶಸ್ತ್ರಾಸ್ತ್ರಗಳ ಸಮೇತ ದಾಳಿಗಳನ್ನು ನಡೆಸುತ್ತಿದ್ದರೆ ಜನತೆ ತಮ್ಮನ್ನು ರಕ್ಷಿಸಿಕೊಳ್ಳದೆ ಸುಮ್ಮನಿರುವುದು ಹೇಗೆ? ಎಂಬ ಪ್ರಶ್ನೆಗೆ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವವರು ಉತ್ತರ ನೀಡಬೇಕು.

ನಂದಿಗ್ರಾಮದಲ್ಲಿ ನಡೆದ ಘಟನೆಗಳ ಕುರಿತು ಕೇಸರಿ ಪಡೆಯ ಸ್ವಯಂ ಘೋಷಿತ ಉಕ್ಕಿನ ಮನುಷ್ಯ ಅಡ್ವಾನಿ ಭ್ರಾಂತಿ ಹೊಂದಿದ್ದರೆಂದು ಕಾಣುತ್ತದೆ. ಮಾರ್ಚ್ 14ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಅವರು ಅಲ್ಲಿನ ಜನತೆ ವಿರುದ್ಧ ನಡೆದ ಘಟನೆ ಮತ್ತೊಂದು ಜಲಿಯನ್‌ವಾಲಾಭಾಗ್‌ನ್ನು ನೆನಪಿಸುತ್ತದೆ ಎಂದು ಪ್ರತಿಕ್ರಿಯಿಸಿದ್ದರು. ಸಿಪಿಎಂ ಪಕ್ಷ ಅಲ್ಲಿನ ಜನತೆಯನ್ನು ಸಶಸ್ತ್ರಗೊಳಿಸಿದೆ ಎಂದು ಅದೇ ಅಡ್ವಾಣಿ ಈಗ ಹೇಳಿದ್ದಾರೆ. ಅಂದರೆ ಅಲ್ಲಿನ ಘಟನೆಗಳ ಕುರಿತು ಅವರು ಭ್ರಾಂತಿಯಲ್ಲಿ ಮುಳುಗಿದ್ದಾರೆ ಎಂಬಂತೆ ತೋರುತ್ತದೆ.

ನಂದಿಗ್ರಾಮ ಘಟನೆ ಭಾರಿ ಪ್ರಚಾರ ಪಡೆದುಕೊಳ್ಳುತ್ತಿರುವುದರಿಂದ ರಾಜಕೀಯ ಪಕ್ಷಗಳು ಭಾರಿ ಸಂತೋಷದಿಂದಿವೆ. ಎಡಪಕ್ಷಗಳ ವಿರುದ್ಧ ನಡೆದ ರ‍್ಯಾಲಿಯಲ್ಲಿ ಮಾವೋವಾದಿಗಳು, ಕಾಂಗ್ರೆಸ್ ನೇತೃತ್ವದ ಗೆರಿಲ್ಲಾಗಳು, ಕೇಂದ್ರ ಸಚಿವ ಪ್ರಿಯರಂಜನ್ ದಾಸ್ ಮುನ್ಷಿ, ಸಿದ್ದಿಖುಲ್ಲಾ ಚೌಧುರಿ ನೇತೃತ್ವದ ಜಮಾತ್ ಇ-ಉಲೇಮ ಹಿಂದ್, ಸುಸಿ ಮತ್ತು ಬಿಜೆಪಿ ನೇತೃತ್ವದ ಬಲಪಂಥೀಯ ಪ್ರತಿಗಾಮಿ ಶಕ್ತಿಗಳು ಜಮಾವಣೆಗೊಂಡಿದ್ದವು. ಇದರ ನೇತೃತ್ವವನ್ನು ಮಮತಾ ಬ್ಯಾನರ್ಜಿ ವಹಿಸಿದ್ದರು. ಇಂಥದ್ದೊಂದು ಹೋರಾಟದಲ್ಲಿ ಮೇಧಾಪಾಟ್ಕರ್ ಭಾಗವಹಿಸಿದ್ದು ಒಂದು ದುರಂತ.

ಬಡವರ ಎಲ್ಲ ಬೇಡಿಕೆಗಳ ಈಡೇರಿಕೆ

ಭೂಮಿ ಪ್ರಶ್ನೆಯೊಂದು ಮಾತ್ರವಲ್ಲದೆ ಅಲ್ಲಿನ ಜನ ಮುಂದಿಟ್ಟಿರುವ ಎಲ್ಲ ಬೇಡಿಕೆಗಳನ್ನು ಸರ್ಕಾರ ಪೂರೈಸಿದೆ. ಮೃತಪಟ್ಟ ಪ್ರತಿ ಕುಟುಂಬಕ್ಕೆ 2ಲಕ್ಷ ರೂ. ಪರಿಹಾರ ನೀಡಲಾಗಿದೆ. ಅತ್ಯಾಚಾರ, ಹತ್ಯೆ ಹೊರತುಪಡಿಸಿ ಉಳಿದೆಲ್ಲ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲಾಗಿದೆ. ಹಾಲ್ದಿಯಾ ಅಭಿವೃದ್ಧಿ ಪ್ರಾಧಿಕಾರಕ್ಕೆ ನಂದಿಗ್ರಾಮವನ್ನು ಸೇರ್ಪಡೆ ಮಾಡಬಾರದೆಂಬುದರ ಕುರಿತು ಪ್ರಕ್ರಿಯೆಗಳು ಮುಂದುವರೆದಿವೆ. ಮಾರ್ಚ್ 14ರಂದು ನಡೆದ ಘಟನೆ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದರೂ ರಾಜ್ಯಪಾಲರ ವರದಿಯನ್ನು ಪಡೆದಿರುವ ಅಲ್ಲಿನ ಹೈಕೋರ್ಟ್

ಪುಟ 15ಕ್ಕೆ

ತೃಣಮೂಲ ಗೂಂಡಾಗಳ ಧಾಳಿಗೆ ಬಲಿಯಾದ ಕಾಂ. ಸುಕುಮಾರ್ ದಾಸ್



ಇದು ಭೂಮಿಯ ಪ್ರಶ್ನೆ ಅಲ್ಲವೇ ಅಲ್ಲ

ನಂದಿಗ್ರಾಮದ ಬ್ಲಾಕ್-1ರಲ್ಲಿ ರಾಸಾಯನಿಕ ಹಬ್ ಸ್ಥಾಪಿಸುವ ಯೋಜನೆ ಇತ್ತು. ಯೋಜನೆಯ ವಿವರಗಳಾಗಲಿ, ಭೂಮಿಸ್ವಾಧೀನ ಕುರಿತಾಗಲಿ ಯಾವುದೇ ವಿವರಗಳು ಅಂತಿಮವಾಗಿರಲಿಲ್ಲ. ಆದರೆ ವಿರೋಧ ಪಕ್ಷಗಳು ವ್ಯಾಪಕವಾಗಿ ಸುಳ್ಳುಸುದ್ದಿಗಳನ್ನು ಹಬ್ಬಿಸಿದವು. ಮನೆ, ಶಾಲಾಕಾಲೇಜುಗಳು, ದೇವಾಲಯ ಮಸೀದಿಗಳನ್ನು ಆಕ್ರಮಿಸಲಿದ್ದಾರೆಂದು ಪ್ರಚಾರ ಹಬ್ಬಿಸಿದವು. ಸಿಪಿಎಂ ಬೆಂಬಲಿಗರು ಹಿತ್ತೈಷಿಗಳ ವಿರುದ್ಧ ಅವ್ಯಾಹತ ದಾಳಿಗಳನ್ನು ನಡೆಸಲಾಯಿತು. ಪಂಚಾಯ್ತಿ ಸದಸ್ಯರು, ಶಾಸಕರ ಮೇಲೆ ಹಲ್ಲೆಗಳನ್ನು ನಡೆಸಿದರು. ನಂದಿಗ್ರಾಮದಲ್ಲಿ ರಾಸಾಯನಿಕ ಕೇಂದ್ರ ಸ್ಥಾಪಿಸುವುದಿಲ್ಲ ಎಂದು ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಪುನರುಚ್ಚರಿಸುತ್ತಿರುವುದನ್ನು ಅಲ್ಲಿ ಶಾಂತಿಯನ್ನು ಸ್ಥಾಪಿಸಬೇಕೆಂದಿರುವ ಯಾರೇ ಆಗಲಿ ಮನಗಾಣಬೇಕಿತ್ತು. ಆದರೆ ಅಲ್ಲಿ ಶಾಂತಿ ಸ್ಥಾಪಿಸುವುದು ವಿರೋಧ ಪಕ್ಷಗಳ ಉದ್ದೇಶವಾಗಿಲ್ಲ. ಗಲಭೆಗಳನ್ನು ಸೃಷ್ಟಿಸಿ ಜನತೆಯಲ್ಲಿ ಭೀತಿ ಸೃಷ್ಟಿಸಿ ರಾಜ್ಯ ಸರ್ಕಾರದ ವಿರುದ್ಧ ಕೆಟ್ಟ ಹೆಸರು ಕ್ರೋಡೀಕರಿಸುವುದೇ ಅವರ ಮುಖ್ಯ ಉದ್ದೇಶವಾಗಿದೆ.

ಈ ನಡುವೆಯೂ ಅಲ್ಲಿ ಶಾಂತಿ ಸ್ಥಾಪಿಸಲು ನಿರಂತರವಾಗಿ ರಾಜಕೀಯ ಪ್ರಯತ್ನಗಳು ಮುಂದುವರೆದಿವೆ. ಆರ್ಥಿಕ, ಸಾಮಾಜಿಕ, ಆಡಳಿತಾತ್ಮಕ ಚಟುವಟಿಕೆಗಳನ್ನು ಮರುಸ್ಥಾಪಿಸಲಾಗಿದೆ. ತೃಣಮೂಲ ಕಾಂಗ್ರೆಸ್ ಕೃತ್ಯಗಳಿಗೆ ಜನಬೆಂಬಲ ದೊರೆಯದಿರುವುದರಿಂದ ಭಯೋತ್ಪಾದಕ ಕೃತ್ಯಗಳು ಮುಂದುವರೆದಿವೆ. ಈ ಅವಧಿಯಲ್ಲಿ 3,500 ಮಂದಿ ಸಿಪಿಎಂ ಪಕ್ಷದ ಬೆಂಬಲಿಗರನ್ನು ಗ್ರಾಮಗಳಿಂದ ಓಡಿಸಲಾಗಿತ್ತು. ಅವರಲ್ಲಿ 1,500 ಮಂದಿ ನಿರಾಶ್ರಿತ ಶಿಬಿರಗಳಲ್ಲಿ ಜೀವನ ಸಾಗಿಸುತ್ತಿದ್ದಾರೆ. ಇದುವರೆಗೂ 27 ಸಿಪಿಎಂ ಕಾರ್ಯಕರ್ತರನ್ನು ಹತ್ಯೆ ಮಾಡಲಾಗಿದೆ. ಅಲ್ಲಿ ಎಸ್‌ಇಜಡ್ ಸ್ಥಾಪಿಸುವ ಪ್ರಶ್ನೆಯೇ ಇಲ್ಲದಿರುವಾಗ ಭೂಮಿ ಪ್ರಶ್ನೆ ಎಲ್ಲಿಂದ ಬರುತ್ತದೆ. ಈಗದು ಕೇವಲ ರಾಜಕಾರಣದ ಪ್ರಶ್ನೆಯಾಗಿದೆ. ○

ಜನಶಕ್ತಿ ಕನ್ನಡ ವಾರಪತ್ರಿಕೆ

ಪ್ರಮಾಣ ವಚನವನ್ನೇ ಪಟ್ಟಾಭಿಷೇಕವೆಂದೇ ಕುರ್ಚಿ ಪ್ರೇಮಿ ಯಡಿಯೂರಪ್ಪ ಭ್ರಮಿಸಿದ್ದಾರೆ. ಮುಖ್ಯಮಂತ್ರಿಯಾಗಿ ವಿಧಾನಸೌಧ ಪ್ರವೇಶಿಸುವಾಗಲೇ ಭಾರತ ಸಂವಿಧಾನದಲ್ಲಿ ನಂಬಿಕೆಯೇ ಇಲ್ಲದ, ಜನರಿಗೆ ಉತ್ತರದಾಯಿಯೇ ಅಲ್ಲದ ಸಂವಿಧಾನೇತರ ಕುಖ್ಯಾತ ಶಕ್ತಿ ಸರ್ಕಾರದ ಆಡಳಿತದ ಸೂತ್ರಗಳನ್ನು ಕೈವಶದಲ್ಲಿರಿಸಿಕೊಂಡಿದೆ. ಕರ್ನಾಟಕಕ್ಕೇನು ಕಾದಿದೆ?

ಸಂವಿಧಾನೇತರ ಶಕ್ತಿ ಆರ್‌ಎಸ್‌ಎಸ್ ಕೈಗೆ ಆಡಳಿತದ ಚುಕ್ಕಾಣಿ

ಎಸ್.ವೈ.ಗುರುಶಾಂತ್

ಜನದ್ರೋಹಿಗಳು, ವಚನಭ್ರಷ್ಟರು ಸೇರಿರುವ ಸರ್ಕಾರವೊಂದು ಕರ್ನಾಟಕದಲ್ಲಿ ಅಸ್ತಿತ್ವಕ್ಕೆ ಬಂದುಬಿಟ್ಟಿದೆ. 'ಕುಂತ್ರು ನಿಂತ್ರೂ ಅದರದ್ದೇ ಧ್ಯಾನ. ಜೀವಕ್ಕಿಲ್ರೀ ಸಮಾಧಾನ' ಎಂದೇ ಪರಿತಪಿಸುತ್ತಾ ಸುತ್ತುತ್ತಿದ್ದ ಯಡಿಯೂರಪ್ಪ ಅರ್ಥಾತ್ ಬಿಜೆಪಿ ಪಕ್ಷದಿಂದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿಯೂ ಆಗಿದೆ. ಸಿಗುವ ಒಂದು ಅವಕಾಶವನ್ನೂ ಬಿಡದೇ ಬಳಸಿ ನೆಲೆ ವಿಸ್ತಾರ ಮಾಡಬೇಕು, ತಮ್ಮ ಗುರಿ - ತಂತ್ರಗಳು ಜಾರಿಯಾಗಬೇಕು ಎಂಬ ತಹತಹ ಸಂಘ ಪರಿವಾರಕ್ಕೆ. ಹೀಗಾಗಿ ಅದು ಎಂತಹ ಮಟ್ಟಕ್ಕೂ ಇಳಿಯಲು ಸಿದ್ಧವೆಂದು ಸಾಬೀತಾಗಿದ್ದು ಆ ಪ್ರಸಂಗವೇ!

ಅದಃಪತನದ ದಿಗ್ದರ್ಶನ

ಬಿಜೆಪಿ ಹಿಂದೆಲ್ಲಾ ಹೇಳಿಕೊಂಡು ಎದೆ ತಟ್ಟಿಕೊಂಡಂತೆ 'ತಾನೊಂದು ತತ್ವ ನಿಷ್ಠ ಪಕ್ಷ'ವೆಂದು ಈಗೇನಾದರೂ ಹೇಳಿಕೊಂಡರೆ ಕೇಳಿಸಿಕೊಂಡವರು ಮುಸಿಮುಸಿ ನಕ್ಕಾರು. ಬಂಡವಾಳ ಶಾಹಿ ಪಕ್ಷವೊಂದು ಅದರಲ್ಲೂ ಬಲಪ್ರತಿಗಾಮಿಯಾದ ಪಕ್ಷವು ತಲುಪಬಹುದಾದ ಎಲ್ಲಾ ಅಧಃಪತನಗಳನ್ನು ಬಿಜೆಪಿ ದಿಗ್ದರ್ಶಿಸಿದೆ.

ನವೆಂಬರ್ 12 ರಂದು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಮಾರಂಭವು ಭಾರಿ ಅದ್ದೂರಿಯೇ. ಇದು ಸಮ್ಮಿಶ್ರ ಸರ್ಕಾರ ಎಂಬುದಕ್ಕಿಂತ ಕೇವಲ ಬಿಜೆಪಿಯ ಸರ್ಕಾರ ಎಂಬಂತೆ ಬಿಂಬಿಸಲು ಸಿದ್ಧತೆಗಳನ್ನು ನಡೆಸಲಾಗಿತ್ತು. ಎಲ್ಲೆಲ್ಲೂ ಬಿಜೆಪಿ ಬಾವುಟ, ಬ್ಯಾನರ್, ನಾಯಕರ ಕಟೌಟುಗಳು, ಸಮಾರಂಭಕ್ಕೆ ರಾಜ್ಯಲ್ಲೆಡೆಗಳಿಂದ 30 ಸಾವಿರದಷ್ಟು ಜನರ ಸಂಗ್ರಹ, ಅಡ್ವಾಣಿ, ಸುಷ್ಮಾ, ವೆಂಕಯ್ಯ, ನರೇಂದ್ರ ಮೋದಿಯಂತಹ ರಾಷ್ಟ್ರ ನಾಯಕರ ಠಳಾಯಿಸುವಿಕೆ.... ಇವೆಲ್ಲಾ ಸಂಭ್ರಮಪೂರಕವಾಗಿದ್ದವು. ಇಂತಹ ಪ್ರಮಾಣವಚನವನ್ನು 'ಪಟ್ಟಾಭಿಷೇಕ'ವೆಂದು ಭಟ್ಟಂಗಿ ಮಾಧ್ಯಮಗಳು ಕರೆದವು. ಯಡಿಯೂರಪ್ಪ ಸಹ ಹಾಗೆ ಭಾವಿಸಿದ್ದರು ಕೂಡಾ. 'ಬಿಜೆಪಿ ಶಕೆ' ಎಂದೂ ಪತ್ರಿಕೆಗಳು ಕರೆದವು. ಇಡೀ ನಗರ, ಸಮಾರಂಭದ ಸ್ಥಳ ಬಿಜೆಪಿ ಮಯ, ಈ ಸರ್ಕಾರದ ಭಾಗೀದಾರ ಜೆಡಿ(ಎಸ್) ಇಲ್ಲೆಲ್ಲಾ ಮಾಯ. ಇಲ್ಲದರ ಬಗ್ಗೆ ಎಳ್ಳಷ್ಟು ಯೋಚನೆಯೂ ಬಿಜೆಪಿಗೆ ಇರಲಿಲ್ಲ. ಹಾಗೇ ಸಂದರ್ಭಸಾದಕತೆಯಿಂದ ಒದಗಿದ ಈ ಸನ್ನಿವೇಶದ ಬಗ್ಗೆ ಒಂದಿಷ್ಟು ಮುಜುಗರವಾಗಲೀ, ನಾಚಿಕೆಯೂ ಇರಲಿಲ್ಲ.

ಕುರ್ಚಿ ಪೂಜೆ

ಇದನ್ನು ಪಾಳೇಗಾರಿ ರಾಜರ ಪಟ್ಟಾಭಿಷೇಕದ ಗುಂಗಿನಲ್ಲೇ ತೇಲಿದ ಯಡಿಯೂರಪ್ಪನವರು ಜನತೆಯು ನೀಡಿದ ಹೊಣೆಗಾರಿಕೆ ಎಂಬುದನ್ನು ಬಿಟ್ಟು ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಅಪಚಾರ ಮಾಡಿದರು. ಮುಖ್ಯಮಂತ್ರಿ ಕಛೇರಿಯಲ್ಲಿ



ನಿಷ್ಠೆ ಜನತೆಗೋ, ದೊಣ್ಣೆ ನಾಯಕರಿಗೋ?

ಹವನ-ಹೋಮಗಳನ್ನು ನಡೆಸಿದರು. ವಿಚಿತ್ರವೆಂದರೆ ಮುಖ್ಯಮಂತ್ರಿಗಳ ಕುರ್ಚಿಗೆ ಹಿಂದೆಂದೂ ಮಾಡದ ಪೂಜೆಯನ್ನು ಸಲ್ಲಿಸಿ ಸದಾ ಕನವರಿಸುತ್ತಿದ್ದ ತಮ್ಮ ಕುರ್ಚಿ ಪ್ರೇಮವನ್ನು ಮೆರೆದರು.

ಆರ್‌ಎಸ್‌ಎಸ್ ಹಸ್ತ

ಹಿಂದೆ ಕುಮಾರಸ್ವಾಮಿ, ಯಡಿಯೂರಪ್ಪನವರು ಪ್ರಮಾಣ ವಚನ ಸ್ವೀಕರಿಸುವಾಗ ಈ ಸರ್ಕಾರಿ ಕಾರ್ಯಕ್ರಮದ ಉಸ್ತುವಾರಿ ವಹಿಸಿದ್ದು ಆರ್‌ಎಸ್‌ಎಸ್ ಎಂಬುದನ್ನೀಗ ನೆನಪಿಸಿಕೊಳ್ಳಬೇಕು. ಈ ಬಾರಿಯ ಉಸ್ತುವಾರಿ ಎಲ್ಲಾ ಹಂತಗಳಲ್ಲಿ ವಹಿಸಿದ್ದು ಆರ್‌ಎಸ್‌ಎಸ್ಸೇ. ಪ್ರಮಾಣ ವಚನ ಸ್ವೀಕರಿಸಿದ ನಂತರ ಯಡಿಯೂರಪ್ಪ ಮಹಾರಾಜರ ಗತ್ತಿನಲ್ಲಿ ಹೇಳಿದ್ದು "ನಾನು ಹಿಂದಿನ ಹಾಜರಂತೆ ರಾಜರ್ಷಿಗಳ ಸಲಹೆ ಕೇಳಿ (ಸಂಪುಟದ್ದಲ್ಲ) ಆಡಳಿತ ನಡೆಸುವೆ' ಎಂದು. ಈ 'ರಾಜರ್ಷಿಗಳು ಯಾರು' ಎಂದರೆ 'ಹಲವು ರಾಜರ್ಷಿಗಳಿದ್ದಾರೆ' ಎಂದರು. ಹೌದು ಈ ರಾಜರ್ಷಿಗಳು ಇರುವುದು 'ಕೇಶವಕೃಪಾ'ದಲ್ಲಿ ಎಂಬುದನ್ನು ಪ್ರತ್ಯೇಕವಾಗಿ ಹೇಳಬೇಕಿಲ್ಲ. ಅವರೇ ಹೇಳಿಕೊಂಡಂತೆ 'ತಾನು ಸಂಘದ ನಿಷ್ಠ ಸ್ವಯಂಸೇವಕ'. ಆದ್ದರಿಂದ 'ದೊಣ್ಣೆ' ನಾಯಕರ ಆಜ್ಞೆಯಂತೆ ವರ್ತಿಸುವುದೇ ಕಾಯಕ!

ಈ ಸರ್ಕಾರದಲ್ಲಿ ಮಂತ್ರಿಗಳಾಗುವುದಕ್ಕೆ ಬಿಜೆಪಿಯಲ್ಲಿ ಪೈಪೋಟಿ ಇದೆಯಂತೆ. ಬಿಜೆಪಿ ಪಕ್ಷಕ್ಕೆ ಈ ಸಮಸ್ಯೆ ನಿಭಾಯಿಸಲಾಗುತ್ತಿಲ್ಲವಂತೆ. ಅದಕ್ಕೆ ಸರ್ಕಾರಕ್ಕೂ, ಶಾಸಕಾಂಗಕ್ಕೂ ಸಂಬಂಧವೇ ಇಲ್ಲದ, ಜನರಿಗೆ ಉತ್ತರದಾಯಿಯೇ ಅಲ್ಲದ ಸಂವಿಧಾನೇತರ (ಸಂವಿಧಾನ ವಿರೋಧಿ) ಶಕ್ತಿಯಾಗಿರುವ ಆರ್‌ಎಸ್‌ಎಸ್ ಗೆ ಸಚಿವರ ಆಯ್ಕೆ, ಖಾತೆ ಹಂಚಿಕೆ ಪ್ರಶ್ನೆಯನ್ನು ವಹಿಸಲಾಗಿದೆಯಂತೆ. ಅದಕ್ಕಾಗಿ ಆರ್‌ಎಸ್‌ಎಸ್ ನಾಲ್ಕು ಪ್ರಮುಖರ ಸಮಿತಿಯನ್ನು ರಚಿಸಿದೆ. ಈಗ ಸಿಕ್ಕಿರುವ ಆಡಳಿತ ಯಂತ್ರದ ಕೀಲಿಯನ್ನು ತಮ್ಮ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾದ ಉದ್ದೇಶದ ಮುನ್ನಡೆಗೆ ಬಳಸಲು ಕಾರ್ಯಪ್ರವೃತ್ತವಾಗಿದೆ. ಹೀಗಾಗಿ ಬಹಳಷ್ಟು ಸಚಿವರನ್ನು ಆರ್‌ಎಸ್‌ಎಸ್ ಹಿನ್ನೆಲೆ ಇರುವವರನ್ನೇ ಆರಿಸುವ ಸಂಭವವಿದೆ. ಹಾಗೆಯೇ ಮುಖ್ಯಮಂತ್ರಿಗಳ ಕಾರ್ಯದರ್ಶಿಗಳಂತಹ ಆಪ್ತ ಅಧಿಕಾರಿಗಳನ್ನು ಆಯ್ಕೆ ಮಾಡುವಾಗ ಕೆಲವರನ್ನು 'ಉದಾರವಾದಿ'ಗಳು ಎಂಬಂತೆ ಕಾಣುವವರ ಆಯ್ಕೆ ಮಾಡುವಾಗಲೇ ಪರಿವಾರಕ್ಕೆ ಹತ್ತಿರವಾದರವರನ್ನು ನೇಮಿಸಿಕೊಳ್ಳಲಾಗಿದೆ. ಮುಖ್ಯಮಂತ್ರಿಗೆ ಸಹಾಯಕವಾಗಿ ಕೆಲಸ ಮಾಡಲು ಒಂದು ಅದೃಶ್ಯ ಪಡೆಯೇ ಇಳಿಯುತ್ತಿದೆ. ತನ್ನ ಕುರ್ಚಿಯನ್ನು ಉಳಿಸಿಕೊಳ್ಳಲು ಯಡಿಯೂರಪ್ಪನವರು ಹೆಚ್ಚು ಹೆಚ್ಚು ಸಂಘದ ನಿಷ್ಟ ದಾಳವಾಗಿಯೂ ಕೆಲಸ ಮಾಡಲು ಸಿದ್ಧರಾಗಿದ್ದಾರೆ.

ಜಾತಿವಾದದ ಲಾಭದಹೊಂಚು

ಇದರೊಟ್ಟಿಗೆ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ವಿ.ಪಿ.ಬಳಿಗಾರ್, ವಿಶೇಷ ಕರ್ತವ್ಯಾಧಿಕಾರಿ ವಿರೂಪಾಕ್ಷಯ್ಯ, ಗೂಢಾಚಾರ ವಿಭಾಗ ಮುಖ್ಯಸ್ಥರಾಗಿ ಶಂಕರ್ ಬಿದರಿಯವರನ್ನು ಹೊಸದಾಗಿ ನೇಮಕ ಮಾಡಿಕೊಳ್ಳಲಾಗಿದೆ. ಇವರೆಲ್ಲಾ ಒಂದೇ ಜಾತಿಗೆ (ಲಿಂಗಾಯತ) ಸೇರಿದವರಾಗಿದ್ದಾರೆ. ಜಾತಿವಾದದಿಂದ ಲಾಭ ಹೊಡೆಯಲು ಹಾಕಿದ ಬಿಜೆಪಿಯ ಲೆಕ್ಕಾಚಾರ ಸ್ಪಷ್ಟವಿದೆ. ಅದಕ್ಕಾಗಿಯೇ ಯಡಿಯೂರಪ್ಪನವರಿಗೆ ಸಿದ್ದಗಂಗಾ, ರಂಭಾಪುರಿ ಕೊಳದ ಮಠದಂತಹ ಲಿಂಗಾಯತ ಸ್ವಾಮಿ, ಸನ್ಯಾಸಿಗಳು 'ಆಶಿರ್ವಾದದ ಹಸ್ತ ಎತ್ತಿ' ಸುತ್ತುತ್ತಿದ್ದಾರೆ.

ರಾಜ್ಯದಲ್ಲಿನ ಒಂದು ಪ್ರಬಲ ಜಾತಿಯಾದ ಲಿಂಗಾಯತರ ನಡುವೆ ನೆಲೆಯನ್ನು ಕ್ರೋಢೀಕರಣ ಮಾಡಿಕೊಳ್ಳುವುದು ಈ ಎಲ್ಲಾ ವರಸೆಗಳ ಗುರಿ.

ಕುಖ್ಯಾತ ಪಾತ್ರ

ಹೀಗೆ ಕುಮಾರಸ್ವಾಮಿಯನ್ನು ಮರು ಮೈತ್ರಿಗೆ ಒಪ್ಪಿಸುವುದನ್ನು ಒಳಗೊಂಡು ಸರ್ಕಾರ ರಚಿಸುವಲ್ಲಿ, ಅದು ಚಲಿಸುವಲ್ಲಿ ಆರ್‌ಎಸ್‌ಎಸ್ ಕುಖ್ಯಾತ ಪಾತ್ರ ಹೆಚ್ಚಿನ ವೇಗವನ್ನು ಪಡೆಯುತ್ತಲಿದೆ. ಇದು ಅತ್ಯಂತ ಅಪಾಯಕಾರಿಯಾಗಿದೆ. ಯಾಕೆಂದರೆ ಬಿಜೆಪಿ ಕೇವಲ ಒಂದು ರಾಜಕೀಯ ಪಕ್ಷವಾಗಿ ಸರ್ಕಾರ ರಚಿಸಿ, ಇಲ್ಲವೇ ಕಳೆದುಕೊಂಡು ಬಿಡುವಂತಹ ಸಾಮಾನ್ಯ ಪಕ್ಷವಲ್ಲ. ಅದರ ಹಿಂದೆ ಎಲ್ಲವನ್ನು ನಿಯಂತ್ರಿಸುವ ನಿರ್ದೇಶಿಸುವ ಒಂದು ಸುಸಂಘಟಿತ ಫ್ಯಾಸಿಸ್ಟ್ ಶಕ್ತಿ ಇದೆ. ಅದಕ್ಕೆ ಸ್ಪಷ್ಟ ಅಜೆಂಡಾವಿದೆ.

ಸಮನ್ವಯ ಎಲ್ಲಿ?

ನೂತನ ಮುಖ್ಯಮಂತ್ರಿಗಳ ಕಾರ್ಯವೈಖರಿ ನಡೆ, ನುಡಿಯೂ ವಿಶೇಷವೇ! ಪ್ರಮಾಣ ವಚನ ಸ್ವೀಕರಿಸಿದ ಬಳಿಕ 'ತಾವು ಜೆಡಿ(ಎಸ್) ಜೊತೆಗೆ ಸಮಾಲೋಚನೆ, ಸಮನ್ವಯದಿಂದ ಕಾರ್ಯನಿರ್ವಹಿಸುವುದಾಗಿ' ವಿನಯದಿಂದ

ಪುಟ 15ಕ್ಕೆ

ಭೂಮಾಫಿಯಾಗಳಿಗೆ ಮಣೆ ಹಾಕಿದ ಸಿ.ಎಂ. ಗೆ ಏಟು ಕೊಟ್ಟ ಜನ

ಯಡಿಯೂರಪ್ಪನವರ ಸರ್ಕಾರ ಕೈಗೊಂಡ ಮೊದಲ ನಿರ್ಧಾರಕ್ಕೆ ಜನ ತಿರುಗಿ ಮುಖಕ್ಕೆ ಮುಷ್ಟಿ ಏಟು ನೀಡಿದ್ದಾರೆ.

ಮಣಿವಣ್ಣನ್ ಒಬ್ಬ ದಕ್ಷ ಅಧಿಕಾರಿಯೆಂದು ಹೆಸರು. ಸಿ.ಎಂ. ಮಾಡಿದ ಮೊದಲ ಕೆಲಸವೆಂದರೆ ಮೈಸೂರಿನಿಂದ ಎತ್ತಂಗಡಿ ಮಾಡಿದ್ದು . ಕಾರಣ? ಆ ಹಿಂದಿನ ಒಂದೆರೆಡು ದಿನಗಳಲ್ಲಿ ನಗರದಲ್ಲಿ ಅಕ್ರಮವಾಗಿ ಕಟ್ಟಲಾದ ಕೆಲವರ ವಶದಲ್ಲಿರುವ ಪಾಲಿಕೆಯ ಸ್ವತ್ತನ್ನು ತೆರುವುಗೊಳಿಸಿ ಸ್ವಾಧೀನಪಡಿಸುವುದಾಗಿ ಮಣಿವಣ್ಣನ್ ಹೇಳಿದ್ದು. ಇದನ್ನು ಸಹಿಸದ ಭೂಮಾಫಿಯಾಗಳದ್ದೇ ಕೈವಾಡ, ಇದಕ್ಕೆ ಸಿಎಂ ಶ್ರೀರಕ್ಷೆ ಎಂಬುದಕ್ಕೆ ಬೇರೆ ಪುರಾವೆ ಬೇಕೆ? ಇದನ್ನು ಪ್ರತಿಭಟಿಸಿದ ನಾಗರಿಕರು ಮೈಸೂರು ಬಂದ್‌ಗೆ ಕರೆ ನೀಡಿದ್ದರು. ತೀವ್ರ ಪ್ರತಿರೋಧ ಅರಿತ ಸಿಎಂ ಆದೇಶ ಜಾರಿ ತಡೆಹಿಡಿಯಬೇಕಾಗಿ ಬಂದಿದೆ. ಹಾಗೆ ಶಿವಮೊಗ್ಗದ ಜಿಲ್ಲಾಧಿಕಾರಿ ವರ್ಗಾವಣೆಗೂ ವಿರುದ್ಧ ದನಿ ಕೇಳಿದೆ. ಇವು ಯಡಿಯೂರಪ್ಪನವರ ಭೂಮಾಫಿಯಾ ಪ್ರೇಮಕ್ಕೆ ಜನ ಕೊಟ್ಟ ಪ್ರಥಮ ಪ್ರಹಾರ. ಇಂತಹ ಪ್ರಹಾರಗಳು ಹೆಚ್ಚಾಗುವುದು ಕರ್ನಾಟಕವನ್ನು ಸ್ವಲ್ಪವಾದರೂ ಉಳಿಸಬಲ್ಲದು.

ಅಕ್ರಮ ಸೃಷ್ಟಿಗೆ 'ದೈವ'ದ ಬಲವೇ?

ಈ ಸರ್ಕಾರ ರಚನೆಯಾಗಿದ್ದೇ ತಮ್ಮಿಂದ ಎಂದು ಕೆಲವು ಜೋತಿಷಿಗಳೂ, ಮಠಾಧೀಶರೂ ಹೇಳಿಕೊಳ್ಳುತ್ತಿದ್ದಾರೆ. ಯಡಿಯೂರಪ್ಪನವರು ಗುಡಿಗುಂಡಾರ, ಜೋತಿಷಿಗಳ ಮನೆ, ಸ್ವಾಮಿಗಳ ಸುತ್ತ ಸುತ್ತುತ್ತಿದ್ದಾರೆ. ಸಿ.ಎಂ. ಆಗಲೆಂದು ಜ್ಯೋತಿಷಿಗಳ ಬೋಧನೆಯಂತೆ ಹೆಸರನ್ನೇ ಯಡ್ಯೂರಪ್ಪ ಎಂದು ಮಾಡಿಕೊಂಡರು. ಸಿ.ಎಂ. ಆದ ವಾರ-ದಿನವೇ ಬೆಳಗಿನ ಜಾವ 4 ಗಂಟೆಗೆ ಬುರುಡೇ ಕಟ್ಟಿ ಜೋತಿಷಿಯನ್ನು ಕಂಡು ಮೌನವ್ರತ ಹಿಡಿದು ಹಿಂತಿರುಗಿದ್ದಾರೆ. ವಿಪರ್ಯಾಸವೆಂಬಂತೆ ತಮಗೆ ಅನುಕೂಲವೆನಿಸುವ ಜೋತಿಷ್ಯ ಹೇಳಲಿಲ್ಲವೆಂದು ಬಿಜೆಪಿಯಿಂದ ಪ್ರತಿಭಟನೆ ನಡೆದಿದೆ. 'ಗ್ರಹ-ನಕ್ಷತ್ರಗಳನ್ನು ತೋರಿಸಿ, ಕಾಣಿಕೆ ಇಟ್ಟವರಿಗೆ ಖುಷಿಯಾಗಿಸುವುದೇ ಈ ಜೋತಿಷಿಗಳ ಕೆಲಸ. ಹಾಗೆಯೇ ಹವನ-ಹೋಮಗಳೂ. ಹೀಗೆ ಜೋತಿಷಿಗಳು, ಪೂಜಾರಿಗಳು, ಮಠಾಧೀಶರು ಬಿಜೆಪಿ, ಜೆಡಿ(ಎಸ್), ಕಾಂಗ್ರೆಸ್ ಪಕ್ಷಗಳ ನಡುವೆ ಹಂಚಿಹೋಗಿದ್ದಾರೆ. ಪೇಜಾವರ ಸ್ವಾಮಿಯನ್ನು ಬಿಡಿ ಅವರು ಸಂಘ ಪರಿವಾರದ ಕಟ್ಟಾಳು. ತುಮಕೂರಿನ ಸಿದ್ದಗಂಗಾಮಠದ ದಾಸೋಹಿ ಹಿರಿಯ ಸ್ವಾಮಿಗಳೂ ಯಡಿಯೂರಪ್ಪನವರ ಪರ ವಕಾಲತ್ತು ವಹಿಸುತ್ತಿದ್ದಾರೆ ಎಂದರೆ ಅಧಿಕಾರದ ಲಾಬಿ ಸೆಳೆತ ಎಷ್ಟಿರಲಿಕ್ಕಿಲ್ಲ.

ಇಂತಹ 'ಸಾಧು - ಸಜ್ಜನರು' ಈ ರಾಜಕೀಯ ಪಕ್ಷಗಳ ತತ್ವಹೀನ, ಅಧಿಕಾರ ದಾಹದ ವಿರುದ್ಧ ಸಿಡಿದೇಳುವ, ಕನಿಷ್ಟ ಮುಜುಗರವೂ ಪಡದೇ ತಮ್ಮದೇ 'ಸೃಷ್ಟಿ' ಎಂಬಂತೆ ಬೀಗುತ್ತಿರುವುದು ಎಂತಹ ಶೋಭೆ ತಂದೀತು? ತಮ್ಮ ಅನೈತಿಕ, ಅಕ್ರಮ ಕಾರ್ಯಗಳಿಗೆ ಖಾವಿ, ಜೋತಿಷ್ಯ, ದೈವಗಳ ಆಶ್ರಯ ಅರಸುತ್ತಿರುವುದು, ಜನರನ್ನು ನಂಬಿಸುವಂತೆ ಟಿ.ವಿ., ಪತ್ರಿಕೆಗಳಲ್ಲಿ ಅದೇ ಎಂಜಲನ್ನು ಊದುವುದು ಜನರನ್ನು ಅವಮಾನಗೊಳಿಸುತ್ತಿವೆ.



✍ ಕೆ.ನೀಲಾ



ಐದು ವರ್ಷ ಆ ಮನೆಗೆ ಸೀತಾಬಾಯಿ ಏನು ಮಾಡಿಲ್ಲ? ಕಸಗುಡಿಸಿ ಪಾತ್ರೆ ತಿಕ್ಕಿ, ಬಟ್ಟೆ ಒಗೆದು,ನೆಲ ತೊಳೆದು ಹಸನು ಹಳ್ಳ ಮಾಡಿ, ನಲ್ಲಿ ನೀರು ಬರದಿದ್ದರೆ ದೂರದ ಬೋರ್‌ವೆಲ್‌ನಿಂದ ನೀರು ತಂದು ಹಬ್ಬಗಳಲ್ಲಿ ನಸುಕಲ್ಲೇ ಬಂದು ಹೆಚ್ಚಿನ ಕೆಲಸ ಮಾಡಿದ ಮೇಲೂ, ಮೂರು ದಿನ ಗೈರು ಹಾಜರೆಂದು, ಕೊಡುವ ಕೂಲಿಯಲ್ಲಿ ಮುರಿದುಕೊಂಡಾಗ ಸೀತಾಬಾಯಿ ಬಾಯಿಗೆ ಬಂದಂತೆ ಬಯ್ದದ್ದು ಖರೆ. 'ಹೆಚ್ಚಿನ ಕೆಲಸಕ್ಕೆ ಎಂದಾದರೂ ಹೆಚ್ಚು ಕೂಲಿ ಕೊಟ್ಟಿರೇನು?' ಎಂದು ಪಾಟಿ ಸವಾಲು ಮಾಡಿದ್ದು ಖರೆ.

'ಯಾವ ಕುಲವಯ್ಯ ನಮದ್ಯಾವ ಮತವಯ್ಯಾ'

ಯುನಿಸೆಫ್ ಕಛೇರಿಯಿಂದ ಫೋನಿತ್ತು. ಮನೆಗೆಲಸದ ಮಹಿಳೆಯರ ಸಮಾವೇಶಕ್ಕೆ ಕರೆಯಿತ್ತು. ಥಟ್ಟನೆ ಒಪ್ಪಿಕೊಂಡೆ. ಸುಮಾರು ಇನ್ನೂರಕ್ಕೂ ಹೆಚ್ಚು ಜನ ಮಹಿಳೆಯರು ಸರಿ ಸುಮಾರು ಅರ್ಧದಷ್ಟು ಮುಸ್ಲಿಂ ಮಹಿಳೆಯರು. 25 ರಿಂದ 30 ಹೆಂಗಸರು ಅಳುವ ಕಂದಗಳನ್ನು ಸಮಾಧಾನಿಸುತ್ತಲೇ ಸಭೆಗೆ ಕಿವಿಯಾಗಿದ್ದರು. ಯಾರ ಮುಖದ ಮೇಲೂ ನೆಮ್ಮದಿ ಮತ್ತು ಆನಂದದ ಕಳೆಯಿರಲಿಲ್ಲ. ಹುಬ್ಬಿನ ನಡುವಿನ ಗೆರೆಗಳೆರಡು ಡಾಳಾಗಿದ್ದವು. ಯಾರೆಲ್ಲರ ಬಟ್ಟೆ, ಪಾತ್ರೆ, ನೆಲವನ್ನು ಥಳಥಳಗೊಳಿಸಿ ಎರಡು ಕೈಗಳು ಒರಟೊರಟಾಗಿದ್ದವು. ಸರಕಾರಿ ಅಧಿನಿಯಮದ ಮೇಲೆ ಕಣ್ಣಾಡಿಸಿದೆ.

14 ಕ್ಕಿಂತಲೂ ಚಿಕ್ಕ ವಯಸ್ಸಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಅಪರಾಧ. ಸರಕಾರಿ ನೌಕರರಾಗಿದ್ದಲ್ಲಿ ಕೆಲಸಕ್ಕೆ ಸಂಚಕಾರ ಮತ್ತು ಜೈಲುವಾಸ ಮತ್ತು ದಂಡ!

45 ನಿಮಿಷದಲ್ಲಿ ಬಟ್ಟೆ ತೊಳೆದರೆ ಅಥವಾ ಪಾತ್ರೆ ತಿಕ್ಕಿದರೆ ನಾಲ್ಕು ಜನರಿರುವ ಕುಟುಂಬವಿದ್ದರೆ ಕನಿಷ್ಟ 150 ರೂ. ತಿಂಗಳಿಗೆ ವೇತನ ಕೊಡಬೇಕು. ನೆಲ ಒರಸಿ ಪಾತ್ರೆ ತೊಳೆದು ಬಟ್ಟೆ ಶುಚಿಗೊಳಿಸಿ ಮನೆ ಮಗುವನ್ನು ನೋಡಿಕೊಳ್ಳುವುದಕ್ಕೆಂದು ಎಂಟು ತಾಸು ಸಮಯ ಕೊಟ್ಟರೆ 1600 ರೂ. ವೇತನ. 45 ನಿಮಿಷಕ್ಕೂ ಹೆಚ್ಚು ಸಮಯ ತಗುಲಿದರೆ ದಿನದ ವೇತನದ ಎರಡು ಪಟ್ಟು ಹೆಚ್ಚುವರಿ ವೇತನ ಪಾವತಿಸಬೇಕು. ಹಿಂದೆ ಇನ್ನೂ ಕೆಲವು ಸಣ್ಣಪುಟ್ಟ ಸೌಲಭ್ಯಗಳು ಅಕ್ಷರ ರೂಪದಲ್ಲಿದ್ದವು. 2004 ಮಾರ್ಚ್ 12 ರಂದು ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟವಾದ ಅಧಿನಿಯಮವಿದು. ಈ ಕಾನೂನು ತಿಳಿಸಲು ಮನೆಗೆಲಸದ ಮಹಿಳೆಯರ ಸಮಾವೇಶ ಕರೆದಿದ್ದರು. ಆಯುಕ್ತರು - ಅಧಿಕಾರಿಗಳು ಕರಾರುವಕ್ಕಾಗಿ ಮಾತನಾಡಿ ಕುಳಿತರು. ಫಕೀರಮ್ಮ ಎಂಬ ಮನೆಗೆಲಸದ ಮಹಿಳೆಯನ್ನು ವೇದಿಕೆಗೆ ಆಹ್ವಾನಿಸಲು ಹೇಳಿದೆ. ಜನವಾದಿಯ ಗೆಳತಿಯರೂ ಅಲ್ಲಿದ್ದರು. ಇನ್ನೇನು ಸಭೆ ಮುಗಿಸುವ ಆತುರದಲ್ಲಿ ಸಂಘಟಕರು ವಂದನಾರ್ಪಣೆಗೆ ನಿಲ್ಲಬೇಕು. ಅಷ್ಟರಲ್ಲಿ ಕಪ್ಪು ಬುರ್ಖಾಗಳ ನಡುವಿನಿಂದ ಹೆಂಗಸೊಬ್ಬಳು ಎದ್ದು ನಿಂತಳು. ನೂರುಜಹಾ ಹೆಸರಿನ ನಡುವಯಸ್ಸಿನ ಅವಳು 'ಏನ್ರೀ ಸಾಬ್ರೇ, ಕಾನೂನು ಭಾಳ ಅವಾ ಅಂತ ಹೇಳ್ತೀರಿ. ಕಾಗದದಾಗ ಇದ್ರ ಮನಗೇನ ಬಂತು? ನಮ ಗಂಣಸೂರು ದಿನಾ ಕುಡದ ಬಂದು ಮೈ ಮುರ್ದ್ಯಾಗ ಹೊಡಿತಾರ. ಸೆರಿ ಬಂದ್ ಮಾಡೀವಿ ಅಂತ ನಿಮ್ಮ ಮುಖ್ಯಮಂತ್ರಿ ಟೀವ್ಯಾಗ ಹೇಳೇ ಹೇಳ್ಯಾರ. ಮತ್ತು ನಮ್ಮ ಗಂಣಸರಿಗೆ ಕುಡಿಲಾಕ ಹ್ಯಾಂಗ ಎಲ್ಲಿಂದ ಸಿಗಲತದ ಹೇಳ್ರೀ? ಸಣ್ಣ ಮಕ್ಕಳೀಗೆ ಸಾಲಿಗೆ ಕಳಸ್ರೀ ಅಂತೀರಿ. ನಮ್ಮಲ್ಲಿ ಸರಕಾರಿ ಸಾಲಿ ಇಲ್ಲ. ಅಂಗನವಾಡೀನೂ ದೂರ ಅದಾ. ಅಷ್ಟ ದೂರ ನಡಕೊಂಡು ಹೋಗಿ ಬಿಟ್ಟ ಬಂದ್ರ ಹೊಳ್ಳಿ ತರಲಾಕ ಯಾರ ಹೋಗಬೇಕು? ಬಡುರಿಗೆ ನಿಮ್ಮ ಸರ್ಕಾರ ಯಾನ ಅನುಕೂಲ ಮಾಡ್ಯಾದ ಹೇಳ್ರೀ...? ರೇಷನ್ ಕಾರ್ಡಿಲ್ಲ, ಗ್ಯಾಸಲೆಟ್ ಎಣ್ಣೆ ಇಲ್ಲ. ಕುಡ್ಯಾ ನೀರ ಸಲ್ಯಾಕ ಗಲ್ಲಿ ತುಂಬ ಓಡ್ಯಾಡಬೇಕು. ಇವು ಕಷ್ಟದ ಪರಿಹಾರಕ್ಕೆ ನಿಮ್ಮ ಕಾನೂನದಾಗ ಯಾನ ಬರದಾರ ಹೇಳ್ರೀ? ನಮ್ಮ ಮಂದ್ಯಾಗ ಮನಿ ಹೊರಗ ಹೋಗಬ್ಯಾಡನೂ ಅಂತಾರ. ಹೊರಗ ಹೋಗಿ ದುಡ್ಡಿಲ್ಲಂದ್ರ ಹೊಟ್ಟೆನೂ ತುಂಬಲ್ಲ... ಬಡೂರಿಗೆ ಬದುಕು ಅಂತ್ರೀ? ಬ್ಯಾಡ ಅಂತ್ರೀ?..." ನೂರ ಜಹಾ ದೊಡ್ಡ ದನಿಲಿಂದ ಮಾತನಾಡುತ್ತಲೇ ಇದ್ದಳು. ಅವಳು ಹೇಳುವ ಸಂಕಟಗಳ ಸರಮಾಲೆಗೆ ಆಯುಕ್ತರು ತತ್ತರಿಸಿ ಹೋದರು. ಸಭೆ ಮುಗಿಸುವ ಹಾಗಿಲ್ಲ. ಪ್ರಶ್ನೆಗಳಿಗೆ ಉತ್ತರಿಸುವ ತಾಖತ್ತೂ ಇಲ್ಲದೆ ಅಧಿಕಾರಿ ವೃಂದ ಒದ್ದಾಡುತ್ತಿತ್ತು. 'ಮೇಡಮ್ಮೋರೆ ಅವ್ರೀಗೆ ನೀವೇ ಏನಾರ ಹೇಳ್ರೀ..' ಅಂತ ಕೇಳತೊಡಗಿದರು. 'ನೂರಜಹಾನ್ ಪ್ರಶ್ನೆಗಳೂ ನನ್ನ ಪ್ರಶ್ನೆಗಳೇ. ಅವರಿಗೆ ಸಮಾಧಾನಿಸುವ ಮಾತಿಲ್ಲ. ನಗರದ ತುಂಬಾ ಸರ್ವೇ ಮಾಡ್ರೀ... ಅವರು ಖರೆ ಬಡವರೇ. ಮುಂದಿನ ತಿಂಗಳು ರೇಷನ್ ಕಾರ್ಡ್ ಹಂಚ್ತೀರಲ್ಲ... ಆಗ ಸರ್ವೆ ಪಟ್ಟಿಯಲ್ಲಿದ್ದ ಎಲ್ಲರಿಗೂ ರೇಷನ್ ಕಾರ್ಡ್ ಕೊಡ್ರಿ. ಅಂಗನವಾಡಿ ಕೇಂದ್ರ ಇಲ್ಲದ ಪ್ರದೇಶಗಳಿಗೆ ಕೇಂದ್ರ ಆಗಬೇಕು. ಅವರ ಇತರ ಆರ್ಥಿಕ - ಸಾಮಾಜಿಕ ದುಃಖ ದುಮ್ಮಾನಗಳ ಪರಿಹಾರಕ್ಕಾಗಿ ಪ್ರತ್ಯೇಕ ಸೆಲ್ ಪ್ರಾರಂಭಿಸಿ. ಅವರಿಂದ ದೂರು ಬಂದಲ್ಲಿ ತಕ್ಷಣ ಸ್ಪಂದಿಸಿ ಕ್ರಮ ವಹಿಸಿ...." ಎಂದೆಲ್ಲ ಬಂದ ಮಹಿಳೆಯರ ಸಮ್ಮುಖದಲ್ಲಿ ಪ್ರಸ್ತಾಪವಿಟ್ಟೆ. ಮನೆಗೆಲಸದ ಮಹಿಳೆಯರದ್ದೇ ಸ್ವಸಹಾಯ ಗುಂಪುಗಳ ರಚನೆ ಮಾಡಿ ಅನೇಕ ವಸ್ತುಗಳ ತಯಾರಿಕೆಯಲ್ಲಿ ತರಬೇತಿ ಕೊಡಿಸುವುದು, ಸರ್ಕಾರದಿಂದ ವಿಶೇಷ ಸಾಲಕೊಟ್ಟು ಶೇ 50 ರಿಯಾಯಿತಿ (ಮಾಫ್) ಮಾಡಿದರೆ ಅನುಕೂಲವಾಗುತ್ತದೆ ಎಂದು ವೇದಿಕೆಯ ಮೇಲೆ ಉಪಸ್ಥಿತರಿದ್ದ ಫಕೀರಮ್ಮಳ ಒತ್ತಾಯ. ನಾಲ್ಕು ಮನೆಗಳ ಪಾತ್ರೆ ಮತ್ತು ಬಟ್ಟೆ ತೊಳೆಯುವ ಕಾಯಕದ ಫಕೀರಮ್ಮಳ ತಲೆ ತುಂಬ ಬಿಳಿಕೂದಲು. ಸುಕ್ಕುಬಿದ್ದ ಮುಖ. ಕೈತುಂಬಾ ಗಾಯದ ಚರ್ಮ. ಖಂಡಿತ ದುಡಿಯುವ ವಯಸ್ಸಲ್ಲ. "ಎಷ್ಟು ದಿನ ದುಡಿದರೂ ಬದುಕಿಗೆ ಆಧಾರ ಇಲ್ಲ. ಇದ್ದೊಬ್ಬ ಮಗ ಮದಿ ಆಗಿದ ಮೂರ ದಿನಕ್ಕೆ ಬ್ಯಾರೆ ಆಗ್ಯಾನ. ಹೆಣ್ಣು ಮಕ್ಕಳು ಗಂಡನ ಮನಿಗೆ ಹೋಗ್ಯಾರ. ಕಣ್ಣ ಕಾಣಲಾರದ ಗಂಡಗ ನೋಡೋಬೇಕಲ್ಲ... ಮನ್ಯಾಗ ಕುಂತರ ಹೊಟ್ಟೆ ಹ್ಯಾಂಗ ತುಂಬಬೇಕು...?"

ಫಕೀರಮ್ಮನ ಕಣ್ಣೊಳಗಿನ ನೀರು ಬತ್ತಿ ಹೋಗಿದ್ದವು. ಶೂನ್ಯ ನೋಟ ಮಾತ್ರ ಸ್ಥಾಯಿಯಾಗಿತ್ತು. ದಿನಗಳನ್ನು ತಳ್ಳುವತ್ತಾ ಮಾತ್ರ ಅವಳ ಚಿತ್ತ ನೆಟ್ಟಿತ್ತು. ಆಸೆಯೆಂಬುದು ಜೀವನದ ಓಜಸ್ಸು - ತೇಜಸ್ಸು. ಫಕೀರಮ್ಮಳಿಗೆ ಗೇಣು ಹೊಟ್ಟೆ ತುಂಬಿಸುವ, ಮಾರುದ್ದ ಮೈಮುಚ್ಚುವ ಚಿಂತೆ ಬಿಟ್ಟರೆ ಇನ್ಯಾವ ಆಸೆಯೂ ಇರಲಿಲ್ಲ. ಅಥವಾ ಕೈಗೆಟುಕದ ಜೀವನದ ಪಯಣದಲ್ಲಿ ಹೈರಾಣಾಗಿ ಆಗಿ ಕಡೆಗು 'ಖಾಲಿ' ತನ ಮಾತ್ರ ಅವಳನ್ನು ಅಣಕಿಸಿದ್ದಕ್ಕಿರಬೇಕು. ಅವಳ ಕಣ್ಣಲ್ಲಿ ನಿರಾಶೆಯು, ನಿರುತ್ಸಾಹದ ಭಾವವಿತ್ತು. ಬದುಕಿನ ಸಂಜೆಯ ಹೊತ್ತಲ್ಲಿ ಒಂದಿಷ್ಟು ನೆಮ್ಮದಿ, ವಿಶ್ರಾಂತಿಯಿಲ್ಲದೆ ಒದ್ದಾಡುವ ಮುದಿ ಜೀವಕ್ಕೆ ಆಸರೆ ಬೇಡವೇ?

ಅಲ್ಲಿ ದೂರದಲ್ಲಿ ಸೀತಾಬಾಯಿ ಕೂತಿದ್ದಳು. ಜೋರು ಬಾಯಿಯ ಹೆಂಗಸು. ಕಳೆದ ವರ್ಷ ಮೂರಂತಸ್ತಿನ ಸಾಹುಕಾರ ಮನೆಯವರೊಂದಿಗೆ ರಸ್ತೆ ಮೇಲೆ ನಿಂತು ಬಯ್ದು ಬಜಾರಿ ಅನಿಸಿಕೊಂಡಾಕಿ. ಐದು ವರ್ಷ ಆ ಮನೆಗೆ ಸೀತಾಬಾಯಿ ಏನು ಮಾಡಿಲ್ಲ? ಕಸಗುಡಿಸಿ ಪಾತ್ರೆ ತಿಕ್ಕಿ, ಬಟ್ಟೆ ಒಗೆದು,ನೆಲ ತೊಳೆದು ಹಸನು ಹಳ್ಳ ಮಾಡಿ, ನಲ್ಲಿ ನೀರು ಬರದಿದ್ದರೆ ದೂರದ ಬೋರ್‌ವೆಲ್‌ನಿಂದ ನೀರು ತಂದು ಹಬ್ಬಗಳಲ್ಲಿ ನಸುಕಲ್ಲೇ ಬಂದು ಹೆಚ್ಚಿನ ಕೆಲಸ ಮಾಡಿದ ಮೇಲೂ, ಮೂರು ದಿನ ಗೈರು ಹಾಜರೆಂದು, ಕೊಡುವ ಕೂಲಿಯಲ್ಲಿ ಮುರಿದುಕೊಂಡಾಗ ಸೀತಾಬಾಯಿ ಬಾಯಿಗೆ ಬಂದಂತೆ ಬಯ್ದದ್ದು ಖರೆ. 'ಹೆಚ್ಚಿನ ಕೆಲಸಕ್ಕೆ ಎಂದಾದರೂ ಹೆಚ್ಚು ಕೂಲಿ ಕೊಟ್ಟಿರೇನು?' ಎಂದು ಪಾಟಿ ಸವಾಲು ಮಾಡಿದ್ದು ಖರೆ.

ಸೀತಾಬಾಯಿಗೆ ಈ ಪರಿಯ ಜೋರುತನ ಇರದಿದ್ದರೆ ಅವಳ ಬದುಕು ಮೂರಾಬಟ್ಟೆಯಾಗಿ ಹಳೆಯದಾಗುತ್ತಿತ್ತು. ಸೀತಾಬಾಯಿಯ ಕುಡಕ ತಂದೆ ತನ್ನಂತೆ ಕುಡಿವ ಶರಾಬುಖಾನೆಯ ಗೆಳೆಯನೊಬ್ಬನಿಗೆ ಮಗಳನ್ನು ಧಾರೆಯೆರೆದು ಕೊಟ್ಟಿದ್ದ. ಸರಿಯಾಗಿ ನಾಲ್ಕು ವರ್ಷಕ್ಕೆ ಮೂರು ಮಕ್ಕಳನ್ನು ಅವಳ ಉಡಿಗಿಟ್ಟು ತನಗೆ ಚೆಂದ ಕಂಡ ಇನ್ಯಾರೋ ಚೆಲುವಿಯೊಬ್ಬಳ ಬೆನ್ನು ಹತ್ತಿ ಹೊರಟೇ ಹೋದ. ನಸುಗಪ್ಪು ಬಣ್ಣದ, ಅಗಲಕಂಗಳ, ಥಟ್ಟನೆ ಕಣ್ಸೆಳೆದ ಸೀತಾಬಾಯಿಗೆ ಹರಕು ಸಂಸಾರಕ್ಕೆ ತೇಪೆ ಹಚ್ಚುತ, ಹೆಣ್ಣೆಂಬ ಕಾರಣಕ್ಕೆ ಎದುರಾಗುವ ಸಂಕಟಗಳನ್ನು ನಿವಾರಿಸಿಕೊಳ್ಳುತ ಬದುಕುವ ಛಲ ಹುಟ್ಟಿತು. 'ಆಯ್ ಬಿಡ್ರಿ, ನಾವೇನು ಪುಗಸಟ್ಟೆ ಪಗಾರ ಕೇಳ್ತೀವೇನು? ನಾವ್ ಮಾಡಿಲ್ಲಂದ್ರ ಅವ್ರ ಮನಿ ಥಳಥಳ ಅಂತದೇನು?" ಅಂತ ಗಲಗಲ ಮಾತಾಡಿ, ದಡಬಡಾ ಕೆಲಸವೂ ಮಾಡಿ ಕೈಬೀಸುತ ಹೊಂಟಳಂದ್ರೇ ಅವಳನ್ನು ತರುಬುವವರ್‍ಯಾರೂ ಇರುವುದಿಲ್ಲ. 'ಸೀತಾಬಾಯಿ ಗಂಡ ಹೊಳ್ಳಿ ಬಂದ್ರ ಏನ್ ಮಾಡ್ತೀ....' ಕೇಳಿದರೆ 'ಬೇಕಾದಾಗ ಬಂದು ಬ್ಯಾಡದಾಗ ಹೋಗಲಾಗ ನನ್ನ ಮನಿ ಬಾಗಲ ಖುಲ್ಲಾ ಇಟ್ಟಿಲ್ಲ..." ಅನ್ನುತ್ತಲೇ ಚಂಚಿಯಿಂದ ಎಲೆಯೊಂದು ಬಾಯೊಳಗಿಟ್ಟುಕೊಂಡು ಮುಂದೆ ನಡದೇ ಬಿಡುವಳು..... ಸೀತಾಬಾಯಿಯೂ ರಟ್ಟೆಯ ಕಸು ಕಮ್ಮಿಯಾದ ಮರುದಿನ ಫಕೀರಮ್ಮಳಂತೇ ಆಗುವಳಲ್ಲ...! ಸೀತಾಬಾಯಿಯನ್ನು ನೋಡುತ ನೋಡುತ ಯಾಕೋ ವಿಚಿತ್ರ ಸಂಕಟದಲ್ಲಿ ಮನಸು ಒದ್ದಾಡುತ್ತಿತ್ತು. ಸಭೆಯಲ್ಲಿರುವ ಬಹುತೇಕ ಎಲ್ಲಾ ಹೆಂಗಸರ ಮುಖದ ಮೇಲೆ ಉಲ್ಲಾಸವೇ ಇರಲಿಲ್ಲ. ಯಾರ ಯಾರದೋ ಮನೆಗೆ ಹೊಳಪು ತಂದವರ ಬದುಕೆಲ್ಲ ಯಾತನೆಯೇ ಆಗಿತ್ತು. ಅಸಂಖ್ಯ ನೋವುಗಳು... ಹಾಡೊಂದು ತೇಲಿ ಬರುತ್ತಿತ್ತು...

.. ಕಲ್ಲು ಕಟೆದು ಇಟ್ಟಿಗೆ ಮಾಡಿ
ಮನೆಯ ಕಟ್ಟಿ ಕೊಟ್ಟಾಗ
ನಸುಕಲೆದ್ದು ಬೀದಿಗುಡಿಸಿ ಚೆಂದ ಮಾಡಿ ಇಟ್ಟಾಗ
ಯಾ ಕುಲವಯ್ಯ ನಮದ್ಯಾವ ಮತವಯ್ಯಾ....

ಬಿಪಿಎಲ್ ಕಾರ್ಮಿಕ ಸಂಘದ ಮುಖಂಡರ ವಿರುದ್ಧ ಹೈಕೋರ್ಟ್ ತೀರ್ಪು

ಬಿಪಿಎಲ್ ಕಾರ್ಮಿಕ ಸಂಘದ ಅಧ್ಯಕ್ಷ ಹಾಗೂ ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಆರ್.ಶ್ರೀನಿವಾಸ್, ಸಂಘದ ಕಾರ್ಯದರ್ಶಿ ಟಿ.ಕೆ.ಎಸ್.ಕುಟ್ಟಿ ಮತ್ತಿತರ ಪದಾಧಿಕಾರಿಗಳ ಮೇಲೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಹೈಕೋರ್ಟಿನ ವಿಭಾಗೀಯ ಪೀಠ ಖಾಯಂಗೊಳಿಸಿದೆ. ಮಾತ್ರವಲ್ಲದೆ ಕೆಳ ಕೋರ್ಟಿನಲ್ಲಿ ಖುಲಾಸೆಗೊಂಡಿದ್ದ 5 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಜಸ್ಟೀಸ್ ಕೆ.ಶ್ರೀಧರ್‌ರಾವ್ ಮತ್ತು ಜಸ್ಟೀಸ್ ರವಿ ಬಿ.ನಾಯ್ಕ ಈ ತೀರ್ಪನ್ನು ನೀಡಿರುತ್ತಾರೆ.

1998ರಲ್ಲಿ ಕಂಪನಿಗೆ ಸೇರಿದ ಬಸ್ಸಿಗೆ ಬೆಂಕಿ ಹಾಕಿ ಇಬ್ಬರ ಸಾವಿಗೆ ಕಾರಣರಾಗಿದ್ದರು ಎಂಬ ಆರೋಪದ ಮೇಲೆ 49 ಜನರ ಮೇಲೆ ಮೊಕದ್ದಮೆ ಹೂಡಲಾಗಿತ್ತು.

ಆರ್.ಶ್ರೀನಿವಾಸ್, ಟಿ.ಕೆ.ಎಸ್.ಕುಟ್ಟಿ, ಎನ್.ವಿ.ರವಿ, ಆರ್.ರಮೇಶ್, ಧರಣೇಶ್ ಕುಮಾರ್, ಎಸ್.ಜಗದೀಶ್ ಮತ್ತು ಶರತ್ ಕುಮಾರ್ ಈಗಾಗಲೇ ಜೈಲು ಶಿಕ್ಷೆ ಅನುಭವಿಸುತ್ತಿದ್ದು ಸಿ.ಮಾದೇಶ್, ಪಿ.ಎ.ಭರತ್ ಕುಮಾರ್, ಎಡ್ವಿನ್‌ನೋಯಲ್, ಎಸ್.ಬಾಬು, ನಾಗರಾಜ್‌ರವರಿಗೆ ಹೊಸತಾಗಿ ಜೀವಾವಧಿ ಶಿಕ್ಷೆ ವಿಧಿಸಿದಂತಾಗಿದೆ.

ಸೆಷನ್ಸ್ ಕೋರ್ಟ್‌ನಲ್ಲಿ ಖುಲಾಸೆಗೊಂಡಿದ್ದ ಆದೇಶದ ವಿರುದ್ಧ ಹಾಗೂ ಜೀವಾವಧಿ ಶಿಕ್ಷೆಯನ್ನು ಗಲ್ಲುಶಿಕ್ಷೆಯಾಗಿ ಪರಿವರ್ತಿಸಬೇಕೆಂದು ರಾಜ್ಯ ಸರ್ಕಾರವು ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದನ್ನು ನೆನಪಿಸಿಕೊಳ್ಳಬಹುದು. ಕಾರ್ಮಿಕ ಸಂಘದ ಮುಖಂಡರ ಪರವಾಗಿ ಆಧಾರರಹಿತ ಆರೋಪದಿಂದ ಎಲ್ಲರನ್ನೂ ಮುಕ್ತ ಗೊಳಿಸಬೇಕೆಂದು ಮನವಿ ಮಾಡಲಾಗಿತ್ತು. ಎರಡೂ ಮನವಿಗಳನ್ನು ಒಟ್ಟಿಗೆ ವಿಚಾರಣೆ ನಡೆಸಿದ ನ್ಯಾಯಪೀಠವು ಮೇಲಿನಂತೆ ತೀರ್ಪು ನೀಡಿದೆ.

ವಂಚಿಸುವ ತಂತ್ರ

ನಾಜಿಗಳ ತತ್ವವನು ನೆಚ್ಚಿದವರಿಂದು
ನೆತ್ತರನು ಹರಿಸುತ್ತ ಬರುತಿಹರು ಮುಂದು
ಇಂದವರು ಬಸವಣ್ಣ ಗಾಂಧೀಜಿ ಚಿತ್ರ
ಬಳಸುವುದ ಕಂಡಿರಾ ಎಂಥ ವಿಚಿತ್ರ!

★

ಎಲ್ಲ ಬಿಟ್ಟವರು

ಎಲ್ಲ ಬಿಟ್ಟವರು ತಾವು ಎಂಬುವರು ಇಂದೆ
ಒಂದು ಪಕ್ಷದ ಬಾಲ ಆದುದನು ಕಂಡೆ
ಎಚ್ಚರಿಕೆ ಅಮಾನುಷ ಆ ಚಾತುರ್ವರ್ಣ
ಮತ್ತೊಮ್ಮೆ ತರುವುದೇ ಈ ಇದರ ಹೂರ್ಣ

★

ಗೂಳಪ್ಪಗಳು

ಆಳುತಿಹ ದೊರೆ ಜನರು ಗೂಳಪ್ಪರನ್ನು
ಸಾಕಿಟ್ಟು ಸಜ್ಜನಕೆ ತಿನಿಸುವರು ಮಣ್ಣು
ಗೂಳಪ್ಪಗಳ ಕೈಲಿ ಕೊಟ್ಟಿಟ್ಟುಗನ್ನು
ಮುರಿಯುವರು ನಿಜ ನುಡಿವ ಮಂದಿಗಳ ಬೆನ್ನು

- ವಿಡಂಬಾರಿ

ಕೆಂಪು ಬೀದಿಯ ಕೊಲ್ಕತ್ತಾದಲ್ಲಿ ಕಂಪು ಬೀರುವ ಜನವಾದಿಯ ಈ ಸಮ್ಮೇಳನ ಜಾಗತೀಕರಣಕ್ಕೆ ಸವಾಲೊಡ್ಡುತ್ತಾ, ಕೋಮು ಸಾಮರಸ್ಯವನ್ನು ರಕ್ಷಿಸುತ್ತಾ, ಸಮಾನತೆಯನ್ನು ಸಾಧಿಸುವ ಘೋಷಣೆಯೊಂದಿಗೆ ನಡೆಯಿತು. ಪ್ರತಿನಿಧಿಯಾಗಿದ್ದ ಕೆ.ಎಸ್.ವಿಮಲಾರವರಿಂದ ವರದಿ



ಜಾಗತೀಕರಣಕ್ಕೆ ಸವಾಲೆಸೆದು ಸೌಹಾರ್ದತೆಯ ರಕ್ಷಣೆಗೆ ನಿಂತ

ಜನವಾದಿಯ ಸಮ್ಮೇಳನ

ಕೇವಲ ರಾಷ್ಟ್ರದ ಮಹಿಳಾ ಚಳುವಳಿಗೆ ಮಾತ್ರವಲ್ಲದೇ ಇತರ ಪ್ರಜಾಪ್ರಭುತ್ವ ಚಳುವಳಿಗೂ ಮಾದರಿಯಾಗುವ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಜನವಾದಿಯ ಪ್ರತಿ ಸಮ್ಮೇಳನವೂ ವಿಶಿಷ್ಟವಾಗಿಯೇ ನಡೆಯುತ್ತದೆ. ಅಂತೆಯೇ 8ನೇ ರಾಷ್ಟ್ರೀಯ ಸಮ್ಮೇಳನ ಕೂಡ ಅದರಲ್ಲೂ 25 ವರ್ಷಗಳ ಸಾಧನೆಯನ್ನು ದಾಖಲಿಸುವ ಹೆಮ್ಮೆಯ ಸಂದರ್ಭ ಕೂಡ ಇದು. ಕೆಂಪು ಬೀದಿಯ ಕೊಲ್ಕತ್ತಾದಲ್ಲಿ ಕಂಪು ಬೀರುವ ಜನವಾದಿಯ ಈ ಸಮ್ಮೇಳನ ಜಾಗತೀಕರಣಕ್ಕೆ ಸವಾಲೊಡ್ಡುತ್ತಾ, ಕೋಮು ಸಾಮರಸ್ಯವನ್ನು ರಕ್ಷಿಸುತ್ತಾ, ಸಮಾನತೆಯನ್ನು ಸಾಧಿಸುವ ಘೋಷಣೆಯೊಂದಿಗೆ ನಡೆಯಿತು.

ಹಿಂದಿನ ಸಮ್ಮೇಳನ ನಿಗದಿಸಿದ ಗುರಿಯಾದ 1 ಕೋಟಿ ಸದಸ್ಯತ್ವದ ಗಡಿದಾಟಿ 1,00,85,539 ಸದಸ್ಯತ್ವ ನೊಂದಾಯಿಸಿದ ಈ ಅವಧಿಯಲ್ಲಿ ಮಹಿಳೆಯರಿಗೆ ಸಂಬಂಧಿಸಿದ ಪ್ರತಿ ವಿಷಯದಲ್ಲೂ ನಿರ್ದಿಷ್ಟ ಮಧ್ಯ ಪ್ರವೇಶ ಮಾಡಿದ, ನಿರ್ದಿಷ್ಟ ನಿಲುವುಗಳನ್ನು ಸ್ಪಷ್ಟಪಡಿಸಿದ ಸಾರ್ಥಕ ಅವಧಿ ಎಂದರೆ ಜನವಾದಿಯ ಆಶಯ ಬೇರು ಮಟ್ಟಕ್ಕೆ ಇಳಿಯುತ್ತಲೇ ಹೆಮ್ಮರವಾಗಿ ಹರಡಿ ನಿಂತ ಘಳಿಗೆ ಇದು.

ಅನನ್ಯ ಅನುಭವ

ಜನವಾದಿ ಕೈಗೆತ್ತಿಕೊಂಡಿರುವ ಸಾಮಾಜಿಕ, ರಾಜಕೀಯ ಬದ್ಧತೆಗಳು ಕೇವಲ ಮೇಲ್ ಹಂತದ ಚರ್ಚೆ, ಭಾಷಣಗಳಿಗೆ ಸೀಮಿತವಾಗಿರದೇ ನಿಜವಾದ ಅರ್ಥದಲ್ಲಿ ಕೆಳಕ್ಕಿಳಿಯುತ್ತಿರುವ ಅನನ್ಯ ಅನುಭವ ಪ್ರತಿನಿಧಿಗಳ ಚರ್ಚೆಯಲ್ಲಿ ಸಿಗುತ್ತಿತ್ತು.

ಅಂತರರಾಷ್ಟ್ರೀಯ ಮಟ್ಟದಲ್ಲಿನ ಬೆಳವಣಿಗೆಗಳು, ನೀತಿ, ನಿರೂಪಕ ಅಂಶಗಳು ಒಟ್ಟು ಮಹಿಳಾ ಚಳುವಳಿಯ ಮೇಲೆ ಮತ್ತು ಜನಸಾಮಾನ್ಯರ ಅದರಲ್ಲೂ ಮಹಿಳೆಯರ ಮೇಲೆ ಬೀರುವ ಪರಿಣಾಮಗಳ ಹಿನ್ನೆಲೆಯಲ್ಲಿಯೇ ವಿಸ್ತಾರ ವಿವರ ನೀಡುವ ರಾಷ್ಟ್ರೀಯ ಅಂಶಗಳನ್ನೊಳಗೊಂಡ ವರದಿಯ ಮೇಲಿನ ಚರ್ಚೆ ಅದನ್ನು ಇನ್ನಷ್ಟು ಶ್ರೀಮಂತಗೊಳಿಸುವಂತಿತ್ತು.

ಕಳೆದ 4 ಸಮ್ಮೇಳನಗಳಿಂದ ಜನವಾದಿ ನಿರ್ದಿಷ್ಟ ಅಂಶಗಳಿಗೆ ಒತ್ತುಕೊಟ್ಟು ಸಮ್ಮೇಳನದ ಉದ್ಘಾಟನಾ ರೂಪದಲ್ಲಿಯೇ ಅದನ್ನು ಸಾಕ್ಷೀಕರಿಸುವಂತೆ ಕಾರ್ಯಕ್ರಮ ರೂಪಿಸುತ್ತಿದೆ. ಈ ಸಮಾಜ ಮಹಿಳೆಯನ್ನು ಶೋಷಿಸುವ ಮೌಲ್ಯಗಳನ್ನು ಬಿತ್ತಿ ಬೆಳೆಸುತ್ತದೆ ಮತ್ತು ಅವಳನ್ನು 'ಬಲಿ ಪಶು' ಎಂದು ಚಿತ್ರಿಸುತ್ತದೆ. ಆದರೆ ಜನವಾದಿ ಈ ಶೋಷಣೆಯ ವಿರುದ್ಧ ಸರಿಯುತ್ತಲೇ ಮಹಿಳೆಯನ್ನು ಬಲಿಪಶುವಾಗಿ ಚಿತ್ರಿಸುವುದನ್ನೂ, ವಿರೋಧಿಸುತ್ತದೆ. ಹಾಗೆಂದೇ ಈ ಸಮಾಜದಲ್ಲಿನ ವಿವಿಧ ನೆಲೆಯ ಕ್ರೌರ್ಯಗಳಿಗೆ ತುತ್ತಾಗಿ, ಅದನ್ನು ಮೆಟ್ಟಿ ನಿಂತ ಮಹಿಳೆಯರನ್ನು ಮಾದರಿಗಳಾಗಿ ಸಮ್ಮೇಳನದ ಮುಂದೆ ನಿಲ್ಲಿಸಿ ಅವರ ಅನುಭವಗಳನ್ನು ಹಂಚಿಕೊಳ್ಳುವಂತೆ ಇಡೀ ಸಮ್ಮೇಳನಕ್ಕೆ ಸ್ಫೂರ್ತಿ ನೀಡುವಂತೆ ಮಾಡಲಾಗುತ್ತದೆ. ಹಾಗೆ ಈ ಬಾರಿಯ ಸ್ಫೂರ್ತಿಯ ದೀಪಗಳು ಆಂಧ್ರದಿಂದ ಬಂದ ಆಶಾ. ಭೂಮಿಯ ಹೋರಾಟದಲ್ಲಿ ಕಮ್ಮಂ ಪೋಲಿಸ್ ಗೋಲಿಬಾರಿನಲ್ಲಿ ಪ್ರಾಣ ತೆತ್ತ ವೀರನ ಹೆಂಡತಿ. ಸರ್ಕಾರಿ ದೌರ್ಜನ್ಯದಲ್ಲಿ ಗಂಡ ಬಲಿಯಾದನೆಂದು ಹೆದರದೇ ಚಳುವಳಿಗೆ ಧುಮುಕಿದ ಆಶಾಳ ಮಾತುಗಳಿಗೆ ಕಣ್ಣಾಲಿಗಳು ತುಂಬಿದವಾದರೂ ಸಭಾಂಗಣದಲ್ಲಿದ್ದವರು ರೋಮಾಂಚನ ಗೊಳ್ಳುತ್ತಿದ್ದುದು. ಸಂಘಟನಾತ್ಮಕವಾಗಿ ಇನ್ನಷ್ಟು ಗಟ್ಟಿಗೊಳ್ಳುತ್ತಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ಇದೇ ಎಳೆ ಇಡೀ ಸಮ್ಮೇಳನದುದ್ದಕ್ಕೂ ಬೆಳೆಯುತ್ತ ಬೆಳೆಯುತ್ತ ಹೋಯಿತೆಂದರೆ ಅತಿಶಯೋಕ್ತಿಯಲ್ಲ.

ಅಮೇರಿಕಾದ ಸಾಮ್ರಾಜ್ಯ ಶಾಹಿ ಇಡೀ ವಿಶ್ವಕ್ಕೆ ತಂದಿತ್ತ ಅಪಾಯವನ್ನು ವಿವಿಧ ನೆಲೆಗಳಲ್ಲಿ ವಿಶ್ಲೇಷಿಸಿದ ಸಮ್ಮೇಳನ ನಮ್ಮ ಮುಂದಿನ ದಿನಗಳ ಹೋರಾಟಗಳಿಗೆ ಸ್ಪಷ್ಟ ದಿಕ್ಕನ್ನು ಗುರುತಿಸಿಕೊಂಡಿತು. ಒಂದೆಡೆ ಸಾಮ್ರಾಜ್ಯಶಾಹಿಯ ಅಟ್ಟಹಾಸ ಮೆರೆಯುತ್ತಿದ್ದರೆ ಇನ್ನೊಂದೆಡೆ ವೆನಿಜುವೆಲಾದಂತಹ ರಾಷ್ಟ್ರಗಳು ಅಮೇರಿಕಾಕ್ಕೆ ಸವಾಲೆಸೆಯುತ್ತಲೇ ತಮ್ಮ ದೇಶಗಳಲ್ಲಿ ಗೃಹಿಣಿಯರಿಗೆ ಸಾಮಾಜಿಕ ಸುರಕ್ಷೆ, ಆರೋಗ್ಯ ಸುರಕ್ಷೆಯಂತಹ ಮಹಿಳಾ ಪರ ನೀತಿಗಳೊಂದಿಗೆ ತೀವ್ರ ಪ್ರಯತ್ನ ನಡೆಸುತ್ತಿರುವುದನ್ನು ಪ್ರಸ್ತಾಪಿಸಿದ ಪ್ರತಿನಿಧಿಗಳು. ಚೈನಾದಲ್ಲಿ ಪ್ರಾರಂಭವಾದ ಉದಾರೀಕರಣ ಶಕೆ ಮಹಿಳೆಯರ ಮೇಲೆ ಬೀರುತ್ತಿರುವ ದುಷ್ಪರಿಣಾಮಗಳ ಕುರಿತು ಗಂಭೀರವಾದ ಆತಂಕಗಳನ್ನು ವ್ಯಕ್ತಪಡಿಸಿತು. ಸಮಾಜವಾದಿ ವ್ಯವಸ್ಥೆಯ ಉತ್ತಮ ಮಾದರಿಯಾಗಿ ಚೈನಾದಲ್ಲಿ ಶಾಲೆಗೆ ಹೋಗಬೇಕಾದ ವಯಸ್ಸಿನ ಹೆಣ್ಣು ಮಕ್ಕಳಲ್ಲಿ ಶೇ.99.07 ರಷ್ಟು ಹುಡುಗಿಯರು ಶಾಲೆಗೆ ಹೋಗುತ್ತಾರೆ. ಅದೇ ಸಂದರ್ಭದಲ್ಲಿ ಇಂದಿಗೂ ಪುರುಷ ಸಂತಾನದ ಅಪೇಕ್ಷೆಯಿಂದ ತಮ್ಮ ಹೆಣ್ಣು ಮಗುವಿಗೆ 'ಲಾಯ್ಡೀ' (ಮುಂದೆ ಗಂಡು ಮಗು ಹುಟ್ಟುತ್ತದೆ ಎಂದರ್ಥ) 'ಪಾಂಡಿ' (ಗಂಡು ಮಗುವಿಗಾಗಿ ಆಶಿಸುತ್ತೇನೆ) ಝೂಡಿ(ನಮಗೊಂದು ಗಂಡು ಮಗು ಬೇಕು) ಎಂಬ ಹೆಸರುಗಳನ್ನಿಡುತ್ತಾರೆಂಬುದೂ ಚರ್ಚೆಗೆ ಬಂತು.



ಕಲಾಪದಲ್ಲಿ ಪ್ರತಿನಿಧಿಗಳು

ಲ್ಯಾಟಿನ್ ಅಮೇರಿಕಾದ ಬೆಳವಣಿಗೆಗಳನ್ನು ಸ್ವೀಕರಿಸುತ್ತಲೇ ಪ್ಯಾಲೆಸ್ತೈನ್, ಇರಾಕ್ ದೇಶಗಳ ಮಹಿಳೆಯರ ಪರಿಸ್ಥಿತಿಗಳು ಮತ್ತು ಒಟ್ಟು ಅಂತರರಾಷ್ಟ್ರೀಯ ನೆಲೆಯಲ್ಲಿ ಒಂದು ಮಹಿಳಾ ವೇದಿಕೆಯ ಸಾಧ್ಯತೆಗಳನ್ನು ಪ್ರಸ್ತಾಪಿಸಲಾಯಿತು.

ಪ್ಯಾಲೆಸ್ತೈನ್ ಪೀಪಲ್ಸ್ ಪಾರ್ಟಿಯ ಕೇಂದ್ರ ಸಮಿತಿ ಸದಸ್ಯೆ ಮಹಿಳಾ ಹೋರಾಟಗಾರ್ತಿ ಗಾದಾ ಜುರ್ರೈಯಾ ಸಮ್ಮೇಳದಲ್ಲಿ ಪಾಲ್ಗೊಂಡು, ಅಲ್ಲಿನ ಜನ ಅಮೇರಿಕಾ ಸಾಮ್ರಾಜ್ಯಶಾಹಿ ಮತ್ತದರ ಬಾಲಂಗೋಚಿ ಇಸ್ರೇಲ್ ಆಡಳಿತದ ವಿರುದ್ಧ ನಡೆಸುತ್ತಿರುವ ಹೋರಾಟದ ವಿವರ ನೀಡಿದರು. ಅವರ ದೀರ್ಘಕಾಲದ ಹೋರಾಟ, ಜೈಲುವಾಸ, ಭೂಗತ ಜೀವನದ ಅನುಭವಗಳನ್ನು ಹೀರಿಕೊಂಡ ಸಮ್ಮೇಳನ ಸಾಮ್ರಾಜ್ಯಶಾಹಿ ವಿರುದ್ಧ ನಡೆಸಬೇಕಾದ ಐಕ್ಯ ಹೋರಾಟಕ್ಕೆ ಮುನ್ನಡೆಯುವ ಪಣತೊಟ್ಟಿತು.

ಮಹಿಳೆಯರ ಹಕ್ಕುಗಳಿಗಾಗಿ ಹೋರಾಟ ನಡೆಸಿ, ಅದನ್ನು ಸಾಧಿಸದೇ ನಮ್ಮ ಶತ್ರುಗಳ ವಿರುದ್ಧದ ಹೋರಾಟ ಯಶಸ್ವಿಯಾಗದೆಂಬ ಮಾತನ್ನಾಡಿದ ಜುರ್ರೈಯ್ಯಾ ಚಾರ್ಲ್ಸ್ ಡಿಕನ್ಸ್ ರವರ

ಇದು ಉತ್ತಮ ಸಮಯ,
ಇದು ಕೆಟ್ಟ ಸಮಯ,
ಇದು ವಸಂತ,
ಇದು ಗ್ರೀಷ್ಮ, ವಸಂತವನ್ನು ಸದಾ ಉಳಿಸಲು ಸಮಾಜವಾದಿ ವ್ಯವಸ್ಥೆಯನ್ನು ತರೋಣವೆಂಬ ಸಂದೇಶ ನೀಡಿದರು.

ಇಸ್ರೇಲ್‌ನ ದುರಹಂಕಾರ ಮತ್ತು ದುರಾಡಳಿತದ ಫಲವಾಗಿ ಪ್ಯಾಲೆಸ್ತೈನ್ ಜನಸಾಮಾನ್ಯರು ಎದುರಿಸುತ್ತಿರುವ ದಿನ ನಿತ್ಯದ ಬವಣೆಗಳನ್ನು ಅಂಕಿ ಸಂಖ್ಯೆಗಳ ಸಹಿತ ವಿವರಿಸಿದರು. ಅಂತೆಯೇ ಬಾಂಗ್ಲಾದೇಶದ ಸಾಲಿಯಾ ಸುಲ್ತಾನಾ ನಾರೀ ಮುಕ್ತಿ ಮೋರ್ಚಾದ ಉಪಾಧ್ಯಕ್ಷೆ ಸಮ್ಮೇಳನದಲ್ಲಿ ಪಾಲ್ಗೊಂಡು ಮೂಲಭೂತವಾದದ ಹಿಡಿತ, ಕೂಲಿಯ ಸಂದರ್ಭದಲ್ಲಿನ ಸಮಸ್ಯೆಗಳು, ಪಾಳೆಯಗಾರೀ ಮೌಲ್ಯಗಳ ಅಟ್ಟಹಾಸ ಇವೆಲ್ಲದರ ವಿರುದ್ಧ ಅಲ್ಲಿನ ಜನರ ಹೋರಾಟಗಳನ್ನು ವಿವರಿಸಿದರು. ರಾಜಕೀಯದಲ್ಲಿ ಶೇ.33 ಮೀಸಲಾತಿ ಘೋಷಣೆಯಾಗಿದ್ದರೂ ಮೂಲಭೂತವಾದಿ ಶಕ್ತಿಗಳ ಬಲವಾದ ವಿರೋಧವಿದೆ ಎಂಬುದನ್ನು ಹೇಳಿದರು. ಜಾಗತೀಕರಣದ ಹಿಡಿತ ಯವುದೇ ಪ್ರಜಾಸತ್ತಾತ್ಮಕ ಚಳುವಳಿಗೆ ತೀವ್ರ ಪೆಟ್ಟು ನೀಡುತ್ತಿರುವುದನ್ನು ಹೇಳುತ್ತಾ ಅದರ ವಿರುದ್ಧ ಜಾಗತಿಕ ಪ್ರತಿರೋಧ ಹೆಚ್ಚಬೇಕೆಂದು ಮನವಿ ಮಾಡಿದರು.


ದಾಖಲಾರ್ಹ ಹೋರಾಟಗಳು

ದೇಶದ ವಿವಿಧ ರಾಜ್ಯಗಳಿಂದ ಪಾಲ್ಗೊಂಡ 951 ಪ್ರತಿನಿಧಿಗಳ ಪರವಾಗಿ ಆಯಾಯ ರಾಜ್ಯಗಳ ಪ್ರತಿನಿಧಿಗಳು ಮಾತನಾಡು ವಾಗ, ಕಳೆದ ದಶಕದಿಂದು ನಡೆಸಲಾದ ವಿವಿಧ ಹೋರಾಟಗಳ ಚಿತ್ರಣ ಕಣ್ಣಿಗೆ ಕಟ್ಟುತ್ತಿತ್ತು. ಆಂಧ್ರದ ಭೂಮಿ ಹೋರಾಟ, ಬಂಗಾಲದಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ, ನಾವು ನಡೆಸಬೇಕಾಗಿ ಬಂದಿರುವ ಹೋರಾಟಗಳು, ತಮಿಳುನಾಡು, ಕೇರಳ, ಬಿಹಾರ ಹೀಗೆ ಪ್ರತಿ ರಾಜ್ಯಗಳಲ್ಲಿ ವಿವಿಧ ಸಮಸ್ಯೆಗಳನ್ನು ಕುರಿತು ನಾವು ನಡೆಸುತ್ತಿರುವ ಹೋರಾಟಗಳು ಒಂದೆಡೆ ಪಟ್ಟಿಯಾದರೆ ಇನ್ನೊಂದೆಡೆ ಎಡರಂಗ ಸರ್ಕಾರಗಳು ತಮ್ಮ ಇತಿಮಿತಿಯಲ್ಲಿ ಮಹಿಳಾ ಪರವಾದ ಯೋಜನೆಗಳನ್ನು ಜಾರಿಗೆ ತರುತ್ತಿರುವುದು ವರದಿಯಾಯಿತು. ಉದಾ: ಕರ್ನಾಟಕದಲ್ಲಿ ಸ್ವ ಸಹಾಯ ಸಂಘಗಳ ಮಹಿಳೆಯರು ವಿವಿಧ ರಾಜಕೀಯ ಪಕ್ಷಗಳ ಬಲಪ್ರದರ್ಶನಕ್ಕೆ ಬಳಸಲ್ಪಡುತ್ತಿದ್ದರೆ, ಕೇರಳದಲ್ಲಿ ಕುಟುಂಬ ಶ್ರೀಯಂತಹ ಯೋಜನೆಗಳ ಮೂಲಕ, ಸಬಲೀಕೃತ ಮಹಿಳೆಯರಾಗಿ ಮಾರ್ಪಡುತ್ತಿರುವುದು ದಾಖಲೆಯಾಯಿತು. ಪಶ್ಚಿಮ ಬಂಗಾಲದಲ್ಲಿ ಈ ಸಮೂಹದ ಕುರಿತೇ ಒಬ್ಬ ಸಚಿವರೇ ಇರುವ ಹೆಗ್ಗಳಿಕೆ ಕೂಡ ದಾಖಲಾಯಿತು.

ಒಟ್ಟಾರೆಯಾಗಿ ಸಮ್ಮೇಳನ ಜಾಗತೀಕರಣದ ಅಪಾಯಕಾರೀ ಅಂಶಗಳನ್ನು ಗುರುತಿಸಿತು. ಅದೇ ಸಂದರ್ಭದಲ್ಲಿ ಹೆಚ್ಚುತ್ತಿರುವ ಮೂಲಭೂತವಾದೀ ಶಕ್ತಿಗಳ ಕುರಿತು ತೀವ್ರ ಚರ್ಚೆ ನಡೆಸಲಾಯಿತು. ಗುಜರಾಜ್, ಮಧ್ಯ ಪ್ರದೇಶಗಳ ಅನುಭವಗಳನ್ನು ಹಂಚಿಕೊಳ್ಳುವಾಗ ನಾಳಿನ ಕರ್ನಾಟಕದ ಚಿತ್ರಣ ಕಣ್ಣ ಮುಂದೆ ಬರುತ್ತಿತ್ತು. ಕೋಮುವಾದಿಗಳ ಅಟ್ಟಹಾಸಕ್ಕೆ ಬಲಿಯಾದ ಜನಸಾಮಾನ್ಯರ ಬದುಕು, ಇಂದಿಗೂ ನಿರಾಶ್ರಿತರಾಗಿಯೇ ಉಳಿಯಬೇಕಾಗಿ ಬಂದ ಗುಜರಾತ್ ಗಲಭೆ ಸಂತ್ರಸ್ತರು ಇವು ನಮ್ಮ ಮುಂದಿರುವ ಸವಾಲುಗಳನ್ನು ನೆನಪಿಸುತ್ತಿತ್ತು.

ಜಾಗತೀಕರಣದ ಅಪಾಯುಗಳನ್ನು

ಪುಟ 14ಕ್ಕೆ



ಆಂಧ್ರದ ಹೋರಾಟದ ಕಣದಿಂದ ಆಶಾ ಮತ್ತು ಮಗು

ಸಾವಿಲ್ಲದ ಸಂಗಾತಿ...

ಸಮ್ಮೇಳನದ ಬಹಿರಂಗ ಸಭೆ ಇತ್ಯಾದಿಗಳ ವರದಿ ಅಲ್ಲಿ ಭಾಗವಹಿಸಿದ್ದ ಕೆ.ನೀಲಾರವರಿಂದ

> 'ಮಹಿಳೆಯರೆಂಬ ಕಾರಣಕ್ಕೆ ಅನುಭವಿಸುವ ನೋವಿಗೆ ತೆರೆ ಬೀಳಲೇಬೇಕು. ಪಾಳೇಗಾರಿ ಯಜಮಾನಿಕೆ ಅಳಿಯದ ಹೊರತು ಮಹಿಳೆ ವಿಮೋಚನೆ ಸಾಧ್ಯವಿಲ್ಲ. ಹೋರಾಟದ ಬಾವುಟವೆತ್ತಿ...?'
>
> **- ಜ್ಯೋತಿಬಸು**

ಈ ಬಾರಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ 8ನೇ ರಾಷ್ಟ್ರೀಯ ಸಮ್ಮೇಳನವು ಹೋರಾಟಗಳ ನೆಲವೀಡಾದ ಕೊಲ್ಕತ್ತಾದಲ್ಲಿ ನಡೆದು ಮಹಿಳಾ ಚಳುವಳಿಗೆ ಸ್ಪಷ್ಟ ಕಣ್ಣೋಟದ ಹೋರಾಟದ ದಿಕ್ಕು-ದೆಸೆ ಕಲ್ಪಿಸಿತು. ಮುಂದಿನ ಮೂರು ವರ್ಷಗಳಲ್ಲಿ ನಿಭಾಯಿಸಬೇಕಾದ ಜವಾಬ್ದಾರಿಗಳನ್ನು ದೃಢೀಕರಿಸಿತು. ದೇಶದ ಮೂಲೆ-ಮೂಲೆಯಿಂದ ಬಂದ 968 ಮಹಿಳಾ ಪ್ರತಿನಿಧಿಗಳು ಒಂದು ಕೋಟಿ ಅರವತ್ತೈದು ಸಾವಿರಕ್ಕೂ ಹೆಚ್ಚು ಮಹಿಳೆಯರ ದುಃಖ ದುಮ್ಮಾನಗಳನ್ನು, ನೋವು-ನಲಿವುಗಳನ್ನು ಹೊತ್ತು ತಂದಿದ್ದರು. ಕೇವಲ 25 ವರ್ಷಗಳಲ್ಲಿ ದೇಶಾದ್ಯಂತ ಜನವಾದಿ (ಎಐಡಿಡಬ್ಲ್ಯೂಎ) ಬೆರಗು ಮತ್ತು ಹೆಮ್ಮೆ ಹುಟ್ಟಿಸುವಷ್ಟು ತೀವ್ರಗತಿಯಲ್ಲಿ ಬೆಳೆದ ನಿಂತಿದೆ. ಜನವಾದಿ ನಡೆದು ಬಂದ ದಾರಿಯುದ್ದಕ್ಕೂ ಸಂಘರ್ಷದ ಹೆಜ್ಜೆಗಳಿವೆ. ನೊಂದ ಮಹಿಳೆಯರ ಸಾಹಸಗಾಥೆಗಳಿವೆ. ಎಲ್ಲ ವರ್ಗ, ಜಾತಿಯ ಮಹಿಳೆಯರ ಪರಿಶ್ರಮದ ಫಲಕುಗಳಿವೆ. ಇಲ್ಲದಿದ್ದರೆ ಜನವಾದಿ ಈ ಪರಿಯಲ್ಲಿ ಬೆಳೆಯಲು ಹೇಗೆ ಸಾಧ್ಯವಿತ್ತು? ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಿಗೂ ಪ್ರವೇಶ ಪಡೆದ ಜನವಾದಿ, ಬೆಳ್ಳಿಹಬ್ಬದ ಸಂದರ್ಭದಲ್ಲಿ ದಾಖಲೆ ರೂಪದ ಅದ್ಭುತ ಜಾಥಾಗಳನ್ನು ಸಂಘಟಿಸಿದೆ. 'ಚಿಂತನೆ ಮತ್ತು ಚಳುವಳಿ'ಯನ್ನು ಏಕಕಾಲಕ್ಕೆ ಮುನ್ನಡೆಸಲು ಬೇಕಾದ ತಾಖತ್ತು ಖಂಡಿತ ಜನವಾದಿ ಪಡೆದಿದೆ. ಆದ್ದರಿಂದಲೇ ಆಹಾರ, ಉದ್ಯೋಗ, ಭೂಮಿ, ಕೂಲಿಗಾಗಿ, ಒಂದೆಡೆ ಹೋರಾಟಗಳನ್ನು ನಡೆಸುತ್ತಲೇ ಮತ್ತೊಂದಡೆ ಮಾಧ್ಯಮ, ಕಾನೂನು, ಆರೋಗ್ಯ ಉಪ ಸಮಿತಿಗಳ ಮೂಲಕ ವಿವಿಧ ಕಾರ್ಯಕ್ರಮಗಳನ್ನು ಸಂಘಟಿಸುವ ಜನ ಮಾನಸವನ್ನು ಬಹುದೊಡ್ಡ ಸಂಖ್ಯೆಯಲ್ಲಿ ತನ್ನತ್ತ ಸೆಳೆದಿದೆ. ನಾಲ್ಕು ದಿನಗಳ ಕಾಲ ನಡೆದ ಸಮ್ಮೇಳನವು ಪ್ರತಿನಿಧಿಗಳ ಹೃದಯಕ್ಕೆ ಸ್ವಾಭಿಮಾನದ ಬೆಳಕು ಚೆಲ್ಲಿತು. 'ಬದುಕುವ ಹಕ್ಕಿಗಾಗಿ ಜಾಗತೀಕರಣಕ್ಕೆ ಸವಾಲು' ಹಾಕಿತು.

ನವೆಂಬರ್ ಒಂದನೇ ತಾರೀಖು, ಕೋಲ್ಕತ್ತಾದ ಈಸ್ಟರ್ನ್ ಝೋನಲ್ ಕಲ್ಚರಲ್ ಸೆಂಟರ್‌ನ ಬಯಲಿನಲ್ಲಿ ಬೆಳಗಿನ 9-30ಕ್ಕೆ ಜನವಾದಿಯ ಧ್ವಜಾರೋಹಣ ಮಾಡಿದ್ದು ರಾಷ್ಟ್ರೀಯ ಅಧ್ಯಕ್ಷರಾದ ಸುಭಾಷಿಣಿ ಅಲಿ. ಉದ್ಘಾಟನಾ ಕಾರ್ಯಕ್ರಮಕ್ಕೆ ಎಲ್ಲರೂ ಕಾತುರರಾಗಿದ್ದರು. ಬೇಗ



ಧ್ವಜಾರೋಹಣ ಸುಭಾಷಿಣಿಯವರಿಂದ

ಶುರುವಾಗಲೆಂದು ಬಯಸುತ್ತಿದ್ದರು. ಮೂರು ಮುಖ್ಯ ಕಾರಣಗಳು ಒಂದು ದುಡಿವ ಜನತೆಯ ನಾಯಕ ಜ್ಯೋತಿ ಬಸು. ಎರಡು: ಭೂಮಿ ಹೋರಾಟದಲ್ಲಿ ಗಂಡನನ್ನು ಕಳಕೊಂಡ ಉಷಾ, ಮೂರು: ಲಕ್ಷ್ಮಿ ಸೆಹೆಗಲ್ ಬದಲಿಗೆ ಉದ್ಘಾಟನಾ ಭಾಷಣ ಮಾಡುವ ಬೃಂದಾ. ಸಭಾಂಗಣ ತುಂಬಿ ಹೋಗಿತ್ತು. ಜಾಗತಿಕ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಮಹಿಳಾ ವಿಮೋಚನೆಗಾಗಿ ಮಹಿಳೆ ಸಂಘಟಿತಳಾಗಲೇಬೇಕಾದ ಹೋರಾಟಕ್ಕೆ ಸಜ್ಜಾಗಲೇಬೇಕಾದ ಜರೂರಿಯನ್ನು ಬೃಂದಾ ಮನಗಾಣಿಸುತ ತನ್ಮೂಲಕ ಎಲ್ಲರ ಎದೆಯಂಗಳಕೆ ಅರಿವು ಮತ್ತು ಛಲದ ಬಾವುಟ ಹಾರಾಡಿಸಿದರು.

ಮಹಿಳೆಯರ ಹಕ್ಕುಗಳ ರಕ್ಷಣೆಗಾಗಿ ತ್ರಿಪುರಾದಲ್ಲಿ ಬರುವ ಚುನಾವಣೆಗಳಲ್ಲಿ ಜನವಾದಿಯು ಎಡಶಕ್ತಿಯನ್ನು ಗೆಲ್ಲಿಸಲು ಕರೆ ಕೊಟ್ಟರು. ಪಶ್ಚಿಮ ಬಂಗಾಲದಲ್ಲಿ ಕೋಮುವಾದಿಗಳೂ, ನಕ್ಸಲರು, ತೃಣಮೂಲ ಕಾಂಗ್ರೆಸ್‌ಗಳೆಲ್ಲ ಒಟ್ಟಾಗಿ ಎಡಶಕ್ತಿಯನ್ನು ಹಿಮ್ಮೆಟ್ಟಿಸಲು ಕ್ರೂರ ಮತ್ತು ದಮನಕಾರಿ ಆಟ ಆಡುತ್ತಿದ್ದು, ನಂದಿಗ್ರಾಮವೊಂದು ಕೇಂದ್ರ ಮಾಡಿಕೊಂಡಿರುವರು. ಅಲ್ಲಿಯ ಮಹಿಳೆಯರ ಮಕ್ಕಳ ಬದುಕನ್ನು ಹೊಸಕಿ ಹಾಕುತ್ತಿರುವವರು ದುಷ್ಟ ರಾಜಕಾರಣದ ನೀಚತನಕ್ಕೆ ಇಳಿದಿದ್ದು ಜನವಾದಿಯು ಸವಾಲು ಸ್ವೀಕರಿಸಿ ಜನತೆಯೊಂದಿಗೆ ನಿಲ್ಲಬೇಕೆಂಬುದನ್ನು ಹೇಳಿದರು. 'ಜ್ಯೋತಿಬಾಬು ಬಂದರು...' ಸಭೆಯಲ್ಲಿ ಒಂದು ಸಂಚಲನಕ್ಕೆ ಇದ್ದಕ್ಕಿದ್ದಂತೆ ಹರಿಯಿತು. ಇಳಿವಯಸಿನ ಆದರೆ ಪರ್ವತದಂಥ ಅಚಲತೆಯ ಜ್ಯೋತಿದಾ ವೇದಿಕೆಯತ್ತ ನಡೆದು ಬರುತ್ತಿದ್ದರು. ಯಾರಿಗೆ ಎದೆ ತುಂಬಿ ಬರುವುದಿಲ್ಲ ಹೇಳಿ? ವರ್ಗ ವೈರಿಗಳೂ ಗೌರವಿಸುವಂಥ ವ್ಯಕ್ತಿತ್ವದ 'ಜ್ಯೋತಿ ದಾ' ಬುದ್ಧನಂಥ ಅರೆಬಿರಿದ ಕಂಗಳಿಂದ ಸಭೆಯನ್ನೆಲ್ಲ ಅವಲೋಕಿಸಿದರು.



ಉದ್ಘಾಟಿಸಿದ ಜ್ಯೋತಿಬಸು

ಮಾರ್ಕ್ಸ್‌ವಾದದ ಬೆಳಕು ಭಾರತದ ಮಣ್ಣಿಂದ ಮೇಲೆದ್ದು ಬಂದಂತೆ ಅವರ ನೋಟ ಎಲ್ಲೆಡೆ ಹರಿದಾಡಿ ಅತ್ಯಂತ ಸ್ಪಷ್ಟವಾಗಿ ಮಾತಾಡತೊಡಗಿದರು. 'ಮಹಿಳೆಯರೆಂಬ ಕಾರಣಕ್ಕೆ ಅನುಭವಿಸುವ ನೋವಿಗೆ ತೆರೆ ಬೀಳಲೇಬೇಕು. ಪಾಳೇಗಾರಿ ಯಜಮಾನಿಕೆ ಅಳಿಯದ ಹೊರತು ಮಹಿಳೆ ವಿಮೋಚನೆ ಸಾಧ್ಯವಿಲ್ಲ. ಹೋರಾಟದ ಬಾವುಟವೆತ್ತಿ...? ಎಂದು ಕರೆಕೊಡುವಾಗ ಜ್ಯೋತಿಬಾಬು ದನಿಯಲ್ಲಿ ವೀರ ಪರಂಪರೆಯ ದೃಢತೆ ಇತ್ತು. ಸಾಮ್ರಾಜ್ಯವಾದ, ಮೂಲಭೂತವಾದ ಕೋಮುವಾದದ ವಿರುದ್ಧ ರಾಜಿ ರಹಿತ ಹೋರಾಟದ ಅವಶ್ಯಕತೆ ವಿವರಿಸಿದರು.

ಉದ್ಘಾಟನಾ ಕಾರ್ಯಕ್ರಮವು ಎಂದಿನಂತೆ ಸಂಕಷ್ಟಗಳ ಎದುರಿಸುತ ಸೆಣಸುತ ಬಂದವರ ಗಾಥೆಯೊಂದಿಗೆ ಮುಂದುವರಿಯಿತು. ಮೈಕಿನ ಮುಂದೆ ಒಂದು ವರ್ಷದ ಹಸುಗೂಸನ್ನು ಕಂಕುಳಲೆತ್ತಿಕೊಂಡು ಉಷಾ ನಿಂತಿದ್ದಳು. ತೆಲುಗು ಭಾಷೆ, ಆದರೆ ಭಾವನೆಗಳು ವ್ಯಕ್ತಿಸುವುದಕ್ಕೆ ಭಾಷೆಯೇ ಬೇಕಿಲ್ಲಾ ಆಂಧ್ರಪ್ರದೇಶವು ವರ್ಗ ಸಂಘರ್ಷದ ಸಮರಕ್ಕೆ ಹೆಸರಾದ ಕ್ರಾಂತಿ ನೆಲ ತೆಲಂಗಾಣ ಚಳುವಳಿಯನ್ನೊಮ್ಮೆ ನೆನಪಿಸಿಕೊಳ್ಳಲೇಬೇಕು. ಈಗಲೂ ಅಲ್ಲಿ ಸಿ.ಪಿ.ಐ.(ಎಂ) ಪಕ್ಷದ ನೇತೃತ್ವದಲ್ಲಿ ಭೂಮಿ ಹೋರಾಟ ಮುಂದುವರೆದಿದೆ. ಕಾಂಗ್ರೆಸ್ ಸರ್ಕಾರ ದಮನದ ಛಡಿ ಹಿಡಿದು ಥಳಾಯಿಸುತ್ತಿದೆ. ಕ್ರೌರ್ಯದ ಅಟ್ಟಹಾಸಕ್ಕೆ ಜಮೀನ್ದಾರಿ ವ್ಯವಸ್ಥೆಯ ಬರ್ಬರತೆಗೆ ಭೂಹೀನರು ಬಲಿಯಾಗುತ್ತಿದ್ದಾರೆ. ಆದಾಗ್ಯೂ 'ದುಡಿವ ಜನ ವರ್ಗ ಸಮರ ಮುಂದುವರಿಸಿದ್ದಾರೆ. ಈವರೆಗೆ ಸಾವಿರಾರು ಮಹಿಳೆಯರ ಮೇಲೆ ಕೇಸುಗಳಾಗಿ ಜೇಲು ಕಂಡಿದ್ದಾರೆ. ಶೇಕಡ 80-90 ರಷ್ಟು ಅನೇಕ ಕಡೆ ಮಹಿಳೆಯರು ಧೀರತೆಯಿಂದ ಭಾಗವಹಿಸುತ್ತಿದ್ದಾರೆ.



ರ್‍ಯಾಲಿಯಲ್ಲಿ ನೆರೆದ ಸಹಸ್ರ ಸಹಸ್ರ ಜನ

ಅಂದು ಖಮ್ಮಂನಲ್ಲಿ ಸಾವಿರಾರು ಜನ ಭೂಮಿಗಾಗಿ ಹೋರಾಟದಂಗಳಕ್ಕೆ ಇಳಿದಿದ್ದರು. ಒಂದೂವರೆ ತಾಸು ರಸ್ತೆ ತಡೆ ನಡೆದು ಅಧಿಕಾರಿಗಳು ಮತ್ತು ಹೋರಾಟಗಾರರ ನಡುವೆ ಮಾತುಕತೆಯ ತರುವಾಯ ಇನ್ನೇನು ಚಳುವಳಿ ಮುಗಿಯಲಿತ್ತು.

ಉಷಾ ಕಣ್ಣೀರು ಒರೆಸಿಕೊಳ್ಳುತ ಗದ್ಗದಿತಳಾಗಿ ಹೇಳತೊಡಗಿದಳು. ''ನನ ಗಂಡ ಆ ಹೋರಾಟದೊಳಗಿದ್ದ. ಜನರಿಗೆಲ್ಲ ಒಗ್ಗೂಡಿಸಿ ಮಾತಾಡ್ತಿದ್ದ. ಆದ್ರೆ ಹತ್ತೇ ನಿಮಿಷದೊಳಗ ಅದೆಲ್ಲಿಂದ ಬಂದರೋ ಪೋಲೀಸರು ಫೈರಿಂಗ್ ಸುರು ಮಾಡೇ ಬಿಟ್ಟರು. ನನ ಗಂಡ, ಜನ ಗೋಲಿಗೆ ಬಲಿಯಾಗಬಾರದು ಅಂತ ಎಲ್ಲರನ್ನು ಸರಿಸುತ ಮುಂದೆ ಹೋದ. ನಿರ್ದಯ ರೆಡ್ಡಿ ಸರ್ಕಾರ ಸಂಧಾನದ ಮಾತಾಡಿ ಗೋಲಿಬಾರಿಗೆ ಆದೇಶ ಮಾಡಿತ್ತು. ಪೋಲೀಸರ ಗೋಲಿ ನನ ಗಂಡನ ಎದೆ ಹೊಕ್ಕಿತು. ನಾನಾಗ ಹಸುಗೂಸಿನೊಂದಿಗೆ ಮನೆಯಲ್ಲಿದ್ದೆ. ಅದ್ಯಾರೋ ಧಾವಿಸಿ ಬಂದು ಹೇಳಿದರು. ನಾನು ಹೌಹಾರಿ ಫೈರಿಂಗ್ ಸ್ಥಳಕ್ಕೆ ನುಗ್ಗಿದೆ. 'ಇನ್‌ಕ್ವಿಲಾಬ್ ಜಿಂದಾಬಾದ್' ಎಂಬ ಉಸಿರು ಇನ್ನೂ ನನ್ನ ಗಂಡನ ಗಂಟಲಲ್ಲಿತ್ತು. ಅವನ ತಲೆ ತೊಡೆಯ ಮೇಲಿಟ್ಟುಕೊಂಡೆ 'ಹೇ ಬಂಡವಳಿಗ ಚೇಲಾಗಳೇ, ದುಷ್ಟರೇ ನನ್ನನ್ನೂ ಕೊಲ್ಲಿ ಕೊಲ್ಲಿ....' ಎಂದು ಎದೆ ಬಡಿದುಕೊಂಡು ಅತ್ತೆ, ನನ್ನ ತೊಡೆಯ ಮೇಲೆ ನನ್ನ ಗಂಡನ ಪ್ರಾಣ ಪಕ್ಷಿ ಹಾರಿ ಹೋಯಿತು. ಬಡವರ ರಕ್ತ ಹೀರುವ, ನನ್ನಂಥವರ ಜಿಂದಗಾಣಿಯನ್ನು ಬರಡು ಮಾಡಿದ ಜಮೀನ್ದಾರಿ ಸರ್ಕಾರದ ವಿರುದ್ಧ ನನ್ನ ಉಸಿರಿರುವ ತನಕ ಹೋರಾಡ್ತೀನಿ. ನನಗ ಬಂದ ಕಷ್ಟ ಯಾರಿಗೂ ಬರಬಾರದು".... ಭೂಮಿ ಹೋರಾಟದಲ್ಲಿ ಗಂಡನನ್ನು ಕಳಕೊಂಡ ಉಷಾಳ ಒಡಲ ತಳಮಳದಲ್ಲಿ ಇಡೀ ಸಭೆಯೇ ಬೆಂದು ಕಣ್ಣೀರಿಸುತ್ತಿತ್ತು. ಮರು ಕ್ಷಣವೇ ಅವಳಾಡಿದ ಕೆಚ್ಚಿನ ಮಾತುಗಳಿಂದ ಸಭೆಯು ಘೋಷಣೆ ಮೊಳಗಿಸಿತು. "....ನನ್ನದು ದುಃಖದಲ್ಲಿ ಜನವಾದಿ ಸಿಪಿಐ(ಎಂ) ಪಕ್ಷಗಳು ಶಾಮೀಲಾಗಿವೆ. ಬದುಕುವ ಛಲ ತುಂಬಿವೆ. ಹೋರಾಟಕ್ಕೆ ಬಲ ತುಂಬಿವೆ. ಈಗ ಸಂಘಟನೆ ಮತ್ತು ಹೋರಾಟವೇ ನನ್ನುಸಿರು"... ಅವಳ ಬಗಲ ಕೂಸು ಅಳುವಾಗ ಸುಭಾಷಿಣಿ ಅಲಿ ಕಂದನನ್ನು ಎದೆಗೊರಗಿಸಿಕೊಂಡು ಸಂತೈಸಿದರು. 'ನೀವೂ ಈ ಸಂಘದ ಬಾವುಟ ದೇಶದ ತುಂಬ ಎತ್ತಿ ಹಿಡಿಯಿರಿ".... ಎಂದ ಉಷಾ ಕಣ್ಣೊರಡಿಕೊಂಡು ಜಿಂದಾಬಾದ್ ಹೇಳಿದಳು.


ನನಗೆ ನೆನಪಿದೆ1989ರ ಜನವರಿ 1 ರಂದು ದುಡಿವ ಜನತೆಯ ಸಾಂಸ್ಕೃತಿಕ ನೇತಾರ ಸಪ್ಧ ಹಾಷ್ಮಿಯನ್ನು ಅಂದಿನ ಕಾಂಗ್ರೆಸ ರಾಜೀವ್‌ಗಾಂಧಿ ಸರ್ಕಾರ ಹೀಗೆ ನಡುರಸ್ತೆಯಲ್ಲಿ ಬಾರ್ಬರಿಕ ಹತ್ಯೆ ಮಾಡಿತ್ತು. ಆ ಹಾಷ್ಮೀಯ ಬಾಳ ಸಂಗಾತಿ ಮಾಲಾಶ್ರೀ ಹತ್ಯೆ ನಡೆದ ನೆಲದಿಂದಲೇ ಸಾಂಸ್ಕೃತಿಕ ಹೋರಾಟ ಮುಂದುವರೆಸುವ ಪಣತೊಟ್ಟಿದ್ದಳು. ಈ ದೇಶದ ಸಾಂಸ್ಕೃತಿಕ ಲೋಕದ ಜನಪರ ದಿಗ್ಗಜರು ಸಹ ಅಂದು ಹಾಷ್ಮಿಯ ಕನಸಿನ ಸಾಕಾರಕ್ಕೆ ಪ್ರತಿಜ್ಞೆ ಮಾಡಿದ್ದರು. ನಾವಾಗ ಬೀದರಿನ ರಸ್ತೆಯ ಮೇಲೆ ಈ ಹಾಡು ಹೇಳುದ್ದೇವು. ಸಾವಿಲ್ಲದ ಸಂಗಾತಿಗಳಿಗಾಗಿ....

ಓ ತಾಯಿ ಭಾರತಾಂಬೆ ನಿನ್ನ ಮಗನ ಕೊಂದರೋ

ನೂತನ ನಾಯಕತ್ವ

ಅಧ್ಯಕ್ಷರಾಗಿ ಕಾಂ. ಸುಭಾಷಿಣಿ ಅಲಿ, ಕಾರ್ಯಾಧ್ಯಕ್ಷೆಯಾಗಿ ಶ್ಯಾಮಿಲಿ ಗುಪ್ತ, ಪ್ರಧಾನ ಕಾರ್ಯದರ್ಶಿಯಾಗಿ ಸುಧಾಸುಂದರಾಮನ್, ಖಜಾಂಚಿ ಬನಾನಿ ಬಿಸ್ವಾಸ್ ಎಂಟು ಜನ ಹಿರಿಯ ಸಂಗಾತಿಗಳು ಪೋಷಕರು. ಒಟ್ಟು ಸಿಇಸಿ ಸದಸ್ಯರ ಸಂಖ್ಯೆ 98. 29 ಪದಾಧಿಕಾರಿಗಳು. ಕರ್ನಾಟಕದಿಂದ ಕೇಂದ್ರ ಕಾರ್ಯಕಾರಿ ಸಮಿತಿಗೆ ಕೆ.ನೀಲಾ, ಕೆ.ಎಸ್.ಲಕ್ಷ್ಮಿ, ಕೆ.ಎಸ್.ವಿಮಲಾ

ಬಹಿರಂಗಸಭೆಯನ್ನುದ್ದೇಶಿಸಿ ಬೃಂದಾ. ವೇದಿಕೆಯಲ್ಲಿ ಸುಭಾಷಿಣಿ, ಬುದ್ಧದೇಬ್ ಮತ್ತಿತರರು



ಕೆ.ಕೆ. ಹಾಳ್ ಘಟನೆ

ವಿಧಾನಸೌಧದ ಮುಂದೆ ಯಡಿಯೂರಪ್ಪ ಬಿಜೆಪಿ-ಜೆಡಿ(ಎಸ್) ಮೈತ್ರಿಕೂಟದ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲು ಸಿದ್ಧರಾಗುತ್ತಿರುವಾಗಲೇ ಬಳ್ಳಾರಿಯಲ್ಲಿ ನಾಲ್ಕು ಜನರ ಕಗ್ಗೊಲೆ ನಡೆದಿದೆ. ಇದು ರಾಜಕೀಯ ಹತ್ಯೆಗಳೇ? ವೈಫಲ್ಯಗಳೆಲ್ಲಿ?

ಬಳ್ಳಾರಿ ಮತ್ತೆ ತೆರೆಯ ಮೇಲೆ!

ಯು. ಬಸವರಾಜು

ಬಳ್ಳಾರಿ ತಾಲ್ಲೂಕಿನ ಕಲ್‌ಕುಟ್ಟಿ ಗಿನಹಾಳ್ ಗ್ರಾಮದಲ್ಲಿ ಜೆಡಿ(ಎಸ್) ಕಾರ್ಯಕರ್ತರ ಮೇಲೆ ಹಲ್ಲೆ ಹಾಗೂ ಕೊಲೆಗಳು ನಡೆದಿವೆಯೆಂದು ರಾಜ್ಯ ಅಧ್ಯಕ್ಷನಾಗಿ ನಾನು ಅಲ್ಲಿಗೆ ಭೇಟಿ ನೀಡುವೆ ಎನ್ನುವ ಮೂಲಕ ಮಿರಾಜುದ್ದೀನ್ ಪಾಟೀಲ್‌ರ ರಾಜ್ಯದ ರಾಜಕೀಯ ತೆರೆಯ ಮೇಲೆ ಮರಳಿ ಬಳ್ಳಾರಿಯನ್ನು ತಂದರು. ಇದಕ್ಕೆ ಸರಿಯಾಗಿ ಕೆ.ಕೆ.ಹಾಳದಲ್ಲಿ ಘಟನೆ ನಡೆದ ಒಂದೆರಡು ದಿನಗಳಲ್ಲಿ ಸಿಓಡಿ ತನಿಖೆ ಆರಂಭಗೊಂಡಿದ್ದು, ರಾಜ್ಯದ ಜನತೆಗೆ ಈ ಕೊಲೆಗಳು ರಾಜಕೀಯ ಪ್ರೇರಿತವೆಂಬಂತೆ ಬಿಂಬಿತಗೊಳ್ಳುವಂತಾಯಿತು!

ಈ ಘಟನೆ ನಡೆದ ಕೇವಲ 50 ಘಂಟೆಗಳಲ್ಲಿ ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸುವಾಗ ಜೆಡಿ(ಎಸ್) ಮತ್ತು ಬಿಜೆಪಿ ನಡುವೆ ಇನ್ನಷ್ಟು ಬಿರುಕನ್ನು ಇದು ತರಲಿದೆಯೆಂಬಂತೆ ಕಂಡು ಬಂತು. ಕೊಲೆಗೈಯ್ಯಲ್ಪಟ್ಟವರು, ಹಲ್ಲೆಗೊಳಗಾದವರು ಜೆಡಿ(ಎಸ್) ಬೆಂಬಲಿಗರೆಂದು ಶಾಸಕ ಸೂರ್ಯನಾರಾಯಣರೆಡ್ಡಿ ಆಸ್ಪತ್ರೆಗೆ ಭೇಟಿ ನೀಡಿ ಹೇಳಿಕೆ ಇತ್ತು ಈ ದುಷ್ಕೃತ್ಯದ ಹಿಂದೆ ಬಿಜೆಪಿ ಇದೆಯೆಂದು ಆರೋಪಿಸಿದರು. ಬಳ್ಳಾರಿನಗರದ ವಿಧಾನ ಪರಿಷತ್ ಸದಸ್ಯರಾದ ಜನಾರ್ಧನ ರೆಡ್ಡಿರವರ ತಮ್ಮಂದಿರಾದ ಬಳ್ಳಾರಿ ನಗರದ ಮಾಜಿ ಮೇಯರ್ ಬಿಜೆಪಿ ಮುಖಂಡ ಸೋಮಶೇಖರ ರೆಡ್ಡಿ ಇದನ್ನು ಅಲ್ಲಗಳೆದರಾದರೂ; ರಾಜ್ಯದ ಹಾಗೂ ಬಳ್ಳಾರಿಯ ಜನತೆಗೆ ಆ ರೀತಿಯ ಅಭಿಪ್ರಾಯ ಮಾಡುವಂತಾಯಿತು! ಸೂರ್ಯ ನಾರಾಯಣರೆಡ್ಡಿ ರಾಜಕೀಯ ಬೆಂಬಲವಿಲ್ಲದಿದ್ದರೆ ಅದು ಹೇಗೆ ಘಟನೆ, ನಡೆದ ಕೆಲವೇ ಘಂಟೆಗಳಲ್ಲಿ ಸಿಓಡಿ ತನಿಖೆಯ ತೀಕ್ಷ್ಣತೆ ಬರಲಾಗುತ್ತಿದೆಯೆಂದರು.

ನಡೆದ ಘಟನೆ ಏನು?

ಅಂದು ಶುಕ್ರವಾರ. ರಾತ್ರಿ ಸಮಯ 7.30 ರಿಂದ 8.00 ಗಂಟೆಯಾಗಿರಬಹುದು! ನವೆಂಬರ್ 09, 2007ರಂದು ಕಲ್ಲಕುಟಿಗಿನಹಾಳ್ ಗ್ರಾಮಕ್ಕೆ ಸೇರಿದ ವಾಲ್ಮೀಕಿ ಜನಸಮುದಾಯಕ್ಕೆ ಸೇರಿದ್ದು ಎನ್ನಲಾದ ಒಂದು ಗುಂಪು ನೇರವಾಗಿ ಕೊಲೆಗೀಡಾದ, ಟಿ.ವಿ. ನೋಡುತ್ತಾ ಕುಳಿತಿದ್ದ ಲಿಂಗಾಯಿತ ಜನಾಂಗಕ್ಕೆ ಸೇರಿದ್ದ ನಾಗರಾಜಗೌಡ ಮತ್ತಿತರರಿರುವ ಕುಟುಂಬದ ಮೇಲೆ ಮಾರಕಾಸ್ತ್ರಗಳಿಂದ ದಾಳಿ ನಡೆಸಿದೆ! ಈ ದಾಳಿಯಲ್ಲಿ ನಾಗರಾಜಗೌಡ (35) ಸ್ಥಳದಲ್ಲಿಯೇ ಮೃತಪಟ್ಟರೆ, ರಾಮನಗೌಡ, ಮಲ್ಲನಗೌಡ ಸೇರಿದಂತೆ ಇಲ್ಲಿಯವರೆಗೆ ಒಟ್ಟು 4 ಜನ ಸಾವನ್ನಪ್ಪಿದ್ದಾರೆ! ಮಹಿಳೆಯರು ಸೇರಿದಂತೆ ಒಟ್ಟು 7 ಜನ ಗಂಭೀರ ಹಲ್ಲೆಗೊಳಗಾಗಿದ್ದಾರೆ. ಇದರಲ್ಲಿ ಒಬ್ಬಿಬ್ಬರ ಸ್ಥಿತಿ ಚಿಂತಾಜನಕವೆಂದು ತಿಳಿದುಬಂದಿದೆ.

ಯಾಕೀ ಘಟನೆ?

ಈ ಘಟನೆಯಲ್ಲಿ ರಾಜಕೀಯ ಕೈವಾಡವಿತ್ತೇ ಎಂಬ ಬಗ್ಗೆ ತನಿಖೆ ಹೊರಗೆಡಹಬೇಕಾಗಿದೆ! ಅದೇನೆ ಇದ್ದರೂ ಈ ದಾಳಿಯ ಹಿಂದೆ ವ್ಯಕ್ತಿಗತ ದ್ವೇಷಗಳಿದ್ದವೆಂಬುದಂತು ಖಂಡಿತ ನಿಜವಾಗಿದೆ!

ಸಾಮಾನ್ಯವಾಗಿ ಬಳ್ಳಾರಿ ತಾಲ್ಲೂಕಿನ ಎಸಿಸಿ ಹಾಗೂ ಎಲ್‌ಸಿಸಿ ನೀರಾವರಿ ಪ್ರದೇಶದ ಹಳ್ಳಿಗಳಲ್ಲಿ ಮೇಲ್ಜಾತಿ ಜನರಿಗೆ ಹಾಗೂ ಕೆಳಜಾತಿ ಜನರಿಗೆ ಅದರಲ್ಲೂ ವಾಲ್ಮೀಕಿ ಜನ ಸಮುದಾಯ ಕೆಲ ಜನರಿಗೆ ಈ ರೀತಿಯ ಘರ್ಷಣೆಗಳು ನಡೆದೇ ಇವೆ! ಈ ಎಲ್ಲದರ ಹಿಂದೆ ಸರಿಸುಮಾರಾಗಿ ನೀರಾವರಿ ವಿಚಾರವು ಘರ್ಷಣೆಯ ಮೂಲವಾಗಿದೆ! ಕಲ್ಲುಕುಟಗಿನಾಳ ಘಟನೆಯ ಮೂಲಾಂಶ ನೀರಾವರಿ ಸಮಸ್ಯೆಯಿಂದಲೇ ಆರಂಭವಾಗುತ್ತದೆ!

ಕಳೆದ ವರ್ಷ ಇದೇ ಗ್ರಾಮದಲ್ಲಿ ಎಲ್‌ಎಲ್‌ಸಿ ಕಾಲುವೆಯ 31ನೇ ಡಿಸ್ಟ್ರಿಬ್ಯೂಟರಿಯಲ್ಲಿ ಈ ಎರಡು ಕುಟುಂಬಗಳ ನಡುವೆ ನೀರಾವರಿಗಾಗಿ ವಿವಾದ ಆರಂಭವಾಯಿತು. ಸಾಮಾನ್ಯವಾಗಿ ನೀರಾವರಿ ಪ್ರದೇಶದಲ್ಲೆಲ್ಲಾ ಕಾಲುವೆ ತುದಿಭಾಗದ ರೈತರಿಗೆ ನೀರು ತಲುಪದೇ ಪರದಾಡುವ ಒಂದು ಸಮಸ್ಯೆ ಇದ್ದೇ ಇದೆ. ತುದಿಭಾಗದಿಂದ ಮೇಲ್ಭಾಗಕ್ಕೆ ನೀರುಣಿಸಬೇಕೆಂಬ ನಿಯಮವಿದ್ದರೂ ಅಧಿಕಾರಿಗಳು ಇದನ್ನು ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳುವುದಿಲ್ಲ! ಅದೇ ರೀತಿ ಕಡಿಮೆ ಅವಧಿಯ ಹಾಗೂ ಕಡಿಮೆ ನೀರು ಬೇಡುವ ಬೆಳೆಯನ್ನು ಬೆಳೆಯಬೇಕೆಂದಿದ್ದರೂ ಹೆಚ್ಚಿನ ಅವಧಿಯ, ಹೆಚ್ಚು ನೀರು ಪಡೆಯುವ ಸ್ವಲ್ಪ ಹೆಚ್ಚು ಲಾಭ ಪಡೆಯುವ ಬೆಳೆಗೆ ರೈತರು ಮಾರುಕಟ್ಟೆಯ ಏರುಪೇರಿನಿಂದಾಗಿ ಮುಂದಾಗುವುದೀಗ ಸಹಜವಾಗಿ ನೀರಾವರಿ ಇಲಾಖೆ ನಿಯಮಗಳು ಗಾಳಿಗೆ ತೂರಲ್ಪಡುತ್ತವೆ! ಸಾಮಾನ್ಯವಾಗಿ ಶ್ರೀಮಂತರನ್ನು ಎದುರಿಸಲಾಗದೇ ಅಧಿಕಾರಿಗಳು ಆತನಿಗೆ ಸಹಕಾರಿಯಾಗಿ ನಿಂತು ತುದಿಭಾಗದ ರೈತರನ್ನು ಉಪೇಕ್ಷಿಸುತ್ತಾರೆ! ಎಲ್ಲಿ ತುದಿಭಾಗದ ರೈತರು ಸಂಘಟಿತರಿರುವರೋ ಅಲ್ಲಿ ಅವರಿಗೆ ನೀರು! ಎಲ್ಲಿ ಸಂಘಟಿತ ಜನರಿಲ್ಲವೋ ಅಲ್ಲಿ ದುರ್ಬಲರ, ಬಡವರ ಜಮೀನಿಗೆ ನೀರಿಲ್ಲ! ಅಲ್ಲಿಯೇನಾದರೂ ಒಬ್ಬಿಬ್ಬರು ಧೈರ್ಯದಿಂದ ನೀರಿನ ಹಕ್ಕಿಗೆ ಮುಂದಾದಲ್ಲಿ ಸಂಘರ್ಷತಪ್ಪಿದ್ದಲ್ಲಾ! ರೈತ ಸಂಘಗಳಿಲ್ಲದಿರುವಾಗ ಸಾಮಾನ್ಯವಾಗಿ ಆಯಾ ಜಾತಿಗಳೇ ಅವರಿಗೆ ಬೆಂಬಲವಾಗಿ ನಿಲ್ಲುತ್ತವೆ! ವ್ಯಕ್ತಿಗತ ನೀರಾವರಿ ಸಮಸ್ಯೆ ಜನ ಸಮುದಾಯಗಳ ಸಮಸ್ಯೆಯಾಗಿ ಜಾತಿ ಸಂಘರ್ಷವಾಗಿ ಮಾರ್ಪಡುವುದಿದೆ.

ಜಾತಿ - ತಿದಿ

ಒಳ್ಳೆಯ ನೀರು ಹರಿದು ಬರುವಾಗಲೇ ಈ ಪರಿಸ್ಥಿತಿ ಇರುತ್ತದೆ. ಇನ್ನು ತುಂಗಭದ್ರಾ ನದಿಯಲ್ಲಿ ಶೇ.32ರಷ್ಟು ಹೂಳು ತುಂಬಿರುವಾಗ ಮಳೆಯ ಪ್ರಮಾಣ ಕಡಿಮೆಯಿರುವಾಗ ಕೇಳಬೇಕೇ? ಈ ಭಾಗದ ಪೋಲೀಸ್ ಸ್ಟೇಷನ್‌ಗಳಲ್ಲಿ ಈ ಸಂಘರ್ಷಗಳ ಕೇಸುಗಳದೇ ದರ್ಬಾರು! ರಾಜಕೀಯ ಮುಖಂಡರಿಗೆ ಪಕ್ಷಗಳಿಗೆ ಬಲಾಢ್ಯ ಗುಂಪು ಹಿಡಿಯಲು ಇದೊಂದು ಸದವಕಾಶ ಒದಗಿಸುತ್ತದೆ. ನಂತರ ಇವು ರಾಜಕೀಯ ಸ್ವರೂಪ ಪಡೆಯುತ್ತವೆ.

ಕಲ್ಲುಕುಟಗಿನಾಳ ಗ್ರಾಮದಲ್ಲಿ ಕಳೆದ ವರ್ಷ ನಡೆದದ್ದು ಇದಕ್ಕಿಂತ ಭಿನ್ನವಾಗಿಯೇನು ಕಾಣುತ್ತಿಲ್ಲ.

ಸಾಮಾನ್ಯವಾಗಿ ಕಾಲುವೆ ಮೇಲ್ತುದಿಯಲ್ಲಿ ಮೇಲ್ಜಾತಿಯವರ ಶ್ರೀಮಂತರ ಭೂಮಿಗಳಿದ್ದು ಕೆಳಭಾಗದಲ್ಲಿ ಕೆಳ ಜಾತಿಯವರ ಬಡವರ ಸಣ್ಣ ಜಮೀನುಗಳಿರುತ್ತವೆ.

ಇದರಂತೆ ಲಿಂಗಾಯುತ ಜನ ಸಮುದಾಯದ ಕೆಲವರ ಜಮೀನುಗಳು ಇಲ್ಲಿ ಮೇಲ್ತುದಿಯಲ್ಲಿದ್ದು ಕೆಳ ತುದಿಯಲ್ಲಿರುವ ವಾಲ್ಮೀಕಿ ಸಮುದಾಯದ ಕೆಲವರ ಜಮೀನಿದ್ದು, ನೀರಿನ ಕೊರತೆಯು ಸಮಸ್ಯೆಗೆ ಕಾರಣವಾಯಿತು. ನೀರಿಗಾಗಿ ಶುರುವಾದ ಜಗಳ ಸಣ್ಣದಾಗಿ ಬೆಳೆದು ಮಾತುಗಳಲ್ಲಿ ಪರಸ್ಪರ ಜಾತಿನಿಂದನೆಯ ಮೂಲಕ ಜಾತಿ ಸ್ವರೂಪ ಪಡೆದು ಗುಂಪು ಘರ್ಷಣೆಗೆ ಕಾರಣವಾಯಿತು. ಈ ಗುಂಪುಗಳೆರಡು ಗ್ರಾಮದಲ್ಲಿ ಪರಸ್ಪರ ವಿರುದ್ಧ ಕಲ್ಲು ತೂರಾಟ ನಡೆಸಿದ್ದು, ಆ ವೇಳೆಯಲ್ಲಿ ವಾಲ್ಮೀಕಿ ಜನಾಂಗಕ್ಕೆ ಸೇರಿದ ಹಿರಿಯ ಸುಂಕಪ್ಪ(58) ಕಲ್ಲಿನೇಟಿನಿಂದ ಸಾವಿಗೀಡಾಗಿದ್ದಾನೆ. ಇದು ನೀರಿನ ಕೊರತೆ ಹಾಗೂ ನೀರಿಗಾಗಿ ಶುರುವಾದ ಒಂದು ಸಣ್ಣ ಜಗಳ ಅದು ಹೇಗೇಗೋ ಬೆಳೆದು ಈ ದಿನದ ವ್ಯಕ್ತಿ ದ್ವೇಷಕ್ಕೆ ಕಾರಣವಾಗಿ ಜನರ ಕೊಲೆಗೆ ಕಾರಣವಾಗಿದೆ. ಈಗ ಗ್ರಾಮದಲ್ಲಿ ನೀರವ ಮೌನ, ಅನೇಕರ ಪರಾರಿಯಲ್ಲಿದ್ದಾರೆ. 144 ಸೆಕ್ಷನ್ ಜಾರಿಯಲ್ಲಿದೆ. ಪೋಲೀಸರ ದಂಡಿದೆ.ಮುಂದೆಷ್ಟು ಕೊಲೆಗಳು ನಡೆಯಬಹುದೆಂಬ ಆತಂಕ ವ್ಯಾಪಿಸಿದೆ. ಸಾಕ್ಷಿ ಹೇಳಬೇಕಾದಿತೆಂದು ಪರಾರಿಯಾದವರೂ ಇದ್ದಾರೆ. ನಮಗೇಕೆ ಪೋಲೀಸರ ಕಾಟವೆಂದು ದೂರವಿದ್ದವರಿದ್ದಾರೆ.

ಸಮಸ್ಯೆ ನೀರಿನ ಅಸಮರ್ಪಕ ವಿತರಣೆಯಿಂದ ವ್ಯಕ್ತಿಗಳ ನಡುವೆ ಆರಂಭವಾದರೂ, ಅಸ್ತಿತ್ವದಲ್ಲಿರುವ ಅನಿಷ್ಟ ಜಾತಿ ಪದ್ಧತಿಯು ಅದಕ್ಕೆ ತಿದಿಊದಿ ಊರಿಗೆ ಕೊಳ್ಳಿ ಹಚ್ಚಿ ಊರ ಸಂಘರ್ಷವಾಗಿಸಿದ್ದನ್ನು ಇಲ್ಲಿ ಗುರುತಿಸಲೇಬೇಕು.

ನಂತರ ರಾಜಕೀಯ ಪಕ್ಷಗಳು/ಆಡಳಿತವು ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಊರಲ್ಲಿ ಸಾಮರಸ್ಯ ಉಂಟು ಮಾಡಬೇಕಾದ ಗಂಭೀರವಾದ ಕೆಲಸ ಉಪೇಕ್ಷಿಸಿದರೇ ಮರಳಿ ಬೂದಿ ಮುಚ್ಚಿದ ಕೆಂಡ ವ್ಯಕ್ತಿಗಳ ದ್ವೇಷದ ಮೂಲಕ ಭುಗಿಲೆದ್ದು ಜ್ವಾಲೆಯಾಗಿ ಕೆನ್ನಾಲಿಗೆ ಚಾಚುತ್ತದೆ. ಇಲ್ಲಿಯೂ ಆದದಿಷ್ಟೇ?

ಕಳೆದ ವರ್ಷದ ಘಟನೆಯ ಬಳಿಕ ಎರಡು ಗುಂಪಿನವರ ಮೇಲೆ ಕೇಸ್ ನೊಂದಾಯಿಸಲಾಯಿತಾದರೂ, ಸತ್ತ ಸುಂಕಪ್ಪನ ಬಂಧುಗಳು ವಿರೋಧಿಗಳಿಗೆ ಸರಿಯಾದ ಶಿಕ್ಷೆಯಾಗುತ್ತೆಂದು ಭಾವಿಸಿದ್ದರು. ಆದರೆ ವಿರೋಧಿ ಗುಂಪಿಗೆ ಒಂದೆರಡು ದಿನದಲ್ಲೇ ಜೈಲಿನಿಂದ ಬೇಲ್ ಸಿಕ್ಕು ಬಿಡುಗಡೆಗೊಂಡದ್ದು ಇವರ ಅಸಮಾಧಾನದ ಹೊಗೆಗೆ ಸೀಮೆಎಣ್ಣೆ ಸುರಿದಂತಾಗಿದೆ. ನಂತರ ಸೌಹಾರ್ದ ರೂಪಿಸುವ ಕೆಲಸವು ಆಡಳಿತದಿಂದಾಗಲೀ, ರಾಜಕೀಯ ಪಕ್ಷಗಳಿಂದಾಗಲಿ ಆಗಲಿಲ್ಲ. ಈ ಎಲ್ಲಾ ವೈಫಲ್ಯತೆಗಳೇ ಈ ಘಟನೆಯ ಬೆನ್ನ ಹಿಂದಿವೆ.

ಜಿಲ್ಲಾ ಆಡಳಿತವು ಹಿಂದಿನ ಅನುಭವದಿಂದಾದರೂ ಮುಂದೆ ಈ ರೀತಿಯ ಘಟನೆ ಘಟಿಸದಂತೆ ಸೂಕ್ತ ಕ್ರಮಗಳನ್ನು ಅನುಸರಿಸಬೇಕಾಗಿದೆ. ಇದು ಕೇವಲ ಕಲ್ಲಕುಟಿಗನಾಳ ಪ್ರಶ್ನೆಯಲ್ಲ. ಎಲ್ಲಾ ತುದಿಭಾಗದ ನೀರಿನ ಸಮಸ್ಯೆ ಎದುರಿಸುವ ರೈತರ ಪ್ರಶ್ನೆಯೂ ಆಗಿದೆ. ಈ ಸಮಸ್ಯೆಯ ಕಡೆಯು ಗಮನಹರಿಸಬೇಕಾಗಿದೆ. ಅದೇ ರೀತಿ ಅನಿಷ್ಟ ಜಾತಿ ಪದ್ಧತಿ. ಜಾತಿ ಭಾವನೆಗಳು, ಸೌಹಾರ್ದ ವಾತಾವರಣ ಕೆಡಿಸಲಿವೆ ಅದನ್ನು ಗಮನಿಸಬೇಕಾಗಿದೆ. ಇನ್ನು ರಾಜಕೀಯ ಶಕ್ತಿಗಳು ಇಂತಹವುಗಳ ಲಾಭ ಪಡೆಯುವ ಆಸೆ ಬಿಟ್ಟು ಸೌಹಾರ್ದತೆಗೆ ಮುಂದಾಗಬೇಕಾಗಿದೆ. ಜನರು ಇದನ್ನು ತಿಳಿಯಬೇಕಿದೆ.

...... ದೀಪದ ಕೆಳಗಿನ ಕತ್ತಲು

ಪುಟ 6 ರಿಂದ

ಕುಟುಂಬಗಳನ್ನು 2005-06 ಸಾಲಿನಲ್ಲಿ ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು. ಶೇ.12 ರಷ್ಟು ಕುಟುಂಬಗಳು ತಮ್ಮ ಆಸ್ತಿಗಳನ್ನು ಮಾರಬೇಕಾಗಿ ಬಂತು. ಶೇ.43 ರಷ್ಟು ಕುಟುಂಬಗಳು ಸಾಲ ಮಾಡಬೇಕಾದ ಪರಿಸ್ಥಿತಿಯೂ ಬಂತು.

ಇದೆಕ್ಕೆಲ್ಲಾ ನಾವು ನೀಡುವ ಪರಿಹಾರವೆಂದರೆ ಅದೇ ಹಳೆಯ ಮದ್ದು. ಅಂದರೆ ಮತ್ತಷ್ಟು ಖಾಸಗೀಕರಣ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಾಗಿ ಹೂಡುವ ಹಣದಲ್ಲಿ ಇನ್ನಷ್ಟು ಕಡಿತ. ಮುಂಬಯಿ ನಗರದಲ್ಲಿ ಖಾಸಗೀ ಆಸ್ಪತ್ರೆಗಳು ನಡೆಸುವ ಸುಲಿಗೆಯ ಪ್ರಮಾಣ ಎಷ್ಟೊಂದು ವಿಪರೀತವಾಗಿದೆಯೆಂದರೆ, ಇತ್ತೀಚಿನ ದಿನಗಳಲ್ಲಿ ಅದು ಮಾಧ್ಯಮಗಳಲ್ಲೂ ವರದಿಯಾಗುತ್ತಿದೆ. ಆದರೆ ಮಾಧ್ಯಮಗಳ ವರದಿಗಾರರು ಸಾರ್ವಜನಿಕ ವ್ಯವಸ್ಥೆಯಲ್ಲಿನ ಕುಸಿತ ಹಾಗೂ ಜನ ಸಾಮಾನ್ಯರ ಸಂಕಷ್ಟಗಳ ನಡುವಿನ ಸಂಬಂಧವನ್ನು ಗುರುತಿಸುವುದೇ ಇಲ್ಲ. ಖಾಸಗೀ ಲಾಭಕ್ಕಾಗಿ ಇದೆಲ್ಲಾ ನಡೆಯುತ್ತಿದೆ ಎಂಬುದನ್ನು ಎತ್ತಿ ತೋರಿಸುವ ಪ್ರಯತ್ನವನ್ನಂತೂ ಅವರು ಮಾಡುವುದೇ ಇಲ್ಲ. ಅದನ್ನೇನಾದರೂ ಮಾಡಿದರೆ, ಪತ್ರಿಕೆ ಅಥವಾ ದೃಶ್ಯ ಮಾಧ್ಯಮಗಳ ಒಡೆತನಗಳು ಪ್ರತಿಪಾದಿಸುತ್ತಿರುವ ಎಲ್ಲಾ ಸಮಸ್ಯೆಗಳಿಗೂ ಖಾಸಗೀಕರಣ ಮಾತ್ರ ಪರಿಹಾರ ನೀಡುತ್ತದೆ ಎಂಬ ನೀತಿಗಳಿಗೆ ವಿರುದ್ಧವಾಗುತ್ತದಲ್ಲವೇ?

ಈ ವರ್ಷದಲ್ಲೇ ಮುಂಬಯಿಯ ಉಚ್ಚ ನ್ಯಾಯಾಲಯ ಹಲವಾರು ಬಾರಿ ಹಣ ಪಾವತಿ ಮಾಡದೆ ಶವಗಳನ್ನು ಬಿಡುಗಡೆ ಮಾಡದಿರುವ ಆಸ್ಪತ್ರೆಗಳ ಅಮಾನವೀಯ ಹಾಗೂ ಕ್ರೂರ ಕ್ರಮಗಳ ವಿರುದ್ಧ ಕಠಿಣ ಎಚ್ಚರಿಕೆ ನೀಡಿದೆ. ಲಕ್ಷಾಂತರ ರೂಪಾಯಿಗಳನ್ನು ತೆತ್ತರೆ ಮಾತ್ರ ಶವಗಳನ್ನು ಒಪ್ಪಿಸಲಾಗುತ್ತೆ ಎಂದು ಸಂಬಂಧಿಕರ ಮೇಲೆ ಒತ್ತಡ ಹೇರುವ ಕ್ರೂರ ಕ್ರಮಗಳನ್ನು ಖಂಡಿಸಿದೆ. ಆದರೂ ಇಂತಹ ಪ್ರಸಂಗಗಳು ನಡೆಯುತ್ತಲೇ ಇವೆ. ಇತ್ತೀಚೆಗೆ ಖಾಸಗಿಯವರಿಗೆ ವಹಿಸಿಕೊಟ್ಟಿರುವ ಸರ್ಕಾರಿ ಆಸ್ಪತ್ರೆಗಳಲ್ಲೂ ಸಹ. ದೊಡ್ಡ ಮೊತ್ತದ ಹಣ ನಿಮ್ಮಿಂದ ಆಸ್ಪತ್ರೆಗೆ ಬಾಕಿ ಇದೆ ಎಂದು ಹಠಾತ್ತಾಗಿ ಬಡ ಕುಟುಂಬವೊಂದಕ್ಕೆ ಹೇಳಲಾಗುತ್ತದೆ. 5 ವರ್ಷದ ಹೆಣ್ಣು ಮಗುವಿನ ಶವವನ್ನು ಅಷ್ಟು ದೊಡ್ಡ ಮೊತ್ತದ ಹಣ ಪಾವತಿ ಮಾಡಿದರ ನಿಮಗೊಪ್ಪಿಸುತ್ತೇವೆ ಎಂದು ಹೇಳಲಾಗುತ್ತಿದೆ. ಸಾರ್ವಜನಿಕ ಹಾಗೂ ಖಾಸಗೀ ವಲಯದ ಸಹಭಾಗಿತ್ವಕ್ಕೆ ಇದಕ್ಕಿಂತ ಒಳ್ಳೆಯ ಉದಾಹರಣೆ ಸಿಗಲಿಕ್ಕಿಲ್ಲ. ಸುಧಾರಣೆಯ ವರ್ಷಗಳ ಅವಧಿಯಲ್ಲಿನ ಆರೋಗ್ಯ ಸೂಚ್ಯಂಕದ ಗತಿಯನ್ನು ಗುರುತಿಸುವ ವಿಧಾನವನ್ನು ಜಾರಿಗೆ ತರುವುದು ಒಳಿತು ಎಂದು ಕಾಣಿಸುತ್ತದೆ. ಅದರ ಮೂಲಕ ಶ್ರೀಮಂತರು ಮತ್ತು ಬಡ ಜನರ ಪರಿಸ್ಥಿತಿ ಆರೋಗ್ಯದ ವಿಷಯದಲ್ಲಿ ಹೇಗಿದೆ ಎಂಬುದನ್ನು ಪರಿಶೀಲಿಸಬಹುದು. ಭಾರತದ ಬಡ ಜನರ ಸಾಲಿನಲ್ಲಿ ನೀವು ಇರುವಿರಿ ಎಂದಾದರೆ ಅನಾರೋಗ್ಯದ ದಿನಗಳು ನಿಮ್ಮ ಬದುಕಿನ ಎಷ್ಟು ವರ್ಷಗಳನ್ನು ಕಳಚಿವೆ ಎಂಬುದನ್ನು ಅರಿಯಲು ಸಾಧ್ಯವೇನೋ. ಮಾಧ್ಯಮಗಳ ಜಗತ್ತನ್ನು ತಟ್ಟುವುದು ಒಂದು ಸೂಚ್ಯಂಕ ಮಾತ್ರ. ಷೇರು ಸೂಚ್ಯಂಕ. ಅದನ್ನು ಗಮನಿಸಲಿಕ್ಕಾಗಿಯೇ ಒಂದು ಕಿರು ಉದ್ಯಮವೇ ಹುಟ್ಟಿಕೊಂಡಿದೆ. ಮಾಧ್ಯಮಗಳಲ್ಲಿ ಅದರ ಬಗ್ಗೆ ಮಾತನಾಡುವ, ವಿಶ್ಲೇಷಿಸುವವರ ಸಂಖ್ಯೆ ಗಣನೀಯವಾಗಿದೆ. ಷೇರು ಪೇಟೆಯ ಏರು ಪೇರುಗಳ ವಿಸ್ತಾರಗಳು ಭವಿಷ್ಯವಾಣಿಗಿಂತಲೂ ಹೆಚ್ಚಿನ ರೀತಿಯಲ್ಲಿ ವರ್ಣಿತವಾಗುತ್ತಿವೆ. ಬಹುಶಃ ನಮಗೀಗ ಮಾಧ್ಯಮಗಳ ಪ್ರಸ್ತುತತೆಯ ಸೂಚ್ಯಂಕವೊಂದರ ಅಗತ್ಯವಿದೆ. ಸಾಮೂಹಿಕ ಸ್ತರದಲ್ಲಿ ಉಡಾಫೆಯನ್ನು ಸೃಷ್ಟಿಸುವ ವ್ಯವಸ್ಥೆಯ ಮೇಲೆ ಒಂದು ಕ್ಷ-ಕಿರಣ ಬೀರುವ ಅಗತ್ಯವಿದೆ.

ಅನು: ಎಂ.ಆರ್.ಶೆಣೈ

ಆಧಾರ: ಹಿಂದೂ ಪತ್ರಿಕೆ, 26.10.2007

ಜಗದಗಲ

ಶರತ್‌ಚಂದ್ರ

ಪಾಕಿಸ್ತಾನದಲ್ಲಿ ಮಧ್ಯಂತರ ಸರ್ಕಾರಕ್ಕೆ ಪ್ರತಿರೋಧ

ಪಾಕಿಸ್ತಾನದ ರಾಜಕೀಯ ಬಿಕ್ಕಟ್ಟು ಇನ್ನಷ್ಟು ತೀವ್ರವಾಗಿ, ಕಗ್ಗಂಟಾಗಿದೆ. ತುರ್ತು ಪರಿಸ್ಥಿತಿ ಮುಂದುವರೆಯುತ್ತಿರುವಾಗಲೇ ಅಧ್ಯಕ್ಷ ಮುಶರಫ್ ಸರ್ಕಾರ ರಚನೆ ಮೂಲಕ ಇನ್ನೊಂದು ಪ್ರಜಾಪ್ರಭುತ್ವ-ವಿರೋಧಿ ಕ್ರಮ ಕೈಗೊಂಡು ಇನ್ನಷ್ಟು ಆಕ್ರೋಶಕ್ಕೆ ಕಾರಣರಾಗಿದ್ದಾರೆ. ಈ ಮಧ್ಯಂತರ ಮಧ್ಯಂತರ ಸರ್ಕಾರ ಮುಂದಿನ ವರ್ಷದ ಚುನಾವಣೆಯನ್ನು ನಡೆಸಲಿದೆ. ಸರ್ಕಾರ ರಚನೆಗೆ ದೇಶದ ಯಾವುದೇ ವಿರೋಧಿ ರಾಜಕೀಯ ಪಕ್ಷಗಳ ಜತೆ ಚರ್ಚೆ ಮಾಡದೆ ತುರ್ತು ಪರಿಸ್ಥಿತಿಯಲ್ಲಿ ಈ ರೀತಿಯ ಕ್ರಮವನ್ನು ವ್ಯಾಪಕವಾಗಿ (ದೇಶದಲ್ಲೂ, ಹೊರಗೂ) ಖಂಡಿಸಲಾಗಿದೆ.

ಮಧ್ಯಂತರ ಸರ್ಕಾರ ಈಗಿನ ಆಳುವ ಪಕ್ಷಗಳ ರಂಗದ ಇನ್ನೊಂದು ರೂಪವಷ್ಟೇ. ನಿಜವಾದ ಮುಕ್ತ ನ್ಯಾಯಯುತ ಚುನಾವಣೆ ನಡೆಸಲು ಅಧ್ಯಕ್ಷ ಮುಶರಫ್ ಮತ್ತು ಅವರ



ಬಾಂಬ್ ದಾಳಿ, ಗೃಹಬಂಧನ ಎದುರಿಸಬೇಕಾಗಿ ಬಂದ ವಿರೋಧಿ ನಾಯಕಿ ಬೆನಜಿರ್ ಭುಟ್ಟೋ

ಬೆಂಬಲಿಗರಿಗೆ ಆಸಕ್ತಿ ಇಲ್ಲ. ಬದಲಾಗಿ ಮುಂದಿನ ಚುನಾವಣೆಯಲ್ಲಿ ವ್ಯಾಪಕ ಅಕ್ರಮ ಮಾಡಿ ಗೆಲ್ಲಲು ಇದು ಸಹಾಯ ಮಾಡುತ್ತದೆ. ಆದ್ದರಿಂದ 'ಈ ಮಧ್ಯಂತರ ಸರ್ಕಾರವನ್ನು ಮಾನ್ಯ ಮಾಡುವುದಿಲ್ಲ' ಎಂದು ಬೆನಜಿರ್ ಸೇರಿದಂತೆ ಪ್ರಮುಖ ವಿರೋಧ ಪಕ್ಷಗಳು ಹೇಳಿವೆ. ರಾಜಧಾನಿಗೆ 300 ಕಿ.ಮೀ ಗಳ 'ದೀರ್ಘ ಪಯಣ' ದ ಕಾರ್ಯಕ್ರಮ ಕೈಗೊಳ್ಳುವುದಾಗಿ ಬೆನಜಿರ್ ಸಾರಿದ್ದಾರೆ. ಅಧ್ಯಕ್ಷ ಮುಶರಫ್ ಜತೆ ಎಲ್ಲಾ ರೀತಿಯ ಮಾತುಕತೆಗಳನ್ನು ನಿಲ್ಲಿಸುವುದಾಗಿಯೂ ಹೇಳಿದ್ದಾರೆ.

ಅಧ್ಯಕ್ಷ ಮುಶರಫ್ ಮಧ್ಯಂತರ ಸರ್ಕಾರಕ್ಕೆ ವಿರೋಧ ಕಡಿಮೆ ಮಾಡುವ ಭಾಗವಾಗಿ ಬೆನಜಿರ್, ಮಾನವ ಹಕ್ಕು ಚಳುವಳಿ ನಾಯಕಿ ಜಹಾಂಗೀರ್ ಅವರನ್ನು ಗೃಹಬಂಧನದಿಂದ ಬಿಡುಗಡೆ ಮಾಡಲಾಗಿದೆ. ಆದರೆ ಇಮ್ರಾನ್ ಖಾನ್ ಅವರನ್ನು ಅವರು ಭೂಗತರಾಗಿದ್ದ ಲಾಹೋರ್ ವಿಶ್ವ ವಿದ್ಯಾಲಯದ ಹಾಸ್ಟೆಲ್‌ನಿಂದ ಬಂಧಿಸಲಾಗಿದೆ. ಅವರನ್ನು ಬಂಧಿಸಲು ಜಮಾತೇ ಇಸ್ಲಾಮಿಯ ವಿದ್ಯಾರ್ಥಿ ವಿಭಾಗದ ಸದಸ್ಯರು ಸಹಾಯ ಮಾಡಿದರು ಎಂದು ವರದಿಯಾಗಿದೆ.

ಮಧ್ಯಂತರ ಸರ್ಕಾರ ರಚನೆಯಿಂದ ದೇಶದ ಎರಡು ಪ್ರಮುಖ ವಿರೋಧ ಪಕ್ಷಗಳಾದ ಪಿ.ಪಿ.ಪಿ ಮತ್ತು ಮುಸ್ಲಿಂ ಲೀಗ್ (ಶರೀಫ್) ಹತ್ತಿರ ಬಂದು ಅಧ್ಯಕ್ಷ ಮುಶರಫ್ ವಿರುದ್ಧ ಹೋರಾಟ ನಡೆಸುವ ಸಾಧ್ಯತೆ ಹೆಚ್ಚಿದೆ. ರಾಜಕೀಯ ಪಕ್ಷಗಳು ಮತ್ತು ವಕೀಲರು, ವಿದ್ಯಾರ್ಥಿಗಳು, ಮಾನವ ಹಕ್ಕು ಮುಂತಾದ ಚಳುವಳಿಗಳು ಜಂಟಿಯಾಗಿ ಸಂವಿಧಾನದ ಪುನಃಸ್ಥಾಪನೆ ಮತ್ತು ಮುಕ್ತ-ನ್ಯಾಯಯುತ ಚುನಾವಣೆಗೆ ಚಳುವಳಿ ನಡೆಸುವ ಸಾಧ್ಯತೆ ಸಹ ಹೆಚ್ಚಿದೆ. ಅಧ್ಯಕ್ಷ ಮುಶರಫ್ ರ 'ಒಡೆದು ಆಳುವ' ತಂತ್ರಗಾರಿಕೆ 'ಡೆಡ್ ಎಂಡ್' ಗೆ ಬಂದು ನಿಂತಂತಿದೆ.

ಫ್ರಾನ್ಸ್‌ನಲ್ಲಿ ಮುಷ್ಕರಗಳ ಅಲೆ - ಪೆನ್ಶನ್ ಕಡಿತದ ವಿರುದ್ಧ

ಫ್ರಾನ್ಸ್ ನಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರಗಳ ಅಲೆ ಎದ್ದಿದೆ. ಅವರು ಫ್ರಾನ್ಸ್ ನ ಹೊಸ ಅಧ್ಯಕ್ಷ ಸಾರ್ ಕೋಝಿ ಯವರ ಪೆನ್ಶನ್ ಸುಧಾರಣೆ ಹೆಸರಲ್ಲಿ, ಪೆನ್ಶನ್ ಕಡಿತ ಮಾಡುವ ಪ್ರಸ್ತಾವಗಳ ವಿರುದ್ಧ ಸಾರ್ವಜನಿಕ ವಲಯದ ಕಾರ್ಮಿಕರು ಸಮರ ಸಾರಿದ್ದಾರೆ. ರೈಲು ಕಾರ್ಮಿಕರು ದೇಶವ್ಯಾಪಿ ಮುಷ್ಕರ ನವಂಬರ್ 13 ರಂದು ಆರಂಭಿಸಿದ್ದಾರೆ. ಮರುದಿನವೇ ಪ್ಯಾರಿಸ್‌ನ ಮೆಟ್ರೋ, ರಾಷ್ಟ್ರೀಯ ವಿದ್ಯುತ್, ಗ್ಯಾಸ್ ಕಂಪನಿಯ ಕಾರ್ಮಿಕರು ಅವರ ಜತೆ ಸೇರಿದ್ದಾರೆ. ಈ ಮುಷ್ಕರ ಮುಂದುವರೆದರೆ ಫ್ರಾನ್ಸ್‌ನ ಆರ್ಥಿಕ ಮತ್ತು ಜನಜೀವನ ಸ್ಥಗಿತವಾಗಲಿದೆ. ರೈಲು ವ್ಯವಸ್ಥೆ ಫ್ರಾನ್ಸ್ ನ ಜೀವನಾಡಿಯಾಗಿದ್ದು, ಪ್ಯಾರೀಸ್ ನ ಬೀದಿಗಳಲ್ಲಿ ಮೈಲುಗಟ್ಟಲೆ ಟ್ರಾಫಿಕ್ ಜಾಮ್ ಕಂಡು ಬಂದಿದೆ. ಒಂದು ವಾರದೊಳಗೆ ಅಧ್ಯಾಪಕರು, ಆಸ್ಪತ್ರೆ ಸಿಬ್ಬಂದಿ, ಸರಕಾರಿ ಉದ್ಯೋಗಿಗಳು ಮುಷ್ಕರ ಸೇರಲಿದ್ದಾರೆ.

ಇವರೆಲ್ಲರೂ ಪೆನ್ಶನ್ ಸುಧಾರಣೆ ಹೆಸರಲ್ಲಿ, ಪೆನ್ಶನ್ ಕಡಿತ ಮಾಡುವ ಸರಕಾರದ ಪ್ರಸ್ತಾವಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸುತ್ತಿದ್ದಾರೆ. ಹೊಸ ಅಧ್ಯಕ್ಷ ಸಾರ್ ಕೋಝಿ ಯವರ ಪ್ರಸ್ತಾವಗಳ ಪ್ರಕಾರ, ಪೆನ್ಶನ್ ಪ್ರಮಾಣ ಕಡಿತ ಮಾಡುವುದಲ್ಲದೆ, ಅಗತ್ಯ ಸೇವೆಗಳಲ್ಲಿ ಕೆಲಸ ಮಾಡುತ್ತಿದ್ದವರಿಗೆ ಕೊಡಲಾಗುತ್ತಿದ್ದ ವಿಶೇಷ ಪೆನ್ಶನ್ ನಿಲ್ಲಿಸಲಾಗುತ್ತಿದೆ. ಪೆನ್ಶನ್ ಅರ್ಹತೆಯ ನಿಯಮಗಳನ್ನು ಇನ್ನೂ ಬಿಗಿಗೊಳಿಸಲಾಗುತ್ತದೆ. ಪೂರ್ಣ ಪ್ರಮಾಣದ ಪೆನ್ಶನ್ ಪಡೆಯಲು ಕೆಲಸ ಮಾಡಬೇಕಾದ ಅವಧಿಯನ್ನು 40 ವರ್ಷಗಳಿಗೆ ಏರಿಸಲಾಗಿದೆ. ಫ್ರಾನ್ಸ್ ನ ಪ್ರಖ್ಯಾತ ಸಾಗಾಣಿಕೆ ಟ್ರೇಡ್ ಯೂನಿಯನ್‌ಗಳ ಬಲ ಮುರಿಯಲು ಅಧ್ಯಕ್ಷ ಸಾರ್ ಕೋಝಿ ಬೇಕಂತಲೆ ಬಿಗಿ ನಿಲುವು ತಳೆದಿದ್ದಾರೆ. 70 ರ ದಶಕದಲ್ಲಿ ಸಮರಶೀಲ ಕಲ್ಲಿದ್ದಲು ಗಣಿ ಕಾರ್ಮಿಕರ ಮುಷ್ಕರ ಮುರಿದು, ಬ್ರಿಟಿಷ್ ಕಾರ್ಮಿಕ ವರ್ಗವನ್ನು ಹಿಮ್ಮೆಟ್ಟಿಸಿದ್ದು ಸಾರ್ ಕೋಜಿ ಯವರಿಗೆ 'ಮಾದರಿ' ಎನ್ನಲಾಗಿದೆ. ಫ್ರಾನ್ಸ್ ನ ಸಾಗಾಣಿಕೆ ಕಾರ್ಮಿಕರೂ ಈ ಸವಾಲನ್ನು ಎದುರಿಸಲು ನಿರ್ಧರಿಸಿದ್ದಾರೆ. ಮುಷ್ಕರ ನಿಲ್ಲಿಸದೆ ಮಾತುಕತೆ ನಡೆಸುವುದಿಲ್ಲ ಎಂಬ ಸಾರ್ ಕೋಝಿಗೆ, ಸರಕಾರದ ಪ್ರಸ್ತಾವಗಳಲ್ಲಿ ಬದಲಾವಣೆಯ ಸಲಹೆಗಳಿಲ್ಲದೆ ಮುಷ್ಕರ ನಿಲ್ಲಿಸುವುದಿಲ್ಲ ಎಂದಿದ್ದಾರೆ.

ಈಗಾಗಲೇ ವಿಶ್ವವಿದ್ಯಾಲಯ ಸುಧಾರಣೆ ಹೆಸರಲ್ಲಿ ವಿದ್ಯಾರ್ಥಿ-ಶಿಕ್ಷಕರ ಹಲವಾರು ಸವಲತ್ತುಗಳನ್ನು ಕಡಿತ ಗೊಳಿಸುವ ಪ್ರಸ್ತಾವಗಳನ್ನು ವಿರೋಧಿಸಿ ಮುಷ್ಕರ ನಡೆಸುತ್ತಿದ್ದು, ಎರಡನೇ ವಾರಕ್ಕೆ ಕಾಲಿಟ್ಟಿದೆ. ದೇಶದಾದ್ಯಂತ 40 ವಿಶ್ವವಿದ್ಯಾಲಯಗಳು ಈ ಮುಷ್ಕರಗಳ ಕಾರಣದಿಂದ ಮುಚ್ಚಿವೆ. ಈ ಮುಷ್ಕರ ಇನ್ನಷ್ಟು ತೀವ್ರ ಆಗುವ ಸೂಚನೆಗಳು ಇವೆ. ಫ್ರಾನ್ಸ್ ಅಧ್ಯಕ್ಷ ಸಾರ್ ಕೋಝಿ ಆಡಳಿತದಲ್ಲಿ ವರ್ಗ ಹೋರಾಟ ತೀವ್ರವಾಗುವ ಸೂಚನೆಗಳಿವೆ.

ಕೊಲಂಬಿಯಾ ರಾಜಧಾನಿಗೆ ಎಡ ಒಲವು

ಕೊಲಂಬಿಯಾ ಲ್ಯಾಟಿನ್ ಅಮೆರಿಕದಲ್ಲೇ ಬಲಪಂಥೀಯ ಸರ್ಕಾರ ಹೊಂದಿರುವ ಬೆರಳೆಣಿಕೆಯ ದೇಶಗಳಲ್ಲಿ ಒಂದು. ಅಲ್ಲೂ ಸ್ಥಳೀಯ ಮತ್ತು ಪ್ರಾಂತೀಯ ಚುನಾವಣೆಗಳಲ್ಲಿ ಎಡ ಪಂಥೀಯ ಡೆಮೊಕ್ರಾಟಿಕ್ ಪೋಲ್ ಪಕ್ಷ ಮುನ್ನಡೆ ಸಾಧಿಸಿದೆ. ಅತ್ಯಂತ ಪ್ರತಿಷ್ಠಿತ ರಾಜಧಾನಿ ಬೊಗೊಟಾದ ಮೇಯರ್ ಸ್ಥಾನ ಗೆದ್ದು ಕೊಂಡಿದೆ. ಡೆಮೊಕ್ರಾಟಿಕ್ ಪೋಲ್ ಪಕ್ಷದ ಸ್ಯಾಮುವೆಲ್ ಮೋರೆನ್ ಅಧ್ಯಕ್ಷ ಉರಿಬೆ ಅವರ ವಿರುದ್ಧ ವ್ಯಾಪಕ ಪ್ರಚಾರ ಮಾಡಿದರೂ ಗೆದ್ದಿದ್ದಾರೆ. ಚುನಾವಣೆಯಲ್ಲಿ ಅತ್ಯಂತ ಹಿಂಸಾತ್ಮಕ ದಾಳಿ ಎದುರಿಸಿ, 20 ಕ್ಕೂ ಹೆಚ್ಚು ಅಭ್ಯರ್ಥಿಗಳನ್ನು ಕಳೆದುಕೊಂಡಿದ್ದ ಡೆಮೊಕ್ರಾಟಿಕ್ ಪೋಲ್ ಪಕ್ಷ ಅಪಾರ ಜನ ಬೆಂಬಲ ಗಳಿಸಿದೆ. ಸ್ಯಾಮುವೆಲ್ ಮೋರೆನ್ ಮುಂದಿನ ಅಧ್ಯಕ್ಷೀಯ ಅಭ್ಯರ್ಥಿ ಆಗಬಹುದು ಎನ್ನಲಾಗಿದೆ.

ಜಾಗತೀಕರಣಕ್ಕೆ ಸವಾಲು....

ಪುಟ 7 ರಿಂದ

ಚರ್ಚಿಸುವಾಗ, ಒಂದೂವರೆ ದಶಕದಲ್ಲಿ ಅದರ ಕಬಂಧ ಬಾಹುಗಳು ಆಕ್ರಮಿಸಿದ ಎಲ್ಲ ಕ್ಷೇತ್ರಗಳ ಪಕ್ಷಿನೋಟ ಸಮ್ಮೇಳನದಲ್ಲಿ ವ್ಯಕ್ತವಾಯಿತು.

ಆರೋಗ್ಯ ಕ್ಷೇತ್ರದ ಸಂದರ್ಭದಲ್ಲಿ ವಿಶ್ವ ಬ್ಯಾಂಕ್ ಪ್ರಕಟಿಸಿದ 'ದೇಶದ ಕಾರ್ಯಾಚರಣೆಯ ವ್ಯೂಹ' ದ ಟಿಪ್ಪಣಿಯು ಸಂಪೂರ್ಣ ಆರೋಗ್ಯ ಸೇವೆಯ ಬದಲು ಆಯ್ದ ಆರೋಗ್ಯ ಸೇವೆಗೆ ಒತ್ತು ನೀಡಿವೆ. ಉದಾ: ಸಾರ್ವತ್ರಿಕ ರೋಗನಿರೋಧ ಶಕ್ತಿ ವೃದ್ಧಿಗಾಗಿ ಆರೋಗ್ಯ ವರ್ದನೆ (ಇಮ್ಯುನೈಸೇಷನ್)ಯ ಯೋಜನೆಯ ಬದಲು ಕೇವಲ ಪಲ್ಸ್ ಪೋಲಿಯೋಗೆ ಆದ್ಯತೆ ನೀಡುತ್ತಿರುವುದು. ಆರೋಗ್ಯ ಸೇವೆಯ ಬದಲು ಆರೋಗ್ಯ ವಿಮೆ, ಎಲ್ಲವೂ ಕಾರ್ಪೋರೇಟ್ ಕ್ಷೇತ್ರದ ಹಿಡಿತಕ್ಕೆ.

ಶಿಕ್ಷಣ, ಕ್ರೀಡೆ, ಸಾಮಾಜಿಕ ಪ್ರಶ್ನೆಗಳು

ಇದು ಶಿಕ್ಷಣ, ಉದ್ಯೋಗ ಹೀಗೆ ಎಲ್ಲ ಕ್ಷೇತ್ರಗಳಿಗೆ ವ್ಯಾಪಿಸಿದ್ದು ಗಂಭೀರ ಚರ್ಚೆಗೆ ಒಳಗಾಯಿತು. ಇದರ ಪರಿಣಾಮಗಳ ಕುರಿತು ದೇಶದಾದ್ಯಂತ ತೀವ್ರ ಚಳುವಳಿಗೆ ಕರೆ ನೀಡಿದ ಸಮ್ಮೇಳನ. ಈ ಕಾರ್ಯಕ್ಕೆ ಒಟ್ಟು ಜನಸಮುದಾಯವನ್ನು ಅಣಿನೆರೆಸುವ ನಿಟ್ಟಿನಲ್ಲಿ ತೀರ್ಮಾನಗಳನ್ನು ಅಂಗೀಕರಿಸಿತು. ಮತ್ತು ಹಾಗೆ ಮಾಡುತ್ತಲೇ, ಕೆಲವು ವಿಭಾಗಗಳಿಗೆ ವಿಶೇಷ ಆದ್ಯತೆ ನೀಡಬೇಕೆನ್ನುವ ಹಿಂದಿನ ತೀರ್ಮಾನಗಳಿಗೆ ಮತ್ತಷ್ಟು ಒತ್ತು ನೀಡಿತು. ಹಾಗೆಂದೆ ದಲಿತ, ಅಲ್ಪಸಂಖ್ಯಾತ, ಸಾಮಾನ್ಯ ಮಹಿಳೆಯರ ಮಧ್ಯೆ ನಮ್ಮ ಸಂಪರ್ಕವನ್ನು ಹೆಚ್ಚಿಸುವ, ಕಾರ್ಯ ಚಟುವಟಿಕೆಗೆ ವಿಸ್ತರಿಸುವ ಯೋಜನೆ ರೂಪಿಸಲಾಯಿತು. ಆಡು ಮುಟ್ಟದ ಸೊಪ್ಪಿಲ್ಲ ಎಂಬ ನಾಣ್ನುಡಿಯಂತೆ ಜನವಾದಿ ಮಹಿಳೆಯರಿಗೆ ಸಂಬಂಧಿಸಿದ ಎಲ್ಲ ವಿಷಯಗಳತ್ತ ಗಮನ ಹರಿಸಿದೆ ಎಂಬುದಕ್ಕೆ ಸಾಕ್ಷೀಕೃತವಾಗಿ ಆಟಗಾರ್ತಿಯರ ಸಮಸ್ಯೆಗಳ ಕುರಿತು ಸಮ್ಮೇಳನದಲ್ಲಿ ಚರ್ಚಿಸಿತು. ಜಾಗತೀಕರಣದ ಭಾಗವಾಗಿ ಕ್ರೀಡೆ ಕೂಡ ವಾಣಿಜ್ಯೀಕರಣಗೊಳ್ಳುತ್ತಿದ್ದು ಕಾರ್ಪೊರೇಟ್ ಸಂಸ್ಥೆಗಳ ಲಾಭಗಳಿಕೆಯ ಮಾಧ್ಯಮವಾಗಿ ಪರಿಣಮಿಸುತ್ತಿದೆ. ಈ ಕ್ಷೇತ್ರ ಭ್ರಷ್ಟತೆಯ ಕೂಪವಾಗುತ್ತಿದ್ದು, ಆಯ್ಕೆಯ ಮಾನದಂಡಗಳು ಅದಕ್ಕನುಗಣವಾಗಿ ಬದಲಾಗುತ್ತಿವೆ. ಕ್ರೀಡಾ ಕ್ಷೇತ್ರದಲ್ಲಿಯೂ ಲಿಂಗ ಸಂವೇದನಾಶೀಲತೆಯನ್ನು ತರಲು ಸಾಧ್ಯವಾಗುವಂತೆ ಜನವಾದಿ ಕ್ರಮವಹಿಸಬೇಕೆಂಬ ಅಭಿಪ್ರಾಯದೊಂದಿಗೆ ಒಂದು ನಿರ್ಣಯವನ್ನೇ ಅಂಗೀಕರಿಸಲಾಯಿತು. ಅಲ್ಲದೇ ಮೂವರು ಪ್ರತಿಭಾವಂತ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು.

ಸಂಘಟನೆ ಗಂಭೀರವಾಗಿ ಕೈಗೆತ್ತಿಕೊಂಡು ಹೋರಾಟ ನಡೆಸಿದ ಹಲವು ಅಂಶಗಳಿಂದ ವರದಕ್ಷಿಣೆ, ಸ್ವ ಸಹಾಯ ಸಂಘ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾನೂನು(ರೇಗಾ), ನೀರು, ಒಂಟಿ ಮಹಿಳೆಯರ ಸಮಸ್ಯೆಗಳು, ಪಂಚಾಯತ್ ವ್ಯವಸ್ಥೆಗಳ ಕುರಿತು ವಿಶೇಷ ಚರ್ಚೆ ನಡೆಸಲು ಆಯೋಗಗಳ ಮೂಲಕ ಪ್ರಯತ್ನಿಸಲಾಯಿತು.

ಮಾದರಿ ಕೆಲಸ

'ರೇಗಾ'ದ ಕುರಿತು ಕರ್ನಾಟಕದ ಬೀದರ್‌ನಲ್ಲಿ ಜನವಾದಿಯ ಕೆಲಸ ಇಡೀ ರಾಷ್ಟ್ರಕ್ಕೆ ಮಾದರಿ ಎಂದು ಗುರ್ತಿಸಿದ ಕೇಂದ್ರ ಸಮಿತಿ ಉದ್ಘಾಟನಾ ಸಮಾರಂಭದಲ್ಲಿ ಬೀದರ್‌ನ ಗೆಳತಿ ಭಾರತಿ ಯವರನ್ನು ವಿಶೇಷ ಪ್ರತಿನಿಧಿಯಾಗಿ ಆಹ್ವಾನಿಸಿತು ಮತ್ತು ಅವರ ಅನುಭವಗಳನ್ನು ಉದ್ಘಾಟನಾ ಸಮಾರಂಭದಲ್ಲಿ ಹಂಚಿಕೊಳ್ಳಲು ಅವಕಾಶ ನೀಡಲಾಗಿತ್ತು. ಅಂತೆಯೇ ರೇಗಾ ಕುರಿತ ಆಯೋಗದ ನೇತೃತ್ವ ಕಾಂ: ನೀಲಾ.ಕೆ ವಹಿಸಿದ್ದರು.

ಕರ್ನಾಟಕದಿಂದ ಪಾಲ್ಗೊಂಡ 19 ಪ್ರತಿನಿಧಿಗಳಿಗೆ ಇದೊಂದು ಸ್ಫೂರ್ತಿ ನೀಡಿದ ಸಮ್ಮೇಳನವಾಗಿದ್ದು ಸಮ್ಮೇಳನದ ಪ್ರತಿ ಅಂಶಗಳನ್ನು ಕರ್ನಾಟಕದ ನೆಲಕ್ಕಿಳಿಸುವ ನೆಲೆಯಲ್ಲಿ ಇನ್ನಷ್ಟು ಗಟ್ಟಿಯಾದ ಛಾಳಿಗೆ ಇದು.

ಸಮ್ಮೇಳನದ ಕಲಾಪಗಳಿಗೆ ಕಿರೀಟವಿಟ್ಟಂತೆ, ಇಡೀ ಪ್ರತಿನಿಧಿ ಸಮೂಹಕ್ಕೆ ಹೊಸ ಹುರುಪು ನೀಡಲು ಉದ್ಘಾಟನೆಯನ್ನು ಕಾಂ: ಜ್ಯೋತಿ ಬಸು ನಡೆಸಿದ್ದು, ಸಮಾರೋಪ ಬಹಿರಂಗ ಸಭೆಯಲ್ಲಿ ಕಾಂ. ಬುದ್ಧದೇವ್ ಭಟ್ಟಾಚಾರ್ಯ ಪಾಲ್ಗೊಂಡಿದ್ದರು. ಸಂಘಟನೆಯನ್ನು ಕಟ್ಟಿ ಬೆಳೆಸಿದ ಹಿರಿಯ ಚೇತನ ಪಾಪಾ ಉಮಾನಾಥ್ ಇಡೀ ಸಮ್ಮೇಳನದಲ್ಲಿ ಹಾಜರಿದ್ದು ಉತ್ತೇಜನ ನೀಡಿದರು.

...ಆಡಳಿತದ ಚುಕ್ಕಾಣಿ......

...ಪುಟ 9 ರಿಂದ

...ಹೇಳಿದರು. ಆದರೆ ಕೆಲವೇ ನಿಮಿಷಗಳಲ್ಲಿಯೇ ...ಏಕಪಕ್ಷೀಯವಾಗಿ ಆಯಕಟ್ಟಿನ ಅಧಿಕಾರಿಗಳನ್ನು ...ನೇಮಿಸಿಕೊಂಡರು. ಮೈಸೂರಿನ ಮಹಾನಗರ ...ಪಾಲಿಕೆ ಆಯುಕ್ತ ಮಣಿವಣ್ಣನ್‌ನನ್ನು ಶಿವಮೊಗ್ಗಕ್ಕೆ ...ರ್ಗಾಯಿಸಿದರು. ಸೈಕಲ್ ನೀಡಿಕೆ, ಪಡಿತರ ...ಕಾರ್ಡು ಮುಂತಾಗಿ... ಸರ್ಕಾರದ ಹೊಸ ...ಯೋಜನೆಗಳನ್ನು ಪ್ರಕಟಿಸಿದರು. ಇವುಗಳನ್ನು ...ಸಂಪುಟದಲ್ಲಿ ಚರ್ಚಿಸಲಾಯಿತಂತೆ. ಇದು ಎಂತಹ ...ಸಂಪುಟವೆಂದರೆ ಇರುವುದು ನಾಲ್ಕು ಜನ ಬಿಜೆಪಿ ...ಸಚಿವರೇ. ಇದರಲ್ಲಿ ಇನ್ನೊಬ್ಬ ಪಾಲುದಾರ ...ಜೆಡಿ(ಎಸ್) ಇಲ್ಲವೇ ಇಲ್ಲ. ಬಹುಮತ ...ಸಾಬೀತಾಗಿಲ್ಲ, ಹೀಗಿರುವಾಗ ಎಳ್ಳಷ್ಟು ಅಳುಕೂ ...ಇಲ್ಲದೇ ಸಂಪುಟ ನಿರ್ಧಾರಗಳನ್ನು ಕೈಗೊಂಡು ...ಜಾರಿಗೆ ಹೊರಡುತ್ತಿದ್ದಾರೆ. ಇದನ್ನು ಜೆಡಿ(ಎಸ್) ...ನಾಯಕ ಕುಮಾರಸ್ವಾಮಿ ತೀವ್ರವಾಗಿ ಆಕ್ಷೇಪಿಸಿದ ... ಸಮನ್ವಯದಿಂದಲೇ ಸಾಗುವುದಾಗಿ ಯಡ್ಡಿ ...ಹೇಳುತ್ತಿದ್ದಾರೆ. ಸಮನ್ವಯದ ಅರ್ಥವನ್ನೇ ...ಮುಖ್ಯಮಂತ್ರಿಗಳು ಬದಲಾಯಿಸಿಬಿಟ್ಟಿದ್ದಾರೆ. ...ನಾವು ಜೆಡಿ(ಎಸ್)ನ್ನು ಕೇರ್ ಮಾಡೋದಿಲ್ಲ, ...ಏನೇನಿದ್ದರೂ ನಮ್ಮ ಹಿಂದೆ ಇದ್ದು, ಸಿಕ್ಕಷ್ಟು ಅಧಿಕಾರ ...ಅನುಭವಿಸಿ' ಎಂದೇ ಹಗುರವಾದ ಧಮಕಿ ...ಹಾಕಿದ್ದಾರೆ.

...ದೌರ್ಬಲ್ಯಗಳ ನಡುವೆ ಜೆಡಿ(ಎಸ್)

ಇವೆಲ್ಲಾ ಜೆಡಿ(ಎಸ್)ಗೆ ಅರ್ಥವಾಗದ ...ವಿಷಯಗಳೇನಲ್ಲ. ಬಿಜೆಪಿ ಯಂತಹ ದೈತ್ಯಶಕ್ತಿ ...ತಮ್ಮನ್ನು ನುಂಗಿ, ನಾಶ ಮಾಡಬಹುದು ಎಂಬ ...ಭಯ ಜೆಡಿ(ಎಸ್) ನ ನಾಯಕರಲ್ಲಿದೆ. ಆದರೆ ಅದರೊಂದಿಗೆ ಕೈಹಿಡಿದು ಹಿಂಬಾಲಿಸುವ ಅನಿವಾರ್ಯ ಒತ್ತಡದಲ್ಲಿಯು ಸಿಲುಕಿದೆ. ಪಕ್ಷದ ಈಗಿನ ಅದರ ಸ್ವರೂಪವೇ ಈ ಸ್ಥಿತಿಗೆ ತಳ್ಳಿದೆ. ಅದರ ಬಹಳಷ್ಟು ಶಾಸಕರಿಗೆ ತತ್ವ, ರಾಜಕೀಯ ಸಿದ್ಧಾಂತ, ನಾಡಿನ ಭವಿಷ್ಯದತ್ತ ಗಮನವಿಲ್ಲ. ಅಧಿಕಾರ - ಅದಕ್ಕಾಗಿ ಯಾರೊಂದಿಗೂ ಹೋಗಬಹುದೆಂಬ ನಿರ್ಧಾರ. ಗಣಿಯ ಹಣ, ಭೂ ಮಾಫಿಯಾಗಳ ಹಣಕ್ಕೆ ಮಣಿಯುವ ಮನೋಭಾವ. ಹೀಗಾಗಿ ಜೆಡಿ(ಎಸ್) ನಾಯಕರೂ ಶಾಸಕಾಂಗ ಪಕ್ಷದ ಮೇಲೆ ಹಿಡಿತ ಕಳೆದುಕೊಂಡಿದ್ದಾರೆ. ಶಾಸಕರು ಆಡಿಸಿದಂತೆ ಪಕ್ಷದ ನಾಯಕತ್ವ ಅಲ್ಲಾಡಬೇಕಾದ ಸ್ಥಿತಿ ತಲುಪಿದೆ. ಹೀಗಿರುವುದರಿಂದಲೇ ಒಂದೆಡೆ ಕಾಂಗ್ರೆಸ್, ಇನ್ನೊಂದೆಡೆ ಬಿಜೆಪಿ ಜೆಡಿ(ಎಸ್)ನ್ನು ತುಂಡರಿಸಿ ನುಂಗಲು ಸತತ ಯತ್ನಿಸುತ್ತಲೇ ಇವೆ. ಈಗಲೂ ಕಾಂಗ್ರೆಸ್ - ಬಿಜೆಪಿ ಹೊರತುಪಡಿಸಿದ ಸೆಕ್ಯುಲರ್ ರಾಜಕೀಯ ಶಕ್ತಿಯೊಂದು ದುರ್ಬಲವಾಗಿರುವುದು ರಾಜ್ಯದ, ದೇಶದ ರಾಜಕಾರಣದಲ್ಲಿ ಒಂದು ಹೊಡೆತವೇ. ಜೆಡಿ(ಎಸ್)ನ ದುಸ್ಥಿತಿಗೆ ಆ ಪಕ್ಷವೂ ಕಾರಣ. ರಾಜಕೀಯ ಹಣಾಹಣಿ ಕೇವಲ ಕಾಂಗ್ರೆಸ್ - ಬಿಜೆಪಿ ನಡುವೆಯೇ ಕ್ರೋಢೀಕರಣಗೊಳ್ಳುವಂತೆ ಸತತವಾಗಿ ಪ್ರಯತ್ನಿಸಲಾಗುತ್ತಿದೆ.

ಪಕ್ಷಗಳ ನಡುವೆ ಘರ್ಷಣೆ

ಇಂತಹ ಸ್ಥಿತಿಯಲ್ಲಿ ಜೆಡಿ(ಎಸ್) ಪಕ್ಷ - ಬಿಜೆಪಿಯೊಂದಿಗೆ ಪೂರ್ಣವಾಗಿ ಗುರುತಿಸಿಕೊಳ್ಳಲು ಹಿಂದೇಟು ಹಾಕುತ್ತಿದೆ. (ಕಾರಣ ಮತದಾರರ ತಳಹದಿ, ಅಲ್ಪಸಂಖ್ಯಾತರು ದೂರ ಸರಿದಾರೆಂಬ ಭಯ) ಜೆಡಿ(ಎಸ್) ಶಾಸಕರು ಪ್ರತ್ಯೇಕವಾಗಿ 21 ರಂದು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸುವರಂತೆ. ಅಂದು ನಾಲ್ಕು ಲಕ್ಷ ಜನರನ್ನು ಅರಮನೆ ಮೈದಾನದಲ್ಲಿ ಸೇರಿಸಲಾಗುವುದಂತೆ. ಬಿಜೆಪಿ ಧರ್ಮಯುದ್ಧ ಮತ್ತು ಕಾಂಗ್ರೆಸ್ ಜನಾಂದೋಲನಗಳಿಗೆ ಹೀಗೆ ಪ್ರತ್ಯುತ್ತರ ಇದು ನೀಡಲಿದೆ ಎಂದು ಕುಮಾರಸ್ವಾಮಿ ಹೇಳುತ್ತಿದ್ದಾರೆ. ಅಂತೂ ತನ್ನ ನೆಲೆ-ಬಲ ಪ್ರದರ್ಶನಕ್ಕೆ ಜೆಡಿ(ಎಸ್) ಸಜ್ಜಾಗುತ್ತಿದೆ. ಇಷ್ಟಿರುವಾಗಲೂ ಜೆಡಿ(ಎಸ್) ಒಳಗಿನ ಗೊಂದಲಗಳು ಇಲ್ಲದಿಲ್ಲ. ಸಚಿವರ ಪಟ್ಟಿಯಿಂದ ಹಿಡಿದು ಉಪಮುಖ್ಯಮಂತ್ರಿ ಯಾರಾಗಬೇಕೆಂಬ ಬಗ್ಗೆಯೂ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಮಾಜಿ ಪ್ರಧಾನಿಗಳಿಗೂ ಇಲ್ಲಿ ಏನನ್ನಾದರೂ ಮಾಡಲು ಅಲ್ಪ ಅವಕಾಶಗಳು ಮಾತ್ರ ಇವೆ. ಬಿಜೆಪಿಯ ಮುಂದೆಯೂ ಪ್ರಸ್ತಾಪಿಸಿದ 12 ಶರತ್ತುಗಳನ್ನು (ಈಗ 21) ಗಂಭೀರವಾಗಿ ತೆಗೆದುಕೊಳ್ಳಲು ನೆನಪಿಸಿದ್ದಾರೆ. ಆದರೆ ದಳದೊಳಗಿನ ದೌರ್ಬಲ್ಯ ಕಂಡಿರುವ ಬಿಜೆಪಿ ರಾಷ್ಟ್ರೀಯ ನಾಯಕರು, ಯಡಿಯೂರಪ್ಪನವರು ಇವುಗಳನ್ನು ತಳ್ಳಿಹಾಕಿದ್ದಾರೆ. ಇವನ್ನು ಒಪ್ಪದಿದ್ದರೆ ಬಹುಮತ ಸಾಬೀತು ಪಡಿಸುವ ದಿನವೇ ಸರ್ಕಾರ ಉರುಳಬಹುದೆಂದು ಜೆಡಿ(ಎಸ್) ಒತ್ತಡ ಸೃಷ್ಟಿಸಿದೆ. ಇದು ಈ ಮೈತ್ರಿ ಸರ್ಕಾರದ ಎರಡು ಪಕ್ಷಗಳ ನಡುವಿನ ಘರ್ಷಣೆ.

ಈ ನಡುವೆ ತನ್ನ ಹೊಣೆಗೇಡಿತನದಿಂದ ಬಿಜೆಪಿ-ಜೆಡಿ(ಎಸ್) ಮರು ಮೈತ್ರಿ-ಏರ್ಪಡಲು ಅವಕಾಶ ನೀಡಿದ ಕಾಂಗ್ರೆಸ್ ತಾನು ಒಂದು ಜನಾಂದೋಲನವೆಂದು ಸಭೆ ನಡೆಸಿ ಚುನಾವಣಾ ನಿರೀಕ್ಷೆಯಲ್ಲಿ ಇಳಿದಿದೆ. ಕೆಲವು ಪದಾಧಿಕಾರಿಗಳನ್ನು ನೇಮಿಸಿ ಹುರುಪು ತುಂಬಲು ಯತ್ನಿಸುತ್ತಿದೆ. ಆದರೆ ಜನರ ಪ್ರಶ್ನೆಗಳತ್ತ ಕಾಳಜಿಯಿಲ್ಲ.

ಆಂದೋಲನ

ಈ ಸನ್ನಿವೇಶದಲ್ಲಿ ಸರ್ಕಾರದ ಅತಂತ್ರ ಸ್ಥಿತಿ - ಅಧಿಕಾರಶಾಹಿಗೆ ಹೆಚ್ಚಿನ ಅವಕಾಶ ನೀಡುವುದು. ಜನರ ಸಮಸ್ಯೆಗಳೂ ನಿರ್ಲಕ್ಷಕ್ಕೆ ಒಳಗಾಗುವವು.



ಮೋದಿ ಮಾದರಿ ಅನುಸರಿಸಬೇಕಂತೆ!

ಪ್ರಮಾಣ ವಚನದ ಸಮಾರಂಭ ಮುಗಿದ ಬಳಿಕ ಹೊರಡುವಾಗ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ, ಯಡಿಯೂರಪ್ಪನವರು 'ಗುಜರಾತ್ ಮಾದರಿ' ಅನುಸರಿಸಲೆಂದು ಹೇಳಿದರು. ಗುಜರಾತ್ ಮಾದರಿ ಎಂದರೆ ಅಲ್ಪಸಂಖ್ಯಾತರ ಮಾರಣಹೋಮ, ಕೋಮುದ್ವೇಷದ ದಳ್ಳುರಿಯ ಸದಾ ಮೆರವಣಿಗೆ, ಅಂದರೆ ಸೌಹಾರ್ದ ಕರ್ನಾಟಕ. ನರಹಂತಕರ ಕುಖ್ಯಾತ ಗುಜರಾತ್ ಆಗಬೇಕೆ? ಅದಕ್ಕೆ ಬಿಡಬೇಕೆ? ಆ ಹೇಳಿಕೆಯನ್ನು ಪ್ರಶ್ನಿಸಿದಾಗ ಬಿಜೆಪಿಯ ನಾಯಕರು ಅಭಿವೃದ್ಧಿಯ ಮಾದರಿ ಎಂದೆಲ್ಲಾ ತರತರಹವಾಗಿ 'ಮಾದರಿ'ಯನ್ನು ವ್ಯಾಖ್ಯಾನಿಸುತ್ತಿರುವುದು ವಂಚನೆಯೆಂಬುದಕ್ಕೆ ಯಾವ ಅನುಮಾನವೂ ಬೇಕಿಲ್ಲ.

ಇಂತಹ ಸ್ಥಿತಿಯಲ್ಲಿ ಜನತೆಯ ಪ್ರಬಲ ಆಂದೋಲನ ನಡೆಯಬೇಕು. ರಾಜಕೀಯವಾಗಿಯೂ ಕೋಮುವಾದಿಗಳ ಯತ್ನಗಳ ವಿರುದ್ಧ ಹೋರಾಟಕ್ಕೆ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಇಳಿಯಬೇಕು. ○

ನಂದಿ ಗ್ರಾಮದಲ್ಲಿ ನಡೆಯುತ್ತಿರುವುದೇನು?

...ಪುಟ 8 ರಿಂದ

...ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ...ಹೇಳಿದೆ. ಅಂದಿನ ಘಟನೆ ನಡೆದ ಸಂದರ್ಭದಲ್ಲಿ ...ಕರ್ತವ್ಯದ ಮೇಲಿದ್ದ ಎಲ್ಲ ಪೊಲೀಸ್ ...ಅಧಿಕಾರಿಗಳನ್ನು ಸರ್ಕಾರವೇ ವರ್ಗಾವಣೆ ಮಾಡಿದೆ.

ಇಷ್ಟೆಲ್ಲಾ ಆದ ಮೇಲೂ ಪೊಲೀಸರನ್ನು ...ನಂದಿಗ್ರಾಮಕ್ಕೆ ಬಿಡಗೊಡದೆ ವಿರೋಧ ಪಕ್ಷಗಳು ...ಆರೋಪಿಸುತ್ತಿವೆ ಎಂದರೆ ಏನದರರ್ಥ. ...ರಾಜ್ಯದೊಳಗೊಂದು ರಾಜ್ಯವಾಗಿ ...ನಂದಿಗ್ರಾಮವನ್ನು ರೂಪಿಸುವ ಹಿಂದಿರುವ ...ಪ್ರಚೋದನೆ ಏನು? ಅಲ್ಲಿ ಕಾನೂನು ಆಡಳಿತ ...ಸ್ಥಾಪನೆ ಮಾಡಬಾರದೆ.

...ಮಾವೋವಾದಿಗಳ ಆಕ್ರಮಣದಲ್ಲಿ ನಂದಿಗ್ರಾಮ:

...- ರಾಜಕೀಯ ಪಕ್ಷಗಳು, ಸೋಕಾಲ್ಡ್ ಜನಪರ ...ಹೋರಾಟಗಾರರು ಇದನ್ನು ಒಪ್ಪುತ್ತಾರೋ ಇಲ್ಲವೋ. ...ನಂದಿಗ್ರಾಮ ಇನ್ನೂ ಮಾವೋವಾದಿಗಳ ...ಕಪಿಮುಷ್ಠಿಯಲ್ಲಿದೆ. ಪ್ರಜಾಪ್ರಭುತ್ವದ ಕುರಿತು ...ಮಾತನಾಡುವವರು ಅಲ್ಲಿನ ಸಾಮಾನ್ಯ ಜನರ ...ಮಾನವ ಹಕ್ಕುಗಳ ಕುರಿತು ಮಾತನಾಡುವುದೇ ಇಲ್ಲ.

... ನಂದಿಗ್ರಾಮದಲ್ಲಿ "ಫ್ರೀ ಪೀಪಲ್ಸ್ ಜೋನ್" ...ಸ್ಥಾಪನೆ ಮಾಡಲಾಗಿದೆ ಎಂದು ಮಾವೋವಾದಿಗಳ ...ದಾಖಲೆಯೊಂದು ಹೇಳಿರುವುದಾಗಿ 2007ರ ...ನವೆಂಬರ್ 8ರಂದು ದಿ ಎಕನಾಮಿಕ್ ಟೈಮ್ಸ್ ವರದಿ ...ಮಾಡಿದೆ. ಈಗ ನಂದಿಗ್ರಾಮದಲ್ಲಿ ...ನಡೆಯುತ್ತಿರುವುದು ಸಿಪಿಎಂ ಪಕ್ಷದ ವಿರುದ್ಧ ಅಲ್ಲ. ...ಅಲ್ಲಿನ ಆಡಳಿತ ಮತ್ತು ಪ್ರತೀಕಾರ ತೀರಿಸಿಕೊಳ್ಳಲು ...ಅಲ್ಲಿನ ಜನತೆಯ ವಿರುದ್ಧ ನಡೆಯುತ್ತಿರುವ ...ಘರ್ಷಣೆಗಳಾಗಿವೆ ಎಂತಲೂ ಈ ದಾಖಲೆಯಲ್ಲಿ ...ಉಲ್ಲೇಖಿಸಲಾಗಿದೆ. ಸಶಸ್ತ್ರ ಪೊಲೀಸರ ವಿರುದ್ಧ ಘರ್ಷಣೆಗಳನ್ನು ರೂಪಿಸಲಾಗಿದೆ. "ಇದನ್ನು ತೃಣಮೂಲ ಕಾಂಗ್ರೆಸ್ ಮಾಡಿಸುತ್ತಿದೆ ಎಂದು ಸಿಪಿಎಂ ಪಕ್ಷ ಹೇಳುತ್ತಿದೆ. ಕೆಲವು ತೃಣ ಮೂಲ ಕಾಂಗ್ರೆಸ್ ಮುಖಂಡರು ತಾವು ಈ ಹೋರಾಟದ ನಾಯಕರೆಂದು ಹೇಳಿಕೊಳ್ಳುತ್ತಿದ್ದು ಅದೆಲ್ಲ ಸುಳ್ಳು" ಎಂದು ಮಾವೋವಾದಿಗಳ ಈ ದಾಖಲೆಯಲ್ಲೇ ಪ್ರಸ್ತಾವಿಸಲಾಗಿದೆ. "ತೃಣಮೂಲ ಕಾಂಗ್ರೆಸ್ ನೇತೃತ್ವದ ಭೂಮಿ ಉಳಿಸಿ ಹೋರಾಟ ಸಮಿತಿ ನಡೆಸುತ್ತಿರುವ ಹೋರಾಟ ಎನ್ನಲಾಗುತ್ತಿದೆ. ಆದರೆ ಇಲ್ಲಿ ನಡೆಯುತ್ತಿರುವುದು ರಾಜ್ಯದ ವಿರುದ್ಧ ಸಶಸ್ತ್ರ ಹೋರಾಟ" ಎಂದು ಈ ದಾಖಲೆ ಹೇಳಿದೆ.

ಕೇಂದ್ರ ಮೀಸಲು ಪಡೆಯ ಪ್ರವೇಶ, ರಾಜ್ಯ ಸರ್ಕಾರದ ಪ್ರಯತ್ನ, ಜನರ ದೃಢತೆಯಿಂದಾಗಿ ಇದೀಗ ಅಲ್ಲಿ ಪರಿಸ್ಥಿತಿ ಬದಲಾಗುತ್ತಿದೆ. ನಿರಾಶ್ರಿತರು ಗ್ರಾಮ ಪ್ರವೇಶಿಸುತ್ತಿದ್ದಾರೆ.

ನಂದಿಗ್ರಾಮ ಸಮಸ್ಯೆಗೆ ಎರಡು ರೀತಿಯ ಕಾರ್ಯತಂತ್ರಗಳನ್ನು ರೂಪಿಸಲಾಗಿದೆ. ಮೊದಲನೆಯದು ಆಂಧ್ರಪ್ರದೇಶ, ಒರಿಸ್ಸಾ, ಚತ್ತೀಸ್‌ಘಡ ಮತ್ತು ಜಾರ್ಖಂಡ್‌ನ್ನು ಒಳಗೊಂಡಂತೆ ಕಾರ್ಯತಂತ್ರ ಕಾರಿಡಾರ್ ರೂಪಿಸುವುದು. ಸರ್ಕಾರದ ಜನಪರ ಯೋಜನೆಗಳನ್ನು ಜಾರಿಗೊಳಿಸಲು ಮಾವೋವಾದಿಗಳ ಕೃತ್ಯಗಳನ್ನು ನಿರಂತರವಾಗಿ ಹತ್ತಿಕ್ಕುವುದಾಗಿದೆ.

ನಂದಿಗ್ರಾಮದಲ್ಲಿ ಕೇಂದ್ರೀಯ ಪಡೆಗಳು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದು, ಅಲ್ಲಿ ಮಾವೋವಾದಿಗಳು ಪ್ರವೇಶಿಸಿರುವುದನ್ನು ಖಾತರಿ ಪಡಿಸಿದೆ. ಜೆಎಂಎಂ ಸಂಸದ ಸುನಿಲ್ ಹತ್ಯೆ ಪ್ರಕರಣದ ಆರೋಪಿ ರಂಜಿತ್ ಪಾಲ್ ನಂದಿಗ್ರಾಮದಲ್ಲಿ ಕಾಣಿಸಿಕೊಂಡಿರುವುದನ್ನು ಕೇಂದ್ರ ರಕ್ಷಣಾ ಪಡೆಗಳು ನೋಡಿವೆ. ನಂದಿಗ್ರಾಮದಲ್ಲಿ ಮಾವೋವಾದಿಗಳು ಇರುವುದನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರು ದೃಢೀಕರಿಸಿದ್ದಾರೆ.

ಸೈದ್ಧಾಂತಿಕವಾಗಿ ದಿವಾಳಿಯಾಗಿರುವ ಮಾವೋವಾದಿಗಳು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಹೋರಾಟ ಮಾಡಲು ಸಾಧ್ಯವಿಲ್ಲ. ಅವರದೇನಿದ್ದರೂ ಹಿಂಸಾಚಾರದ ಹಾದಿಯಾಗಿದೆ. ಸಿಪಿಎಂ ಪಕ್ಷದ ಆಡಳಿತದಲ್ಲಿ ಅಲ್ಲಿನ ಜನತೆ ಪಡೆದಿರುವ ಸ್ವಾತಂತ್ರವನ್ನು ದೈಹಿಕ ಬಲ ಬಳಸಿ ಹಿಡಿತದಲ್ಲಿಟ್ಟುಕೊಳ್ಳಬೇಕೆಂಬುದೇ ತೃಣಮೂಲ ಕಾಂಗ್ರೆಸ್‌ನ ಪಿತೂರಿಯಾಗಿದೆ. ನಂದಿಗ್ರಾಮವನ್ನು ಮಾವೋವಾದಿಗಳ ಹಿಡಿತದಿಂದ ಬಿಡಿಸುವ ಸಂದರ್ಭದಲ್ಲಿ ನಡೆದ ಘಟನೆಗಳನ್ನು ಹಿಡಿದುಕೊಂಡು ಇಷ್ಟೆಲ್ಲಾ ಅಬ್ಬರಗಳನ್ನು ಮಾಡುತ್ತಿದ್ದಾರೆ. ಗ್ರಾಮಗಳನ್ನು ತ್ಯಜಿಸಿದ್ದ 3,500 ಮಂದಿ ಮತ್ತೆ ಅವರ ಮನೆಗಳಿಗೆ ಹಿಂದಿರುಗಿದ್ದಾರೆ. ಮಾವೋವಾದಿಗಳು ಸಶಸ್ತ್ರ ದಾಳಿಗಳನ್ನು ಕೈಗೊಂಡರೂ ನಮ್ಮ ಗ್ರಾಮಗಳಿಗೆ ಹಿಂತಿರುಗುವ ಧೈರ್ಯವನ್ನು ಅವರು ಪಡೆದುಕೊಂಡಿದ್ದಾರೆ.

ರಾಜ್ಯಪಾಲರು ಮಾಡಿದ್ದೇನು?

ನಂದಿಗ್ರಾಮದ ಜನತೆ ಮನೆಗಳಿಗೆ ಹಿಂತಿರುಗುವಾಗ ಹಿಂಸಾಚಾರದ ಘಟನೆಗಳು ನಡೆದಿದೆ ಎಂದು ಅಲ್ಲಿನ ರಾಜ್ಯಪಾಲರು ಮಾಧ್ಯಮಗಳ ಮುಂದೆ ವಿಷಾದ ವ್ಯಕ್ತಪಡಿಸಿದ್ದಾರೆ. ಈ ಹೇಳಿಕೆ ಸಂಪೂರ್ಣವಾಗಿ ಅವಾಸ್ತವವಾಗಿದೆ. ಸಂವಿಧಾನಿಕವಾಗಿಯೂ ಸರಿಯಾದ ಕ್ರಮವಲ್ಲ. ರಾಜ್ಯಪಾಲರ ಈ ಹೇಳಿಕೆಯಿಂದ ಅಲ್ಲಿ ಶಾಂತಿ ಮರುಸ್ಥಾಪನೆಗೆ ಧಕ್ಕೆಯಾಗಿದೆ. ಇದು ವಿರೋಧಿ ಗುಂಪುಗಳನ್ನು ಇನ್ನಷ್ಟು ಪ್ರಚೋದಿಸಿದಂತಾಗಿದೆ.

ಜನತೆ ತಮ್ಮ ಗ್ರಾಮಗಳಿಗೆ ಹಿಂತಿರುಗುವಾಗ ರಾಜ್ಯಪಾಲರು ಹೇಳಿಕೆ ನೀಡಿರುವುದು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳಿಗೆ ಧಕ್ಕೆ ಉಂಟುಮಾಡಿದಂತಾಗಿದೆ. ಬಲವಂತವಾಗಿ ತಮ್ಮ ಮನೆಗಳಿಂದ ಹೊರದಬ್ಬಿದವರಿಗೆ ಮತ್ತೆ ಹಿಂತಿರುಗಲು ಅವಕಾಶ ನೀಡದಿದ್ದರೆ ಅವರ ಹಕ್ಕುಗಳನ್ನು ಹೇಗೆ ರಕ್ಷಿಸಿದಂತಾಗುತ್ತದೆ.

ಎನ್‌ಡಿಎ ನಿಯೋಗ ಮೈತ್ರಿ ಪಕ್ಷ ತೃಣಮೂಲ ಕಾಂಗ್ರೆಸ್‌ನ್ನು ಒಲಿಸಿಕೊಳ್ಳುವ ರಾಜಕೀಯ ಉದ್ದೇಶದಿಂದಷ್ಟೇ ಅಲ್ಲಿಗೆ ಭೇಟಿ ನೀಡಿತ್ತು. ಈ ನಿಯೋಗ ಎಂದಿನಂತೆ ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತ ಜಾರಿ ಮಾಡಬೇಕೆಂದು ಆಗ್ರಹಿಸಿದೆ. 294 ಸದಸ್ಯರಿರುವ ಶಾಸನ ಸಭೆಯಲ್ಲಿ ಮೂರನೇ ಎರಡರಷ್ಟು ಬಹುಮತ ಇರುವಾಗ ರಾಷ್ಟ್ರಪತಿ ಆಡಳಿತ ಜಾರಿ ಹೇಗೆ ಸಾಧ್ಯ. ಗುಜರಾತ್‌ನಲ್ಲಿ ಸಾವಿರಾರು ಮಂದಿಯನ್ನು ಹತ್ಯೆ ಮಾಡಿದ ಆರೋಪಿಗಳೇ ಮಾಧ್ಯಮವೊಂದಕ್ಕೆ ಹೇಳಿಕೆ ನೀಡಿರುವುದು ಬಹಿರಂಗವಾಗಿರುವಾಗ ಗುಜರಾತ್‌ನಲ್ಲಿ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಹೇಳಿಕೆ ನೀಡದ ಆಡ್ವಾಣಿ ನಂದಿಗ್ರಾಮ ಘಟನೆಗೆ ರಾಷ್ಟ್ರಪತಿ ಆಡಳಿತ ಹೇರಬೇಕೆಂದು ಹೇಳಿರುವುದು ಎಷ್ಟು ವಿಪರ್ಯಾಸ. ಮುಸ್ಲಿಮರನ್ನು ಹತ್ಯೆ ಮಾಡಿ ಬಂದವರನ್ನು ಗುಜರಾತ್ ಮುಖ್ಯಮಂತ್ರಿ ನರೇಂದ್ರಮೋದಿ ಪ್ರಶಂಸಿಸಿರುವ ಕುರಿತು ಇದೇ ಆಡ್ವಾಣಿ ಒಂದು ಮಾತನ್ನೂ ಹೇಳಿಲ್ಲ.



ಧ್ರುವ ಎಂಬ ಹುಟ್ಟು ಕಿವುಡ, ಮೂಕನ 'ಸ್ನೇಹಾಂಜಲಿ'

ಚಿತ್ರರಂಗದ ಇತಿಹಾಸದಲ್ಲಿ ಕನ್ನಡ ಚಿತ್ರರಂಗದ ಮಂದಿ ಮೂರು ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಜಗತ್ತಿನ ಅತಿ ಕಿರಿಯ ನಿರ್ದೇಶಕ ಎಂಬ ಖ್ಯಾತಿಯನ್ನು 'ಕೇರ್ ಆಫ್ ಫುಟ್‌ಪಾತ್' ಚಿತ್ರದ ಮೂಲಕ ಪಡೆದ ಮಾ: ಕಿಶನ್, ಪ್ರಥಮ ಚಿತ್ರದ ಅಭಿನಯಕ್ಕೆ 'ಅಂತರರಾಷ್ಟ್ರೀಯ ಚಲನಚಿತ್ರೋತ್ಸವ'ದಲ್ಲಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದು ದಿ: ಶಂಕರ್‌ನಾಗ್, ಇದೀಗ ಹುಟ್ಟು ಕಿವುಡ ಮತ್ತು ಮೂಕನಾದ ಧ್ರುವ ನಾಯಕನಟರಾಗಿ ಅಭಿನಯಿಸಿ ದಾಖಲೆ ಬರೆದಿದ್ದಾರೆ.

ಈ ವಿಷಯ ಕಿವಿಗೆ ಬಿದ್ದೊಡನೆ ಥಿಯೇಟರ್‌ಗೆ ಹೋಗಿ ನೋಡಿದೆ. ಚಿತ್ರ (Complete 'Normal' ಆಗಿದೆ! ನಾಲ್ಕು ಮೆಲೋಡಿಯಸ್ Including Duct) ಟ್ರಾಕ್, ಎರಡು ಫೈಟ್, ರೊಮಾನ್ಸ್, ಸೆಂಟಿಮೆಂಟ್, ಕಾಮಿಡಿ ಒಟ್ಟಿನಲ್ಲಿ ಒಂದು ಕಮರ್ಷಿಯಲ್ ಚಿತ್ರಕ್ಕೆ ಇವತ್ತು ಏನೇನು ಬೇಕೋ ಅದೆಲ್ಲಾ 'ಸ್ನೇಹಾಂಜಲಿ' ಯಲ್ಲಿದೆ. ಕದ್ದದ್ದು-ಸ್ವಂತದ್ದು ಸೇರಿಸಿ ರಾಜೇಶ್ ರಾಮನಾಥ್ ಒಳ್ಳೆಯ ಟ್ಯೂನ್ ಹಾಕಿದ್ದಾರೆ. 'ಐ ಲವ್ ಯು ಅಂದಿದೆ ಮನಸು' ಹಾಡೊಂದು ನೆನಪಿನಲ್ಲುಳಿಯುತ್ತದೆ. ಯುವ ಜೋಡಿ ನಿರ್ದೇಶಕರಿಬ್ಬರು ಸಿನಿಮಾ ಗತಿ ಬದಲಾಯಿಸಬಲ್ಲ ಸಂಭಾಷಣೆಯಂತೆ ಸಂದರ್ಭ ಬಂದಾಗ ಬೇರೆ ಬೇರೆ ಶಾಟ್‌ಗಳನ್ನು ಒಂದರೊಳಗೊಂದು ಹೆಣೆದು ಗಂಭೀರತೆಗೆ ಚ್ಯುತಿ ಬಾರದಂತೆ ಭಾರೀ ಸೂಕ್ಷ್ಮತೆಯಿಂದ ಚಿತ್ರಿಸಿದ್ದಾರೆ. ಛಾಯಾಗ್ರಾಹಕ ವಿಷ್ಣುವರ್ಧನ್ ಕ್ಯಾಮರಾವನ್ನು ಸಾಮಾನ್ಯವಾಗಿ ಮಂಜಿನಲ್ಲೇ ತೋರಿಸಿದ್ದಾರೆ. ಅನಂತನಾಗ್, ದೊಡ್ಡಣ್ಣ, ಶರಣ್, ಮಿಮಿಕ್ರಿ ರಾಜಗೋಪಾಲ್ ಮುಂತಾದವರು ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಭಾರಿ ವಿಶಿಷ್ಟ ಕಥಾ ವಸ್ತು ಹೊಂದಿರದ ಇಬ್ಬರು ಸ್ನೇಹಿತರು ಹಾಗೂ ಅವರಿಬ್ಬರ ಮಕ್ಕಳ ಸುತ್ತ ಗಿರಿಕಿ ಹೊಡೆಯುವ ಸಾಮಾನ್ಯ ಕಥೆಯನ್ನಷ್ಟೇ ಚಿತ್ರ



ಹೊಂದಿದೆ.

ಹಿರಿಯ ಸ್ನೇಹಿತರಿಬ್ಬರು ತಮ್ಮ ಮಕ್ಕಳು ಪರಸ್ಪರ ಮದುವೆಯಾಗಲಿ ಎಂದರು ಬಯಸುತ್ತಾರೆ. ಮಕ್ಕಳು ಮೊದಲು ಒಪ್ಪುವುದಿಲ್ಲ. ನಂತರ ಅವರ ನಡುವೆ ಪ್ರೀತಿ ಚಿಗುರುತ್ತದೆ. ಆಗ ಅವರ ಅಪ್ಪಂದಿರು ಒಪ್ಪುವುದಿಲ್ಲ. ಹಲವು ತಿರುವುಗಳ ನಂತರ ಸುಖಾಂತ್ಯ.

ಇಷ್ಟಿದ್ದರೂ ನಾವು ಮುಖ್ಯವಾಗಿ ಚಿಂತಿಸಬೇಕಾದ್ದು ಧ್ರುವನ ಬಗ್ಗೆ, ಕುರುಡನಾದ ಮೇಲೆ ಜಾನ್ ಮಿಲ್ಟನ್ 'ಪ್ಯಾರಡೈಸ್ ಲಾಸ್ಟ್' ಅನ್ನು ರಚಿಸಿದ. ಅಮೇರಿಕಾದ ಆ್ಯನಿಜೆಫ್ ಎರಡು ಕೈಗಳನ್ನು ಕಳೆದುಕೊಂಡ ಮೇಲೆ ಕಾಲಿನಲ್ಲಿ ಕಾರನ್ನು ಓಡಿಸಿದಳು ಎನ್ನುವಾಗಲೇ ಅಚ್ಚರಿಪಡುವ ನಾವು ಈ ಮನುಷ್ಯನನ್ನು ಬಹಳ ವಿಶೇಷವೆಂದೇ ನೋಡಬೇಕು. ಯಾಕೆಂದರೆ ಮಿಲ್ಟನ್ ಮೊದಲು ಈ ಪ್ರಪಂಚವನ್ನು ನೋಡಿದ ಆಮೇಲೆ ಕುರುಡಾದ. ಆದರೆ ಧ್ರುವ ತನ್ನ ಜೀವನದಲ್ಲಿ ಯಾವತ್ತೂ ಮಾತನಾಡದೆ, ಪದವನ್ನೇ ಕೇಳದೆ ಕೇವಲ ತುಟಿಗಳ ಚಲನೆಯನ್ನೇ ಅಭ್ಯಾಸ ಮಾಡಿ ಸಾಧನೆಗೈದಿರುವುದು ವಿಶಿಷ್ಟವಾದುದು. ಒಂದೆರಡು ಮೂರು ಬಾರಿ ಬಹಳ ಮುಗ್ಧನಂತೆ ವರ್ತಿಸಿರುವುದು ಬಿಟ್ಟರೆ ಧ್ರುವ ಎಲ್ಲಿಯೂ ಎಡವಿಲ್ಲ. ಸಿನಿಮಾದಂತೆ ಕ್ರಿಕೆಟ್‌ನಲ್ಲಿಯೂ ಸಾಧನೆ ಮಾಡಿರುವ ಧ್ರುವ ಕಿವುಡ ಮತ್ತು ಮೂಕರ ವಿಶ್ವಕಪ್‌ನಲ್ಲಿ ಭಾರತವನ್ನು ಮುನ್ನಡೆಸಿ ಕಪ್ ತಂದುಕೊಟ್ಟಿದ್ದಾನೆ. ಇಂತಹ ಅಪರೂಪದ ಕಲಾವಿದ-ಕ್ರೀಡಾಪಟು ಅಭಿನಯಿಸಿದ 'ಸ್ನೇಹಾಂಜಲಿ' ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆದುಕೊಳ್ಳಲು ವಿಫಲವಾಗಿದೆ. ಇನ್ನೂ ಗಾಂಧಿ ನಗರಿ ಅವರನ್ನು ಹೇಗೆ ಸ್ವೀಕರಿಸುತ್ತದೋ ಗೊತ್ತಿಲ್ಲ. ಆದರೆ ಧ್ರುವನಂತೂ ಪ್ರತಿಭಾವಂತ ಎಂದು ಒಪ್ಪಲೇಬೇಕು. ಇಂತಹ ಉದಾಹರಣೆಗೆ ನಮ್ಮ ಮುಂದೆ ಯಾವಾಗಲೂ ಚಾಲ್ತಿಯಲ್ಲಿರುವ ಏಕೈಕ ವ್ಯಕ್ತಿಯೆಂದರೆ ಜರ್ಮನಿಯ ಸಂಗೀತಜ್ಞ ಬೆಥೋವನ್ ಮಾತ್ರ. ○



ನವೆಂಬರ್ 14 : ಮಕ್ಕಳ ದಿನ ಆಚರಿಸಿದ್ದೇವೆ.

ಹೇಗಿದ್ದಾರೆ ನಮ್ಮ ಮಕ್ಕಳು?

(ಕರ್ನಾಟಕದ ಕೆಲವು ಅಂಕಿಅಂಶಗಳು)

1. ಹೆಣ್ಣು-ಗಂಡು ಲಿಂಗ ಅನುಪಾತ=945ಕ್ಕೆ 1000 (1991ರ ಜನಗಣತಿಗೆ ಹೋಲಿಸಿದಾಗ ಶೇ.11ರಷ್ಟು ಕುಸಿತ)
2. 18 ವರ್ಷಕ್ಕಿಂತ ಕಡಿಮೆ ವಯಸ್ಸಿನಲ್ಲಿ ಮದುವೆ ಮಾಡಲ್ಪಡುತ್ತಿರುವ ಯುವತಿಯರು ಶೇ. 31.4
3. ಹೆಣ್ಣು ಭ್ರೂಣ ಹತ್ಯೆ ಪ್ರಮಾಣ ಶೇ.31.4
4. ಶಿಶು ಮರಣ ಪ್ರಮಾಣ ಸಾವಿರಕ್ಕೆ 57
5. ತಾಯಿ ಹಾಲು ಕೊರತೆ ಅನುಭವಿಸುವ ಮಕ್ಕಳು ಶೇ.46
6. ಬೆಳವಣಿಗೆ ಕುಂಠಿತವಾದ ಮಕ್ಕಳ ಪ್ರಮಾಣ ಶೇ 38
7. ಕಡಿಮೆ ತೂಕ ಇರುವ ಮಕ್ಕಳ ಪ್ರಮಾಣ ಶೇ.41
8. ರಕ್ತ ಹೀನತೆಯಿಂದ ಬಳಲುತ್ತಿರುವ ಮಕ್ಕಳ ಪ್ರಮಾಣ ಶೇ.82.7
9. ಕಾಣೆಯಾಗಿರುವ ಮಕ್ಕಳ ಸಂಖ್ಯೆ:3,631, ಬೆಂಗಳೂರು ನಗರ ಒಂದರಲ್ಲಿ :2316
10. ಬಾಲ ಕಾರ್ಮಿಕರ ಸಂಖ್ಯೆ:39,300 ದಾವಣಗೆರೆ ನಗರ ಒಂದರಲ್ಲಿ 9,496

ಮೂಲ: ಮಕ್ಕಳ ಹಕ್ಕು ಪ್ರತಿಷ್ಠಾನ





ಕಾಲ ಕ್ಷಮಿಸುವುದಿ…

ಅಧಿಕಾರದ ಗದ್ದುಗೆಗಾಗಿ
ತತ್ವ ಸಿದ್ಧಾಂತಗಳ
ಗಾಳಿಗೆ ತೂರಿ
ನೆಲದ ಕಣ್ಣಿಗೆ ಮಣ್ಣುಗ್ಗಿ
ಹಸಿದ ಹೊಟ್ಟೆಗಳ
ಮೇಲೆ ಕಾಲಿಟ್ಟು
ಪಟ್ಟಕ್ಕೇರಿದ ನಿಮ್ಮನ್ನು
ಕಾಲ ಕ್ಷಮಿಸುವುದಿಲ್ಲ

ನಮ್ಮೆದೆಯ
ಆಶಾಗೋಪುರಗಳ ಕೆಡವಿ
ಕನಸುಗಳ ಕೊಂದು
ನರಕಾಸುರನ ನಗೆ
ನಗುತ್ತಿರುವ ನಿಮ್ಮನ್ನು
ಕಾಲ ಕ್ಷಮಿಸುವುದಿಲ್ಲ

ಉದ್ಯಾನನಗರಿಯ
ಹೂಬನಗಳಲ್ಲಿ
ಅರಳಿರುವ
ಹೂಗಳ ಚಿವುಟಿ
ಮುಳ್ಳು ಬಿತ್ತುವ
ನಿಮ್ಮ ಕೃತ್ಯವನ್ನು
ಕ್ಷಮಿಸುವುದಿಲ್ಲ ಕಾಲ

ದೀಪಾವಳಿಯ
ಬೆಳಕನು ಬಂಧಿಸಿ
ಕತ್ತಲೆಯ ಕೋಣೆಯ ಒಳಗೆ
ಕೂಡಿಡುವಿರಿನ್ನೆಷ್ಟು ದಿನ
ನೀವು ಹೆಣೆದಿರುವ
ಕತ್ತಲೆಯ ಪರದೆಯನು
ಕಾಲ ಸೂರ್ಯನಿಗೆ
ಅಡ್ಡ ಹಿಡಿದು
ನಿಲ್ಲುವಿರಿನ್ನೆಷ್ಟು ದಿನ

ಪಟ್ಟಕ್ಕೇರುವುದಕ್ಕಾಗಿ
ದತ್ತ ಪೀಠದ ಕೆಳಗೆ
ನೀವು ಹೂತು ಹಾಕಿರುವ
ಹೆಣಗಳೆಲ್ಲಾ ಎದ್ದು
ನಿಮಗೆ
ಉತ್ತರ ನೀಡುವ ಕಾಲ
ದೂರವೇನಿಲ್ಲ.

■ ಹುಲಿಕಟ್ಟಿ ಚನ್ನಬ…

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH